# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 15 ಗುರುವಾರ 2022

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 150 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com  ಜಾಹೀರಾತು: ad@mysurumithra.com

# ಜಂಬೂಸವಾರಿ ಮಾರ್ಗದ ಮರಗಳ ಟ್ರಿಮ್, ಫುಟ್‌ಪಾತ್ ದುರಸ್ತಿ ಕಾರ್ಯ ಆರಂಭ



ಫುಟ್‌ಪಾತ್‌ನಲ್ಲಿ ಹೊಡೆದು ಹೋಗಿರುವ ಸ್ಲಾಬ್‌ಗಳಬದಲಾಯಿಸಿ ಹೊಸ ಸ್ಲಾಬ್‌ಗಳ ಅಳವಡಿಸುತ್ತಿರುವುದು



ಜಂಬೂ ಸವಾರಿ ಸಾಗುವ ಮಾರ್ಗದ ಇಕ್ಕೆಲ್ಲಗಳಲ್ಲಿ ಚಾಚಿಕೊಂಡಿದ ರೆಂಬೆ ಕೊಂಬೆಗಳ ಕಟಾವು ಮಾಡುತ್ತಿರುವುದು

ಮೈಸೂರು, ಸೆ.14(ಜಿಎ)– ದಸರಾ ಜಂಬೂಸವಾರಿ ತೆರಳುವ ಮಾರ್ಗದಲ್ಲಿರುವ ಬೃಹತ್ ಮರಗಳ ರೆಂಬೆ ಕೊಂಬೆಗಳ ಕಟಾವು ಕಾರ್ಯ, ಫುಟ್‌ಪಾತ್‌ಗಳ ದುರಸ್ತಿ ಮತ್ತು ಪಂಜಿನ ಕವಾಯತ್ ಮೈದಾನದ ಸ್ವಚ್ಛತೆಯೂ ಭರದಿಂದ ಸಾಗಿದೆ. ಮೈಸೂರು ದಸರಾ ಮಹೋತ್ಸವಕ್ಕೆ ಕೆಲವೇ ದಿನಗಳಿದ್ದು, ಈ ಹಿನ್ನೆಲೆಯಲ್ಲಿ ಅರಮನೆಯಿಂದ ಬನ್ನಿಮಂಟಪದ ಮಾರ್ಗದುದ್ದಕ್ಕೂ ಇರುವ ಬೃಹತ್ ಮರಗಳ ರೆಂಬೆ ಕೊಂಬೆಗಳನ್ನು ಕತ್ತರಿಸಿ ಮತ್ತು ಫುಟ್‌ಪಾತ್ ದುರಸ್ತಿ ಕಾಮಗಾರಿಯನ್ನು ಪಾಲಿಕೆ ಆರಂಭಿಸಿದೆ.

ನವರಾತ್ರಿಯ ಒಂಬತ್ತು ದಿನಗಳು ಇಡೀ ಮೈಸೂರು ನಗರವು ನವ ವಧುವಿನಂತೆ ಶೃಂಗಾರಗೊಂಡು ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತದೆ. ಆದರೆ, ಕಳೆದ ಎರಡು ವರ್ಷಗಳಿಂದ ದಸರಾ ಮಹೋತ್ಸವ ಅರಮನೆಗೆ ಮಾತ್ರ ಸೀಮಿತವಾಗಿದ್ದರಿಂದ ಜಂಬೂಸವಾರಿ ಸಾಗುವ ಮಾರ್ಗದಲ್ಲಿ ಮತ್ತು ಪಂಜಿನ ಕವಾಯತ್ ಮೈದಾನದಲ್ಲಿ ಯಾವುದೇ ರೀತಿ ಸಿದ್ಧತೆಗಳನ್ನು ಮಾಡಿರಲಿಲ್ಲ. ಬೃಹತ್ ಮರಗಳ ರೆಂಬೆ ಕೊಂಬೆಗಳು ಅಡ್ಡಾದಿಡಿಯಾಗಿ ಬೆಳೆದು ರಸ್ತೆಯ ಇಕ್ಕೆಲ್ಲಗಳಲ್ಲಿ ಚಾಚಿಕೊಂಡಿದ್ದವು. ಇತ್ತ ಪಂಜಿನ ಕವಾಯತ್ ಮೈದಾನದಲ್ಲಿಯೂ ಗಿಡ–ಗಂಟಿಗಳು ಬೆಳೆದು ನಿಂತು ಅರಣ್ಯ ಪ್ರದೇಶದಂತೆ ಮಾರ್ಪಾಡಾಗಿತ್ತು. ಆದರೆ, ಈ ಬಾರಿ ಅದ್ಧೂರಿ ದಸರಾ ಜರುಗುತ್ತಿರುವ ಹಿನ್ನೆಲೆಯಲ್ಲಿ ಈ ಸ್ಥಳಗಳಲ್ಲಿ ಬಿರುಸಿನ ಕಾಮಗಾರಿಗಳು ನಡೆಯುತ್ತಿವೆ.

**ರೆಂಬೆ ಕೊಂಬೆಗಳ ಕಟಾವು :** ಜಂಬೂ ಸವಾರಿ ಸಾಗುವ ಚಾಮರಾಜ ಒಡೆಯರ್ ಸರ್ಕಲ್, ಆಲ್ಬರ್ಟ್ ವಿಕ್ಟರ್ ರೋಡ್, ಕೆ.ಆರ್.ಸರ್ಕಲ್, ಬಂಬೂ ಬಜಾರ್, ಹೈವೆ ಸರ್ಕಲ್ ಬನ್ನಿಮಂಟಪದ ಪಂಜಿನಕವಾಯತ್ ಮೈದಾನದವರೆಗೂ ಇರುವ ಬೃಹತ್ ಮರಗಳ ರೆಂಬೆ ಕೊಂಬೆಗಳು ಅಡ್ಡಾದಿಡಿಯಾಗಿ ಬೆಳೆದು ರಸ್ತೆಯ ಇಕ್ಕೆಲ್ಲಗಳಲ್ಲಿ ಚಾಚಿಕೊಂಡಿದವು. ಈ ಮಾರ್ಗದಲ್ಲಿ ಪಾಲಿಕೆ ತೋಟಗಾರಿಕೆ ಇಲಾಖೆಯ ಸಿಬ್ಬಂದಿ ರೆಂಬೆ ಕೊಂಬೆಗಳನ್ನು ತೆರವು ಮಾಡಲು ಕಳೆದ ಒಂದು ವಾರದಿಂದ ಆರಂಭಿಸಿದ್ದು, ಇಕ್ಕೆಲ್ಲಗಳಲ್ಲಿ ಚಾಚಿಕೊಂಡಿದ ರೆಂಬೆ ಕೊಂಬೆಗಳ ಕಟಾವು ಕಾರ್ಯವು ಬಹುತೇಕ ಮುಕ್ತಾಯದ ಹಂತದಲ್ಲಿದೆ.

**ಫುಟ್‌ಪಾತ್ ದುರಸ್ತಿ :** ಜಂಬೂ ಸವಾರಿಯ ದಿನದೊಂದು ಚಾಮರಾಜ ಒಡೆಯರ್ ಸರ್ಕಲ್, ಟೌನ್‌ಹಾಲ್, ರಾಜ್‌ಕುಮಾರ್ ಪಾರ್ಕ್, ವಿಷ್ಣುವರ್ಧನ್ ಪಾರ್ಕ್ ಸೇರಿದಂತೆ ಬನ್ನಿಮಂಟಪದವರೆಗಿನ ಹಾಕಿರುವ ಸ್ಲಾಬ್‌ಗಳು ಹೊಡೆದು ಹೋಗಿದ್ದವು. ಅದನ್ನು ಬದಲಾಯಿಸಿ ಹೊಸ ಸ್ಲಾಬ್‌ಗಳ ಅಳವಡಿಸುವ ಕಾರ್ಯವು ಇಂದಿನಿಂದ ಆರಂಭವಾದ್ದು, ಇದರೊಟ್ಟಿಗೆ ಫುಟ್‌ಪಾತ್ ದುರಸ್ತಿಗೆ ಸಂಬಂಧಿಸಿದ ಗಾರೆ ಕೆಲವು ನಡೆಯುತ್ತಿದೆ.

**ಪಂಜಿನ ಕವಾಯಿತ್‌ನಲ್ಲಿ ಪಾರ್ಕಿಂಗ್‌ಗೆ ಸಿದ್ಧತೆ :** ದಶಮಿಯಂದು ನಡೆಯುವ ಜಂಬೂ ಸವಾರಿ ಮೆರವಣಿಗೆ ಬನ್ನಿಮಂಟಪದಲ್ಲಿ ಮುಕ್ತಾಯದ ಬಳಿಕ ಇಲ್ಲಿನ ಮೈದಾನದಲ್ಲಿ ಮೈನವಿರೇಳಿಸುವ ಪಂಜಿನ ಕವಾಯತು ನಡೆಯುತ್ತದೆ. ಆ ಮೂಲಕ ದಸರಾ ಮಹೋತ್ಸವಕ್ಕೆ ಅದ್ಧೂರಿ ತೆರೆಬೀಳಲಿದ್ದು, ಅಲ್ಲಿಯೂ ಅಪಾರ ಸಂಖ್ಯೆಯ ಜನರು ಭಾಗವಹಿಸಲಿದ್ದಾರೆ. ಅದಕ್ಕಾಗಿ ಮುಡ ವತಿಯಿಂದ ಪಾರ್ಕಿಂಗ್ ಸ್ಥಳದಲ್ಲಿ ಬೆಳೆದಿದ್ದ ಗಿಡ ಗಂಟಿಗಳನ್ನು ತೆರವು ಮಾಡಿ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡುತ್ತಿದ್ದಾರೆ.



ಕಡಕೊಳ ಪಟ್ಟಣ ಪಂಚಾಯಿತಿಯಲ್ಲಿ ಶೇ.24.10 ರ ಯೋಜನೆಯಡಿ ಪೌರಕಾರ್ಮಿಕರು ಮತ್ತು ಅವರ ಕುಟುಂಬ ಸದಸ್ಯರಿಗೆ ಮೈಸೂರಿನ ಗೋಪಾಲ್ ಗೌಡ ಶಾಂತವೇರಿ ಸ್ಮಾರಕ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಬುಧವಾರ ಆರೋಗ್ಯ ತಪಾಸಣೆ ನಡೆಸಲಾಯಿತು. ಈ ವೇಳೆ ಮುಖ್ಯಾಧಿಕಾರಿ ಸಿ.ವೆಂಕಟೇಶ್, ಕಿರಿಯ ಆರೋಗ್ಯ ನಿರೀಕ್ಷಕ ನಾಗೇಶ್, ಸಿ.ಓ. ಮಹೇಶ್, ಡಿ.ಇ.ಓ ಶಿವಕುಮಾರ್ ಉಪಸ್ಥಿತರಿದ್ದರು.



ಕರ್ನಾಟಕ ಕ್ಷತ್ರಿಯ ಒಕ್ಕೂಟದ ರಾಜ್ಯಾಧ್ಯಕ್ಷ ಉದಯ ಸಿಂಗ್ ಹಾಗೂ ಕ್ಷತ್ರಿಯ ಒಕ್ಕೂಟದ ಮಹಿಳಾ ರಾಜ್ಯಾಧ್ಯಕ್ಷೆ ಉಮಾ ಮೂರ್ತಿರಾವ್ ಅವರು ವಕೀಲ ಹಾಗೂ ಶ್ರೀ ಲಕ್ಷ್ಮಿ ವಿವಿಧೋದ್ದೇಶ ಸಹಕಾರ ಸಂಘ ಉಪಾಧ್ಯಕ್ಷ, ಕರ್ನಾಟಕ ಕ್ಷತ್ರಿಯ ಒಕ್ಕೂಟದ ಮುಖಂಡ ಶಿವರಾಜ್‌ರಾವ್ ಅವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ರಾಜ್ಯ ಯುವ ಘಟಕದ ಪ್ರಧಾನ ಕಾರ್ಯದರ್ಶಿ ಗಣೇಶ್ ಲಾಳಿಗೆ, ಸತ್ಯಪ್ಪ ಇನ್ನಿತರರನ್ನು ಕಾಣಬಹುದು.

## ಶ್ರೀ ಲಕ್ಷ್ಮೀ ವಿವಿಧೋದ್ದೇಶ ಸಹಕಾರ ಸಂಘ

ಮೈಸೂರು, ಸೆ 14– ಶ್ರೀ ಲಕ್ಷ್ಮೀ ವಿವಿಧೋದ್ದೇಶ ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ಸೆ. 18 ರಂದು ಬೆಳಗ್ಗೆ 10.30 ಗಂಟೆಗೆ ಸಂಘದ ಆವರಣದಲ್ಲಿ ಸಂಘದ ಅಧ್ಯಕ್ಷ ಉಮಾ ಮಹೇಶ್ವರನ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

## ನಿಧನ



### ಇಂದ್ರಮ್ಮ

ಮೈಸೂರು, ಸೆ.14–ಚಲನಚಿತ್ರ ನಿರ್ಮಾಪಕರು ಹಾಗೂ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ (ಪಾಥಿ) ಅವರ ತಾಯಿ ಇಂದ್ರಮ್ಮ (87) ಬುಧವಾರ ಚಾಮುಂಡಿಪುರಂನ ಅವರ ನಿವಾಸದಲ್ಲಿ ನಿಧನರಾದರು. ಮೃತರು ಆರು ಮಂದಿ ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಜಿ.ಎಸ್.ಶಿವಪ್ರಸಾದ್



ಮೈಸೂರು, ಸೆ.14–ಮೈಸೂರಿನ ಹೆಬ್ಬಾಳು ಕೈಗಾರಿಕಾ ವಲಯದ ಸಿಪೆಟ್ ಸಂಸ್ಥೆಯ ಸಿಬ್ಬಂದಿ ಹಾಗೂ ಹೆಬ್ಬಾಳು ನಿವಾಸಿ ಜಿ.ಎಸ್. ಶಿವಪ್ರಸಾದ್ ಅವರು ಇಂದು ಬೆಳಗ್ಗೆ ತೀವ್ರ ಹೃದಯಾಘಾತದಿಂದ ನಿಧನರಾದರು. ಅವರಿಗೆ 52 ವರ್ಷ ವಯಸ್ಸಾಗಿತ್ತು. ಮೃತರು, ತಾಯಿ, ಪತ್ನಿ, ಪುತ್ರಿ, ಸಹೋದರ ಸೇರಿದಂತೆ ಅಪಾರ ಬಂಧು ವರ್ಗ, ಸ್ನೇಹಿತರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಶ್ರೀಮತಿ ಎನ್.ಸುಧಾ

ಮೈಸೂರು: ಮೈಸೂರು ನಗರದ ಬೋಗಾದಿ ಎಸ್.ಬಿ.ಎಂ ಬಡಾವಣೆಯ ನಿವಾಸಿ ಶ್ರೀಮತಿ ಎನ್.ಸುಧಾ (63 ವರ್ಷ) ಅವರು ಮಂಗಳವಾರ ನಿಧನರಾದರು. ಪತಿ ಕೃಷಿ ಇಲಾಖೆಯ ನಿವೃತ್ತ ಉಪ ನಿರ್ದೇಶಕರಾದ ತಿಮ್ಮದಾಸ್, ಮಕ್ಕಳು, ಅಳಿಯಂದಿರು ಹಾಗೂ ಅಪಾರ ಬಂಧು–ಬಳಗವನ್ನು ಮೃತರು ಅಗಲಿದ್ದಾರೆ. ಅವರ ಅಂತ್ಯಕ್ರಿಯೆಯು ಮಂಗಳವಾರವೇ ಬೋಗಾದಿ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮೈಸೂರು ಪಾಲಿಕೆ ಆವರಣದಲ್ಲಿ

# ಪೌರಕಾರ್ಮಿಕರ ಧರಣಿ

### ಬೇಡಿಕೆ ಈಡೇರದಿದ್ದರೆ ಜಂಬೂ ಸವಾರಿ ದಿನ ಕೆಲಸ ಸ್ಥಗಿತಗೊಳಿಸುವ ಎಚ್ಚರಿಕೆ



ಮೈಸೂರು, ಸೆ.14(ಆರ್‌ಕೆಬಿ)– ಖಾಯಂ ನೌಕರರಿಗೆ ಗೃಹಭಾಗ್ಯ ಯೋಜನೆಯಡಿ ಜಿ+3 ಮಾದರಿಯ ಮನೆಗಳನ್ನು ನಿರ್ಮಿಸಿಕೊಡಲು ಜಯನಗರ (ಮಳಲವಾಡಿ)ದಲ್ಲಿ ಮುಡಾ ವತಿಯಿಂದ ಒಂದು ಎಕರೆ 20 ಗುಂಟೆ ಜಮೀನು ಮಂಜೂರಾಗಿದ್ದು, ಸದರಿ ಸ್ಥಳದಲ್ಲಿಯೇ ಮನೆಗಳನ್ನು ನಿರ್ಮಿಸಿಕೊಡಬೇಕು. ಪಾಲಿಕೆಯ ನೇರ ಪಾವತಿಯಡಿ ಕೆಲಸ ನಿರ್ವಹಿಸುತ್ತಿದ್ದು, ಮೃತಪಟ್ಟಿರುವ ಹಾಗೂ ನಿವೃತ್ತಿ ಹೊಂದಿರುವ ಕುಟುಂಬಗಳಿಗೆ ಅನುಕಂಪದ ಆಧಾರದ ಮೇಲೆ ಕೆಲಸ ನೀಡಬೇಕು. ಮೃತರ ಕುಟುಂಬಗಳಿಗೆ 5 ಲಕ್ಷ ಪರಿಹಾರ ನೀಡಬೇಕು ಎಂಬಿತ್ಯಾದಿ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮೈಸೂರು ಮಹಾನಗರಪಾಲಿಕೆಯ ಪೌರಕಾರ್ಮಿಕರ ಒಕ್ಕೂಟದ ಆಶ್ರಯದಲ್ಲಿ ನೂರಾರು ಪೌರ ಕಾರ್ಮಿಕರು ಬುಧವಾರ ಮೈಸೂರು ನಗರಪಾಲಿಕೆ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಒಕ್ಕೂಟದ ಅಧ್ಯಕ್ಷ ಎನ್.ರಾಜ, ಪ್ರಧಾನ ಕಾರ್ಯದರ್ಶಿ ರಾಮಾಂಜನೇಯ ನೇತೃತ್ವದಲ್ಲಿ ನಡೆದ ಪ್ರತಿಭಟನೆ ವೇಳೆ ತಮ್ಮ ಬೇಡಿಕೆಗಳ ಶೀಘ್ರ ಈಡೇರಿಸದಿದ್ದರೆ ನಾಡಹಬ್ಬ ದಸರಾ ವಿಜಯದಶಮಿಯಂದು ಎಲ್ಲಾ ಸ್ವಚ್ಛತಾ ಕೆಲಸಗಳನ್ನು ಸ್ಥಗಿತಗೊಳಿಸುವ ಎಚ್ಚರಿಕೆ ನೀಡಿದರು. ಕೈಬಿಟ್ಟಿರುವ 48 ಹೆಚ್ಚುವರಿ ಪೌರಕಾರ್ಮಿಕರನ್ನು, ತಕ್ಷಣ ಮರು ನೇಮಕ ಮಾಡಬೇಕು. ಪಾಲಿಕೆಯಲ್ಲಿ ಕೇವಲ ಪೌರಕಾರ್ಮಿಕರಿಗೆ ಮಾತ್ರ ನಿಗದಿ ಮಾಡಿರುವ ಫೇಸ್ ರೆಕಗ್ನಿಷನ್ ಹಾಜರಾತಿಯನ್ನು, ಕೂಡಲೇ ರದ್ದು ಪಡಿಸಬೇಕು. ನೇರ ಪಾವತಿ ಪೌರ ಕಾರ್ಮಿಕರಿಗೆ ಒಳಚರಂಡಿ ಸಹಾಯಕ ಕಾರ್ಮಿಕರಿಗೆ ಹಾಗೂ ಸ್ವಚ್ಛತಾ ವಾಹನ ಚಾಲಕರಿಗೆ ಪಾಲಿಕೆಯ ಪರಿಶಿಷ್ಟ ಜಾತಿಯ ಶೇ.24ರ ಅನುದಾನದಲ್ಲಿ ಮನೆಗಳನ್ನು ನಿರ್ಮಿಸಿಕೊಡಬೇಕು. ನಗರಪಾಲಿಕೆ ಎದುರು ಪೌರಕಾರ್ಮಿಕರ ಪಿತಾಮಹ ರಾಷ್ಟ್ರನಾಯಕ ಐಪಿಡಿ ಸಾಲಪ್ಪ ಅವರ ಪುತ್ಥಳಿ ನಿರ್ಮಿಸಬೇಕು. ಸೆ.23ರಂದು ಅವರ ಜಯಂತಿ ಆಚರಿಸಬೇಕು.

ಕೇಂದ್ರ, ರಾಜ್ಯ ಸರ್ಕಾರಗಳ ಸಾರ್ವತ್ರಿಕ ಹಬ್ಬಗಳ 21 ದಿನ ರಜೆ ಮತ್ತು ವೇತನ ಖಾಯಂ ಪೌರಕಾರ್ಮಿಕರಿಗೆ ನೀಡುತ್ತಿದ್ದು, ಈ ಸೌಲಭ್ಯವನ್ನು ನೇರ ಪಾವತಿ ಪೌರ ಕಾರ್ಮಿಕರು, ಒಳಚರಂಡಿ ಸಹಾಯಕ ಕಾರ್ಮಿಕರಿಗೆ, ಸ್ವಚ್ಛತಾ ವಾಹನ ಚಾಲಕರಿಗೂ ನೀಡಬೇಕು. ದೂರದ ಊರುಗಳಿಂದ ಕೆಲಸಕ್ಕೆ ಬರುತ್ತಿರುವ ಮಹಿಳಾ ಪೌರಕಾರ್ಮಿಕರ ಅನುಕೂಲಕ್ಕಾಗಿ ನಗರದ ಎಲ್ಲಾ ವಾರ್ಡ್‌ಗಳಲ್ಲಿ ವಿಶ್ರಾಂತಿ ಕೊಠಡಿ ನಿರ್ಮಿಸಬೇಕು. ಪಾಲಿಕೆಯ ಒಕ್ಕೂಟದ ಸಂಘಕ್ಕೆ ಪಾಲಿಕೆ ಆವರಣದಲ್ಲಿ ಕಚೇರಿ ನೀಡಬೇಕು. ದಸರಾ ಹಬ್ಬದ ಮುಂಗಡ ಹಣ ರೂ.10 ಸಾವಿರ ಮೊತ್ತವನ್ನು ಖಾಯಂ ಪೌರ ಕಾರ್ಮಿಕರಿಗೆ ನೀಡುವ ರೀತಿ, ನೇರ ಪಾವತಿ ಪೌರಕಾರ್ಮಿಕರು, ಒಳಚರಂಡಿ ಪೌರಕಾರ್ಮಿಕರು ಮತ್ತು ಸ್ವಚ್ಛತಾ ವಾಹನ ಚಾಲಕರಿಗೂ ನೀಡಬೇಕು. ಪಾಲಿಕೆಯ ಒಳಚರಂಡಿ ವಿಭಾಗದಲ್ಲಿ ಕೆಲಸ ಮಾಡುತ್ತಿರುವ 231 ಒಳಚರಂಡಿ ನೌಕರರನ್ನು ಸಹಾಯಕ ನೌಕರರೆಂದು ಕರೆಯಲ್ಪಡುತ್ತಿದ್ದು, ಇವರನ್ನು ಮತ್ತು ಸ್ವಚ್ಛತಾ ವಾಹನ ಚಾಲಕರನ್ನು ಪೌರಕಾರ್ಮಿಕರೆಂದು ಪರಿಗಣಿಸಬೇಕು. ಖಾಯಂ ಪೌರಕಾರ್ಮಿಕರಿಗೆ ಸಂಕಷ್ಟ ಭತ್ಯೆ ಪರಿಹಾರ ರೂ. 2 ಸಾವಿರ ನೇರ ಪಾವತಿ ಸ್ವಚ್ಛತಾ ವಾಹನ ಚಾಲಕರಿಗೆ ಹಾಗೂ ಒಳಚರಂಡಿ ಸಹಾಯಕ ಪೌರ ಕಾರ್ಮಿಕರಿಗೆ ನೀಡಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಮೇಯರ್ ಪುರುಷೋತ್ತಮ್, ಪೌರಕಾರ್ಮಿಕರನ್ನು ಕಡೆಗಣಿಸಬಾರದು. ಬೇಡಿಕೆ ಕೂಡಲೇ ಈಡೇರಿಸದಿದ್ದರೆ ದಸರಾ ಸಂದರ್ಭದಲ್ಲಿ ಪೌರಕಾರ್ಮಿಕರು ಸ್ವಚ್ಛತಾ ಕೆಲಸಗಳನ್ನು ಸ್ಥಗಿತಗೊಳಿಸಲು ಮುಂದಾಗಬೇಕಾಗುತ್ತದೆ. ಹಾಗಾಗಿ ಸರ್ಕಾರ ಪೌರಕಾರ್ಮಿಕರ ಈ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಒಕ್ಕೂಟದ ಪದಾಧಿಕಾರಿಗಳಾದ ರಾಮು, ಎಂ.ವಿ.ವೆಂಕಟೇಶ್, ಸಣ್ಣಬೋರ, ನರಸಿಂಹ, ಮಂಚಯ್ಯ, ಎಸ್.ಎಂ.ಪಳನಿಸ್ವಾಮಿ, ಎಂ.ಕೆ. ಮಹದೇವ್, ದಿನೇಶ್‌ಕುಮಾರ್, ಶ್ರೀಧರ, ಚಿನ್ನಪ್ಪ, ಮಂಜು ಜಯಸಿಂಹ, ಅಭಯ ಮಂಜು, ಸಿ.ಕುಮಾರ್, ಚಂದ್ರಶೇಖರ್, ಶಿವಕುಮಾರ್, ಬಿ.ಸೋಮಯ್ಯ ಇನ್ನಿತರರು ಭಾಗವಹಿಸಿದ್ದರು. ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಉಪ ಆಯುಕ್ತೆ ರೂಪಾ, ಸಮಸ್ಯೆಗಳ ಬಗ್ಗೆ ಆಯುಕ್ತರು ಮತ್ತು ಸರ್ಕಾರದ ಗಮನ ಸೆಳೆಯುವುದಾಗಿ ಭರವಸೆ ನೀಡಿದರು.

### ಸರ್ಕಾರದ ಮಟ್ಟದಲ್ಲಿ ಸಮಸ್ಯೆ ಬಗೆಹರಿಸಿಕೊಡುವೆ

**ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಶಿವಣ್ಣ ಭರವಸೆ**

ಮೈಸೂರು, ಸೆ.14– ಪೌರಕಾರ್ಮಿಕರ ಬೇಡಿಕೆಗಳ ಬಗ್ಗೆ ತಾವು ಸರ್ಕಾರದ ಮಟ್ಟದಲ್ಲಿ ಮುಖ್ಯಮಂತ್ರಿಗಳ ಗಮನ ಸೆಳೆದು ಬಗೆಹರಿಸುವುದಾಗಿ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಭರವಸೆ ನೀಡಿದರು.

ಪೌರಕಾರ್ಮಿಕರ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಸಮಸ್ಯೆಗಳನ್ನು ಆಲಿಸಿದ ಬಳಿಕ ಮಾತನಾಡಿದ ಅವರು, ನಿಗದಿತ ಮಳಲವಾಡಿಯಲ್ಲಿ ಮಂಜೂರಾಗಿದ್ದ 1.20 ಎಕರೆ ಸ್ಥಳದಲ್ಲಿಯೇ ಮನೆಗಳನ್ನು ನಿರ್ಮಿಸಿಕೊಡಬೇಕು. ಆದರೆ ಇಲ್ಲಿಂದ ಕೆಸರೆಗೆ ಏಕೆ ವರ್ಗಾವಣೆಯಾಯಿತು ಎಂಬ ಬಗ್ಗೆ ತಾವು ವಿಚಾರಣೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಪೌರಕಾರ್ಮಿಕರಿಗೆ ಮೈಸೂರಿನ ನಾಲ್ಕು ಭಾಗಗಳಲ್ಲೂ ಮನೆಗಳನ್ನು ಕಟ್ಟಿಕೊಡುವ ವ್ಯವಸ್ಥೆಯಾಗಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡುವುದಾಗಿ ತಿಳಿಸಿದರು. ಇಲ್ಲಿ ಮನೆಗಳಿಗೋಸ್ಕರ ಗೃಹಭಾಗ್ಯ ಯೋಜನೆಯಲ್ಲಿ 22 ಕೋಟಿ ಮಂಜೂರಾಗಿದ್ದು, ಮನೆಗಳನ್ನು ಕಟ್ಟಿಕೊಡಲು ಏನೇನು ಕ್ರಮ ಕೈಗೊಳ್ಳಬೇಕೋ ಅದನ್ನು ಮಾಡುವುದಾಗಿ ತಿಳಿಸಿದರು.

ಪೌರಕಾರ್ಮಿಕರಿಗೆ ಸಾರ್ವಜನಿಕರ ಮಧ್ಯೆಯೇ ನಿವೇಶನ, ಮನೆಗಳನ್ನು ನೀಡುವಂತೆ ಐಪಿಡಿ ಸಾಲಪ್ಪನವರು ವರದಿ ನೀಡಿದ್ದು, ಪೌರಕಾರ್ಮಿಕರನ್ನು ದೂರ ಹಾಕುವುದನ್ನು ಯಾವ ಕಾರಣಕ್ಕೂ ಸಹಿಸಲಾಗದು. ಜನವಸತಿ ನಡುವೆಯೇ ನಿವೇಶನ, ಮನೆಗಳನ್ನು ನೀಡಬೇಕು. ಇದು ಮೈಸೂರಷ್ಟೇ ಅಲ್ಲ, ರಾಜ್ಯದ ಎಲ್ಲ ಕಡೆಗಳಲ್ಲಿ ಮಾಡುವಂತೆ ನಿರ್ದೇಶನ ನೀಡುವುದಾಗಿ ಹೇಳಿದರು.

ಪೌರಕಾರ್ಮಿಕರ ಖಾಯಮಾತಿ ಕುರಿತಂತೆ ಮುಖ್ಯಮಂತ್ರಿಗಳು ಸಮಿತಿಯ ಮೂರು ಸಭೆ ನಡೆಸಿದ್ದು, ಅಂತಿಮವಾಗಿ ಇಡೀ ರಾಜ್ಯದಲ್ಲಿ ಕೆಲಸ ಮಾಡುವ ಸ್ಥಳೀಯ ಸಂಸ್ಥೆಗಳ ಎಲ್ಲ ನೇರ ಪಾವತಿಯಡಿ ಕೆಲಸ ಮಾಡುವವರನ್ನು ಖಾಯಂ ಮಾಡುವ ಮಹತ್ವದ ನಿರ್ಧಾರವನ್ನು ಮುಖ್ಯಮಂತ್ರಿಗಳು ಕ್ಯಾಬಿನೆಟ್ ಮುಂದೆ ತಂದು ಮಾಡಲಿದ್ದಾರೆ ಎಂದು ತಿಳಿಸಿದರು. ಪೌರಕಾರ್ಮಿಕರಿಗೆ ಮೈಸೂರು ಒಂದೇ ಅಲ್ಲ ರಾಜ್ಯದ ಎಲ್ಲಾ ಕಡೆ ಪ್ರತಿ ವಾರ್ಡ್‌ನಲ್ಲೂ ವಿಶ್ರಾಂತಿ ಗೃಹ ನಿರ್ಮಿಸಿಕೊಡಲು ತಿಳಿಸಿದ್ದೇನೆ. ಪೌರಕಾರ್ಮಿಕರ ಪಿತಾಮಹ ಎಂದು ಕರೆಯಲ್ಪಡುವ ಐಪಿಡಿ ಸಾಲಪ್ಪನವರ ಜಯಂತಿಯನ್ನು ಸೆ.23ರಂದು ಆಚರಿಸಲು ತಿಳಿಸಿದ್ದು, ಪೌರ ಕಾರ್ಮಿಕರಿಗೆ ಗೌರವ, ಸನ್ಮಾನ ಮಾಡುವಂತೆ ತಿಳಿಸಿದ್ದೇನೆ ಎಂದರು. ಮೈಸೂರಿನ 231 ಮಂದಿ ಸೇರಿದಂತೆ ರಾಜ್ಯದ 544 ಜನ ಯುಜಿಡಿ ಕಾರ್ಮಿಕರಿಗೆ ಸರ್ಕಾರ ಆದಷ್ಟು ಶೀಘ್ರ ಮುಖ್ಯಮಂತ್ರಿಗಳು ಅನುಷ್ಠಾನಗೊಳಿಸಲಿದ್ದಾರೆ ಎಂದು ತಿಳಿಸಿದರು.

## ಹಿಂದಿ ದಿನ ಆಚರಣೆ ನೆಪದಲ್ಲಿ ಹಿಂದಿ ಹೇರಿಕೆ ಖಂಡಿಸಿ ಸರಣಿ ಪ್ರತಿಭಟನೆ

### ನ್ಯಾಯಪರ ವೇದಿಕೆ



ಮೈಸೂರು, ಸೆ.14(ಆರ್‌ಕೆಬಿ)– ಹಿಂದಿ ದಿವಸ ಆಚರಣೆ ನೆಪದಲ್ಲಿ ಕೇಂದ್ರ ಸರ್ಕಾರ ಕನ್ನಡಿಗರ ಮೇಲೆ ಬಲವಂತವಾಗಿ ಹಿಂದಿ ಹೇರಿಕೆಗೆ ಮುಂದಾಗಿರುವುದನ್ನು ಖಂಡಿಸಿ, ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆ ಕಾರ್ಯಕರ್ತರು ಬುಧವಾರ ಮೈಸೂರು ರೈಲ್ವೆ ನಿಲ್ದಾಣದ ಎದುರಿನ ಬಾಬು ಜಗಜೀವನರಾಂ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು, ಕೇಂದ್ರ ಸರ್ಕಾರ ಕೂಡಲೇ ಕನ್ನಡಿಗರ ಮೇಲೆ ಹಿಂದಿ ಏರಿಕೆಯನ್ನು ತಕ್ಷಣ ಕೈಬಿಡಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ವೇದಿಕೆ ರಾಜ್ಯಾಧ್ಯಕ್ಷ ಗಿರೀಶ್ ಶಿವಾರ್ಚಕ, ಪ್ರಧಾನ ಕಾರ್ಯದರ್ಶಿ ಪ್ರಕಾಶ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಮೈಸೂರು ಜಿಲ್ಲಾ ಕಾರ್ಮಿಕರ ಘಟಕದ ಅಧ್ಯಕ್ಷ ಸಂತೋಷ್, ನಗರಾಧ್ಯಕ್ಷ ಅರ್ಷದ್, ರಾಜ್ಯ ಲೋಕೇಶ್, ಮುಖಂಡರಾದ ದೇವು, ಪ್ರಕಾಶ್, ಚಾಮರಾಜನಗರ ಜಿಲ್ಲಾಧ್ಯಕ್ಷ ಸಚಿನ್ ದೀಕ್ಷಿತ್, ಜಗದೀಶ್, ಆಟೋ ಘಟಕದ ಅಧ್ಯಕ್ಷ ಚಂದ್ರು ರಷೀದ್, ಅಭಿ ಇನ್ನಿತರರು ಭಾಗವಹಿಸಿದ್ದರು.

### ಮೈಸೂರು ಕನ್ನಡ ವೇದಿಕೆ



ಮೈಸೂರು, ಸೆ.14(ಆರ್‌ಕೆಬಿ)–ರಾಜ್ಯ ಸರ್ಕಾರ ಜನತೆಯ ತೆರಿಗೆಯಿಂದ ಹಿಂದಿ ದಿವಸ ಆಚರಣೆ ಮಾಡುತ್ತಿರುವುದನ್ನು ಖಂಡಿಸಿ, ಮೈಸೂರು ಕನ್ನಡ ವೇದಿಕೆ ಕಾರ್ಯಕರ್ತರು ಬುಧವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು, ಹಿಂದಿ ಹೇರುವ ಪ್ರಯತ್ನ ನಡೆಸಿದರೆ ರಾಜ್ಯಾದ್ಯಂತ ಕನ್ನಡಿಗರು ಸಿಡಿದೇಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಸಚಿವ ಸಿ.ಟಿ.ರವಿ ಕರ್ನಾಟಕದಲ್ಲಿ ಹುಟ್ಟಿ, ಹಿಂದಿ ಭಾಷೆಗೆ ಹೆಚ್ಚು ಒತ್ತು ಕೊಡುತ್ತಿದ್ದಾರೆ. ಕೇಂದ್ರ ಸರ್ಕಾರಕ್ಕೆ ಹಿಂದಿ ಭಾಷೆಯನ್ನು ಹೆಚ್ಚು ಪ್ರಚಾರ ಮಾಡಿ, ಕನ್ನಡನಾಡಿನಲ್ಲಿ ಕನ್ನಡವನ್ನೇ ಕಡೆಗಣಿಸುತ್ತಿರುವ ಕೆಲಸ ಮಾಡುತಿದ್ದಾರೆ ಎಂದು ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕನ್ನಡ ಮತ್ತು ಕನ್ನಡಿಗರನ್ನು ಕಡೆಗಣಿಸಿ, ಹಿಂದಿ ಹೇರಿಕೆಯನ್ನು ಗೌರವಿಸುವ ಜನಪ್ರತಿನಿಧಿಗಳು ನಮಗೆ ಬೇಕಿಲ್ಲ. ಕೂಡಲೇ ಅವರು ಕರ್ನಾಟಕವನ್ನು ಬಿಟ್ಟು ಹಿಂದಿ ಭಾಷಿಕರ ರಾಜ್ಯಕ್ಕೆ ಹೋಗಲಿ ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಬೋಗಾದಿ ಸಿದ್ದೇಗೌಡ, ಎಲ್‌ಐಸಿ ಸಿದ್ದಪ್ಪ, ಗೋವಿಂದರಾಜು, ಅರವಿಂದ, ರಾಧಾಕೃಷ್ಣ, ಹರೀಶ್, ಪಾಪಣ್ಣ, ಸ್ವಾಮಿ ಗೈಡ್, ಬೀಡಾ ಬಾಬು, ಮಾದಪ್ಪ ರಮೇಶ್ ಇನ್ನಿತರರು ಭಾಗವಹಿಸಿದ್ದರು.

### ಜಾತ್ಯಾತೀತ ಜನತಾ ದಳ



ಮೈಸೂರು, ಸೆ.14(ಆರ್‌ಕೆಬಿ)– ಹಿಂದಿ ಹೇರಿಕೆ ವಿರೋಧಿಸಿ ಜಾತ್ಯತೀತ ಜನತಾದಳದ ಕಾರ್ಯಕರ್ತರು ಬುಧವಾರ ಮೈಸೂರಿನ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಜೆಡಿಎಸ್ ಮೈಸೂರು ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡರ ನೇತೃತ್ವದಲ್ಲಿ ಗಾಂಧಿ ಪುತ್ಥಳಿ ಬಳಿ ಜಮಾಯಿಸಿದ ಕಾರ್ಯಕರ್ತರು, ಕೇಂದ್ರ ಸರ್ಕಾರ ಕನ್ನಡಿಗರ ಮೇಲೆ ಹಿಂದಿ ಹೇರಿಕೆಗೆ ಮುಂದಾಗಿರುವುದನ್ನು ಖಂಡಿಸಿ, ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಮಾಜಿ ಮೇಯರ್‌ಗಳಾದ ಆರ್. ಲಿಂಗಪ್ಪ, ಎಂ.ಜೆ.ರವಿಕುಮಾರ್, ಭಾಗ್ಯವತಿ, ನಗರಪಾಲಿಕೆ ಸದಸ್ಯರಾದ ಎಸ್‌ಬಿಎಂ ಮಂಜು, ಮಾಜಿ ಕಾರ್ಪೊರೇಟರ್ ಕೆ.ವಿ.ಮಲ್ಲೇಶ್, ಮಾಜಿ ಉಪ ಮೇಯರ್ ಕೃಷ್ಣ, ಮುಖಂಡರಾದ ಫಾಲ್ಕನ್ ಬೋರೇಗೌಡ, ಗಂಗಾಧರಗೌಡ, ಪ್ರಕಾಶ್, ಪ್ರಿಯದರ್ಶಿನಿ, ಎನ್.ಆರ್.ಕ್ಷೇತ್ರದ ಅಧ್ಯಕ್ಷ ರಾಮು, ಯುವ ಜನತಾದಳ ಅಧ್ಯಕ್ಷ ಲೋಕೇಶ್, ಉಪಾಧ್ಯಕ್ಷ ರಾಮು, ಮಹಿಳಾ ಮುಖಂಡರಾದ ಲಕ್ಷ್ಮಿ ಇನ್ನಿತರರು ಉಪಸ್ಥಿತರಿದ್ದರು.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, 6.50 ರೈತರಿಗೆ ಸಲಹೆ, 10.00 ಕೆ.ಎಸ್. ಹೇರಂಭ ಮತ್ತು ಕೆ.ಎಸ್. ಹೇಮಂತ್–ಯುಗಳ ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

**ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ. ಮೀನಾ, 1.20 ಭಾವಗೀತೆ, 3.00 ರಾಗಲಹರಿ, ಪ್ರಸ್ತುತಿ– ಜಿ.ಪುಷ್ಪಲತಾ, ನಿರ್ಮಾಣ– ಎಸ್.ಸುಬ್ರಹ್ಮಣ್ಯ, 4.00ಹಳ್ಳಿಹಾಡು–ರುದ್ರಶೆಟ್ಟಿ ಮತ್ತು ಸಂಗಡಿಗರು, 6.50 ಕೃಷಿರಂಗ–ಕಿಸಾನ್‌ವಾಣಿ, 9.00 ಯುವವಾಣಿ–ಹಲೋ ಯುವವಾಣಿ, ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಿಶೇಷ ರಸಪ್ರಶ್ನೆ ಕಾರ್ಯಕ್ರಮ. ನಡೆಸಿಕೊಡುತ್ತಾರೆ ನಿವೇದಿತಾ ಹೆಚ್., 9.30 ಕನ್ನಡ ಭಾರತಿ, 10.30 ಸವಿನೆನಪು

### ಇಂದಿನ ಪಂಚಾಂಗ

15.09.2022 ಗುರುವಾರ, ಮಳೆ ನಕ್ಷತ್ರ: ಉತ್ತರ 14.09.2022 ರಿಂದ 26.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ : ಪಂಚಮಿ, ನಕ್ಷತ್ರ : ಭರಣಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹಿಮ್ಮಡಿ, ಪಾದದಲ್ಲಿ ನೋವು–ಉರಿ–ಊತದ ಬಗ್ಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಪ್ರಕೃತಿ ಆಯುರ್ವೇದ ಪ್ರತಿಷ್ಠಾನ :** ಆರೋಗ್ಯ ತಪಾಸಣೆ ಶಿಬಿರ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ದಟ್ಟಗಳ್ಳಿ 3ನೇ ಹಂತ, ನೇತಾಜಿ ಸರ್ಕಲ್, ಬೆಳಗ್ಗೆ 10 ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ವಾಣಿ ವಿಲಾಸ ರಸ್ತೆ, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಶ್ರೀ ಗಂಗಾ ಚಾರಿಟಬಲ್ ಟ್ರಸ್ಟ್ :** ಉಚಿತ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ, ಉಪಸ್ಥಿತರು : ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಸಹಾಯಕ ನಿರ್ದೇಶಕ ಡಾ. ನಾಗರಾಜು, ಪಶುಸಂಗೋಪನೆ ಇಲಾಖೆ ಸಹಾಯಕ ನಿರ್ದೇಶಕ ಡಾ. ಶಿವಲಿಂಗಯ್ಯ, ಕೃಷಿ ಇಲಾಖೆ ಸಹಾಯಕ ನಿರ್ದೇಶಕರಾದ ಡಾ. ಹೆಚ್.ಬಿ. ಮಧುಲತಾ, ಕೃಷಿ ಅಧಿಕಾರಿ ಪಿ.ಎನ್. ವೆಂಕಟೇಶ, ನಿವೃತ್ತ ಸಹಾಯಕ ತೋಟಗಾರಿಕೆ ಅಧಿಕಾರಿ ಎಂ. ಮರೀಗೌಡ, ಸ್ಥಳ: ಟ್ರಸ್ಟ್ ಆವರಣ, ದಿವಾನ್ಸ್ ರಸ್ತೆ, ಬೆಳಗ್ಗೆ 11 ರಿಂದ.

■ **ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್, ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 107ನೇ ಜಯಂತಿ ಮಹೋತ್ಸವ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯದರ್ಶಿ ಪ್ರೊ. ಎಸ್.ಪಿ. ಮಂಜುನಾಥ್, ನುಡಿ ನಮನ : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಡಿ.ಎಸ್. ಸದಾಶಿವಮೂರ್ತಿ, ಅಧ್ಯಕ್ಷತೆ : ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕ ಡಾ. ಎನ್.ಪಿ. ನಟರಾಜ, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಭವನ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11ಕ್ಕೆ

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಜನ್ಮೋತ್ಸವ–ಒಂದು ನೆನಪು ಕಾರ್ಯಕ್ರಮ, ಉದ್ಘಾಟನೆ : ಸರ್ಕಾರಿ ಮಹಾರಾಣಿ ಪ್ರಶಿಕ್ಷಣ ಸಂಸ್ಥೆ ಪ್ರಾಂಶುಪಾಲ ಬಿ.ವಿ. ನಂಜುಂಡಸ್ವಾಮಿ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಅವರಿಂದ ವಿಶೇಷ ಉಪನ್ಯಾಸ, ಮುಖ್ಯ ಅತಿಥಿಗಳು : ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಗೌರವಾಧ್ಯಕ್ಷ ಎಸ್. ರಾಮಪ್ರಸಾದ್, ಸ್ಥಳ: ಸರ್ಕಾರಿ ಮಹಾರಾಣಿ ಪ್ರಶಿಕ್ಷಣ ಸಂಸ್ಥೆ, ನಾರಾಯಣ ಶಾಸ್ತ್ರಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಹೇಮಾವತಿ ವಿದ್ಯಾಸಂಸ್ಥೆ, ಹಿರಣ್ಮಯಿ ಪ್ರತಿಷ್ಠಾನ :** ಸರ್ ಎಂ. ವಿಶ್ವೇಶ್ವರಯ್ಯ ಜನ್ಮ ದಿನಾಚರಣೆ, ಅಧ್ಯಕ್ಷತೆ : ವಿದ್ಯಾಸಂಸ್ಥೆ ಕಾರ್ಯದರ್ಶಿ ಸಂತೋಷ್ ಆರ್. ಬಾಬು, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಬಹುಮಾನ ವಿತರಣೆ : ಸಂಸ್ಥೆ ನಿರ್ದೇಶಕರಾದ ರಾಧಿಕಾಗೌಡ ಆರ್. ಸಂತೋಷ್, ಪ್ರಾಸ್ತಾವಿಕ ಭಾಷಣ : ಹಿರಣ್ಮಯಿ ಪ್ರತಿಷ್ಠಾನದ ಎ. ಸಂಗಪ್ಪ, ಸ್ಥಳ: ಹೇಮಾವತಿ ವಿದ್ಯಾಸಂಸ್ಥೆ, ಮಧ್ಯಾಹ್ನ 2.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಇಂಜಿನಿಯರ್ಸ್ ಡೇ ಮತ್ತು ಸರ್ ಎಂ. ವಿಶ್ವೇಶ್ವರಯ್ಯ ಜನ್ಮ ದಿನಾಚರಣೆ, ಮುಖ್ಯ ಅತಿಥಿಗಳು : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಂಸ್ಥೆ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 15 ಗುರುವಾರ 2022

ಸಂಪುಟ: 43 | ಸಂಚಿಕೆ: 150 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4




## ಕೆಆರ್, ಚೆಲುವಾಂಬ, ಪಿಕೆಟಿಬಿ ಆಸ್ಪತ್ರೆಯ ಕಟ್ಟಡಗಳ ನವೀಕರಣಕ್ಕೆ

# 89.50 ಕೋಟಿ ಅನುದಾನ



"ಬಜೆಟ್‌ನಲ್ಲಿ ಘೋಷಣೆಯಾಗಿದ್ದ ಕೆಆರ್ ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ನವೀಕರಣಕ್ಕೆ 89.50 ಕೋಟಿ ರೂ. ನೀಡಲು ಬುಧವಾರ ಸಂಪುಟ ಒಪ್ಪಿಗೆ ನೀಡಿದೆ. ಇದಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ. ಸೋಮಶೇಖರ್ ಮತ್ತು ಬಹುವಾಗಿ ಶ್ರಮಿಸಿದ ಶಾಸಕರಾದ ಎಲ್. ನಾಗೇಂದ್ರರಿಗೆ ಅನಂತ ಧನ್ಯವಾದಗಳು.

–ಪ್ರತಾಪ್ ಸಿಂಹ, ಸಂಸದ.

ಬೆಂಗಳೂರು, ಸೆ. 14– ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿ&ಆರ್‌ಐ) ಅಧೀನಕ್ಕೆ ಒಳಪಟ್ಟಿರುವ ಕೆಆರ್ ಆಸ್ಪತ್ರೆ ಚೆಲುವಾಂಬ ಆಸ್ಪತ್ರೆ ಮತ್ತು ಪಿಕೆಟಿಬಿ ಆಸ್ಪತ್ರೆಯ ಒಟ್ಟು 14 ಕಟ್ಟಡಗಳ ನವೀಕರಣಕ್ಕೆ ಇಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಯಿತು. ಈ ಕಟ್ಟಡಗಳ ನವೀಕರಣಕ್ಕೆ ಸಂಬಂಧಿಸಿದಂತೆ 2018–19ರ ಸಾಲಿನ ಲೋಕೋಪಯೋಗಿ ಇಲಾಖೆ ಮೈಸೂರು ವೃತ್ತದ ದರಪಟ್ಟಿ ಮತ್ತು 2019–20ನೇ ಸಾಲಿನ ವಿದ್ಯುತ್ ದರಪಟ್ಟಿಯನ್ವಯ ▶ 9ನೇ ಪುಟಕ್ಕೆ

## ಕರ್ನಾಟಕದ ಬೆಟ್ಟ ಕುರುಬ ಜನಾಂಗ ಪರಿಶಿಷ್ಟ ಪಂಗಡಕ್ಕೆ

● ಕೇಂದ್ರ ಸಚಿವ ಸಂಪುಟ ಅಸ್ತು ● ಪ್ರಧಾನಿ ಮೋದಿಗೆ ಬಿಎಸ್‌ವೈ ಅಭಿನಂದನೆ

ನವದೆಹಲಿ, ಸೆ.14– ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಇಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕದ ಬೆಟ್ಟ ಕುರುಬ ಜನಾಂಗ ಸೇರಿದಂತೆ ಒಟ್ಟು 12 ಜಾತಿಗಳನ್ನು ಪರಿಶಿಷ್ಟ ಪಂಗಡಗಳ ವರ್ಗಕ್ಕೆ ಸೇರ್ಪಡೆಗೊಳಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಈ ಸಂಬಂಧ ಕರ್ನಾಟಕ ಸರ್ಕಾರ ಮಾಡಿದ್ದ ಶಿಫಾರಸ್ಸನ್ನು ಕೇಂದ್ರ ಸಚಿವ ಸಂಪುಟ ಇದೀಗ ಅನುಮೋದಿಸಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಟ್ವೀಟ್ ಮೂಲಕ ಮಾಹಿತಿ ನೀಡಿದ್ದಾರೆ.

ಚಾಮರಾಜನಗರ, ಕೊಡಗು, ಮೈಸೂರು ಜಿಲ್ಲೆಗಳ ಅಂಚಿನಲ್ಲಿ ಬೆಟ್ಟ ಕುರುಬ ಜನಾಂಗ ನೆಲೆಸಿತ್ತು. ಕಾರಣಾಂತರಗಳಿಂದ ಈ ಜನಾಂಗದವರನ್ನು ಒಕ್ಕಲೆಬ್ಬಿಸಲಾಗಿತ್ತು. ಪರಿಶಿಷ್ಟ ವರ್ಗಕ್ಕೆ ಸೇರ್ಪಡೆಗೊಳಿಸುವಂತೆ ▶ 9ನೇ ಪುಟಕ್ಕೆ




# ಆಡಳಿತದಲ್ಲಿ ಕನ್ನಡ ಕಡ್ಡಾಯ

● ವಿಧಾನಸಭೆಯಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ಘೋಷಣೆ
● ಪ್ರಸಕ್ತ ಅಧಿವೇಶನದಲ್ಲಿ ಈ ಸಂಬಂಧ ಮಸೂದೆ ಮಂಡನೆ
● ಹಿಂದಿ ದಿವಸ್ ಸಂಬಂಧ ವಿಪಕ್ಷ ನಾಯಕರ ವಿರೋಧ; ಕನ್ನಡದ ಬಗ್ಗೆ ಬದ್ಧತೆ ಪ್ರದರ್ಶಿಸಲು ಆಗ್ರಹ



ಬೆಂಗಳೂರು, ಸೆ.14 (ಕೆಎಂಶಿ)– ಆಡಳಿತದಲ್ಲಿ ಕನ್ನಡವನ್ನು ಕಡ್ಡಾಯಗೊಳಿಸುವ ಐತಿಹಾಸಿಕ ನಿರ್ಧಾರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನ ಸಭೆಯಲ್ಲಿಂದು ಪ್ರಕಟಿಸಿದ್ದಾರೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಹೆಚ್.ಡಿ.ಕುಮಾರಸ್ವಾಮಿ ಮತ್ತು ಆ ಪಕ್ಷದ ಸದಸ್ಯರು ಶೂನ್ಯ ವೇಳೆಯಲ್ಲಿ ಹಿಂದಿ ದಿವಸ್ ಆಚರಣೆಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿ, ಕರ್ನಾಟಕದಲ್ಲಿ ಕನ್ನಡದ ಸ್ಥಾನಮಾನದ ಬಗ್ಗೆ ಸರ್ಕಾರ ತನ್ನ ಬದ್ಧತೆಯನ್ನು ಪ್ರದರ್ಶಿಸಬೇಕೆಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿದ ಮುಖ್ಯಮಂತ್ರಿಯವರು, ಪ್ರಸಕ್ತ ವಿಧಾನಮಂಡಲ ಅಧಿವೇಶನದಲ್ಲೇ ಆಡಳಿತದಲ್ಲಿ ಕನ್ನಡವನ್ನು ಕಡ್ಡಾಯಗೊಳಿಸುವ ಸಂಬಂಧ ಮಸೂದೆಯನ್ನು ಮಂಡಿಸುವುದಾಗಿ ತಿಳಿಸಿದ ಅವರು, ಈ ಮಸೂದೆಯ ಮೂಲಕ ಎಲ್ಲ ಹಂತದಲ್ಲಿ ಕನ್ನಡವನ್ನು ಕಡ್ಡಾಯಗೊಳಿಸುವ ಕಾನೂನಾತ್ಮಕ ಶಕ್ತಿ ದೊರೆಯಲಿದೆ ಎಂದರು.

ಇದುವರೆಗೂ ಆಡಳಿತದಲ್ಲಿ ಕನ್ನಡವನ್ನು ಕಡ್ಡಾಯ ಮಾಡಬೇಕು ಎಂಬ ಸಂಬಂಧ ನಿರಂತರ ಕೂಗುಗಳು ಕೇಳುತ್ತಿದ್ದವು. ಇದಕ್ಕೆ ಸಂಬಂಧಿಸಿದಂತೆ ಸಮಿತಿಗಳು, ಪ್ರಾಧಿಕಾರಗಳು ರಚನೆಯಾಗಿದ್ದವು. ಆದರೆ ಕನ್ನಡವನ್ನು ಕಡ್ಡಾಯ ಮಾಡುವ ಕಾನೂನಿನ ಸ್ವರೂಪ ಇರಲಿಲ್ಲ.

ಆದರೆ ಈಗ ಆಡಳಿತದಲ್ಲಿ ಕನ್ನಡವನ್ನು ಕಡ್ಡಾಯಗೊಳಿಸುವ ಮೂಲಕ ಕನ್ನಡ ನಾಡಿನ, ಕನ್ನಡ ಭಾಷಿಕರ ಹಿತಾಸಕ್ತಿಯನ್ನು ರಕ್ಷಿಸುವುದಾಗಿ ಹೇಳಿದ ಅವರು, ಇದೇ ಸಂದರ್ಭದಲ್ಲಿ ಪರಭಾಷಿಕರೂ ಕನ್ನಡ ಕಲಿಯುವಂತೆ ಒತ್ತಾಯಿಸುವ, ಒತ್ತಾಸೆ ನೀಡುವ ಕೆಲಸವೂ ನಡೆಯಲಿದೆ ಎಂದರು. ಕರ್ನಾಟಕದಲ್ಲಿ ಕನ್ನಡವೇ ಅಗ್ರಗಣ್ಯ ಭಾಷೆ. ಅದನ್ನು ▶ 9ನೇ ಪುಟಕ್ಕೆ

### ದಸರಾ ಮಹೋತ್ಸವ–2022

## ನಾಳೆಯಿಂದ ಯುವ ಸಂಭ್ರಮ: ಡಾಲಿ ಧನಂಜಯ ತಾರಾ ಮೆರಗು

● ರಾಜ್ಯಾದ್ಯಂತ 253 ಕಾಲೇಜು ತಂಡ ಭಾಗಿ ● ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ಯುವ ಉತ್ಸಾಹ



ಯುವ ಸಂಭ್ರಮ ಹಾಗೂ ಯುವ ದಸರಾ ಉಪಸಮಿತಿ ವಿಶೇಷಾಧಿಕಾರಿ ಆರ್.ಚೇತನ್, ಕಾರ್ಯಾಧ್ಯಕ್ಷ ಎನ್.ಸಿ.ವೆಂಕಟರಾಜು, ಕಾರ್ಯದರ್ಶಿಗಳಾದ ಅಸದ್ ರೆಹಮಾನ್ ಷರೀಫ್ ಹಾಗೂ ನಿಂಗರಾಜು ಸುದ್ದಿಗೋಷ್ಠಿ ವೇಳೆ 'ಯುವ ಸಂಭ್ರಮ' ಆಹ್ವಾನ ಪತ್ರಿಕೆ ಪ್ರದರ್ಶಿಸಿದರು.



ಮೈಸೂರು, ಸೆ.14(ಎಸ್‌ಬಿಡಿ)– ಮೈಸೂರು ದಸರಾ ಮಹೋತ್ಸವದ 'ಯುವ ಸಂಭ್ರಮ' ಸೆ.16 ರಿಂದ ಆರಂಭವಾಗಲಿದ್ದು, ಉದ್ಘಾಟನೆ ವೇಳೆ ಗಣ್ಯರೊಂದಿಗೆ ನಟ ಡಾಲಿ ಧನಂಜಯ ಭಾಗಿಯಾಗಿ ತಾರಾ ಮೆರಗು ನೀಡಲಿದ್ದಾರೆ. ನವರಾತ್ರಿ ಉತ್ಸವದ ಹೊಸ್ತಿಲಲ್ಲಿ ಸಾಂಸ್ಕೃತಿಕ ಸಡಗರವನ್ನು ಕಳೆಗಟ್ಟುವ 'ಯುವ ಸಂಭ್ರಮ', 2 ವರ್ಷಗಳ ಬಳಿಕ ▶ 9ನೇ ಪುಟಕ್ಕೆ













## ನಕ್ಕರೆ ಅದೇ ಸ್ವರ್ಗ

ಮಾಲಿ : ಸ್ವಾಮಿ, ಇನ್ನೂ ಮೂರು ಬಕೆಟ್ ಕೊಂಡ್ಕೋಬೇಕು

ಯಜಮಾನ : ಯಾಕಯ್ಯಾ?

ಮಾಲಿ : ತೆಂಗಿನ ಗಿಡಕ್ಕೆ ದಿನಕ್ಕೆ ನಾಲ್ಕು ಬಕೆಟ್ ನೀರು ಹಾಕಿ ಅಂತ ಹೇಳಿದ್ರಿ, ಆದ್ರೆ ಮನೇಲಿರೋದು ಒಂದೇ ಬಕೆಟ್!

ಮೈಸೂರು ಮಿತ್ರ
ಗುರುವಾರ, 15 ಸೆಪ್ಟೆಂಬರ್ 2022
ಸತ್ಯೇನೋತ್ತಭಿತಾ ಭೂಮಿಃ! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

### ಅಮೃತವಾಹಿನಿ

ಸಾಹಿತ್ಯ, ಸಂಸ್ಕೃತಿಗಳ ಒಲವಿಲ್ಲದ ಜನರು ಸುಖಿ, ಸಂತೋಷದಿಂದ ಜೀವಿಸಲಾರರು. –ಬರ್ನಾರ್ಡ್ ಷಾ

### ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅಜೀರ್ಣಕ್ಕೆ ಔಷಧಿ ತೆಗೊಂಡ್ರೆ ಔಷಧಿನೇ ಜೀರ್ಣವಾಗಲಿಲ್ಲ

## ನಿಮ್ಮ ಪತ್ರಗಳು

### ಗ್ರಾಹಕರಿಗೆ ಹೊರೆಯಾಗದಂತೆ ಅಂದ್ರೆ...?

ಮಾನ್ಯರೆ,

ಕೆಲ ದಿನಗಳ ಹಿಂದಷ್ಟೇ ಹಾಲು ಒಕ್ಕೂಟಗಳು ಹೈನೋತ್ಪನ್ನಗಳಾದ ಪೇಡಾ, ಮೈಸೂರು ಪಾಕ್, ತುಪ್ಪ ಮತ್ತಿತರ ಪದಾರ್ಥಗಳ ದರವನ್ನು ತೀವ್ರವಾಗಿ ಏರಿಸಿ ಗ್ರಾಹಕರಿಗೆ ಬಿಸಿ ಮುಟ್ಟಿಸಿದ್ದವು. ಇದೀಗ ಮತ್ತೊಮ್ಮೆ ಕರ್ನಾಟಕ ಹಾಲು ಮಂಡಳಿ ಹಾಲಿನ ಗ್ರಾಹಕರಿಗೆ ಹಾಲಿನ ದರ ಏರಿಕೆಯ ಶಾಕ್ ನೀಡಲು ನಿರ್ಧರಿಸಿದೆ. ಹಾಲು ಉತ್ಪಾದಕರ ಹಿತವನ್ನೇ ಮುಂದಿಟ್ಟುಕೊಂಡು, ಗ್ರಾಹಕರಿಗೆ ಹೊರೆಯಾಗದಂತೆ ಎಂದು ಹೇಳುವ ಮಂಡಳಿ ಮತ್ತು ಸರ್ಕಾರಕ್ಕೆ ಬೆಲೆ ಏರಿಕೆಯಲ್ಲಿ ಯಾವುದೇ ವ್ಯತ್ಯಯವಾದರೂ ಅದರಿಂದ ಗ್ರಾಹಕನಿಗೆ ಹೊರೆ ಎಂಬುದನ್ನೇ ಮರೆತಂತಿದೆ. ಹಾಲಿನ ಬೆಲೆ ಲೀಟರಿಗೆ ನಾಲ್ಕೋ ಅಥವಾ ಮೂರೋ ಜಾಸ್ತಿಯಾದರೂ, ಮತ್ತೊಮ್ಮೆ ಉಪ ಉತ್ಪನ್ನಗಳ ಬೆಲೆ ಜಾಸ್ತಿಯಾಗುವುದಿಲ್ಲವೇ? ಈಗಾಗಲೇ ಒಂದು ಕಪ್ ಕಾಫಿ ಟೀಗೆ ಹದಿನೈದರಿಂದ ಇಪ್ಪತ್ತು ರೂ ಇದ್ದು, ಹಾಲನ್ನು ಆಧರಿಸಿ ಮಾಡುವ ಸಿಹಿ ಖಾದ್ಯಗಳು, ತಿಂಡಿಗಳ ಬೆಲೆಯನ್ನು ಖಾಸಗಿ ಹೋಟೆಲ್‌ನವರು ಮತ್ತೆ ಜಾಸ್ತಿ ಮಾಡುವುದಿಲ್ಲವೇ? ಹೀಗೆ ಒಂದರ ಹಿಂದೆ ಮಗದೊಂದು ಏರಿಕೆಯಾಗುತ್ತಿದ್ದರೆ, ಇದು ಗ್ರಾಹಕರಿಗೆ ಹೊರೆಯಾಗುವುದಿಲ್ಲವೇ? ಮಂಡಳಿ ತನ್ನ ಅಧೀನ ಸಂಸ್ಥೆಗಳಿಗೆ ತಾನೇ ಸೂಚನೆ ಮತ್ತು ಠರಾವಿನ ಮಾದರಿ ಕಳುಹಿಸಿ, ನಂತರ ಹಾಲು ಉತ್ಪಾದಕರ ಒತ್ತಾಯ ಎಂದು ಹೇಳುತ್ತಾ, ಮತ್ತೊಂದೆಡೆ ಗ್ರಾಹಕರಿಗೆ ಹೊರೆಯಾಗದಂತೆ ಎನ್ನುವುದು ಎಷ್ಟರ ಮಟ್ಟಿಗೆ ಸರಿ?

–ವಿಜಯ್ ಹೆಮ್ಮಿಗೆ, ಮೈಸೂರು.

### ಪ್ರತಿ ದಿನವೂ ಗ್ರಂಥಾಲಯ ತೆರೆಯಿರಿ




ಮಾನ್ಯರೆ,

ಮೈಸೂರಿನ ಗ್ರಂಥಾಲಯಗಳು ವಾರದಲ್ಲಿ ಐದು ದಿನಗಳು ಮಾತ್ರ ತೆಗೆದಿರುತ್ತವೆ. ಅದರಲ್ಲೂ ನಾಲ್ಕನೇ ಶನಿವಾರ, ಎರಡನೇ ಮಂಗಳವಾರ ಮತ್ತು ಸರ್ಕಾರಿ ರಜೆ ಬೇರ್ಪಡಿಸಿ ಕೆಲವು ದಿನಗಳು ಮಾತ್ರ ಗ್ರಂಥಾಲಯ ತೆರೆದಿರುತ್ತದೆ. ಪ್ರತಿದಿನವು ಹೆಚ್ಚು ಜನರು, ವಿದ್ಯಾರ್ಥಿಗಳು ಓದಲು ಬರುತ್ತಾರೆ. ಆದ್ದರಿಂದ ದಯವಿಟ್ಟು ಸರ್ಕಾರಿ ರಜೆ ಬಿಟ್ಟು ಬೇರೆಲ್ಲಾ ದಿನವೂ ಗ್ರಂಥಾಲಯವನ್ನು ತೆಗೆದು ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

– ಮಹಾಂತೇಶ್.ಬಿ ಬಳ್ಳೂರುಹುಂಡಿ. ನಂಜನಗೂಡು ತಾ॥

### ನಗರಪಾಲಿಕೆ ಸದಸ್ಯರ ಶ್ಲಾಘನೀಯ ಕೆಲಸ!

ಮಾನ್ಯರೆ,

ಮೈಸೂರಿನ ವಿ.ವಿ.ಮೊಹಲ್ಲಾದ 2ನೇ ಮುಖ್ಯರಸ್ತೆಯ ಹಿಂದೆ ಇರುವ ಕನ್ಸರ್‌ವೆನ್ಸಿಯಲ್ಲಿ ಸಾಕಷ್ಟು ಗಿಡ, ಗಂಟಿಗಳು ಬೆಳೆದು ನಿಂತಿತ್ತು. ಜೊತೆಗೆ ಹುಲ್ಲುಗಳು ಬೃಹದಾಕಾರವಾಗಿ ಬೆಳೆದು ಪರಿಸರ ಅನೈರ್ಮಲ್ಯದಿಂದ ಕೂಡಿತ್ತು. ಇದನ್ನು ಗಮನಿಸಿದ ವಾರ್ಡ್ ನಂ.19ರ ಪಾಲಿಕೆ ಸದಸ್ಯೆ ಭಾಗ್ಯ ಮಹದೇಶ್ ಅವರು ತಕ್ಷಣ ಸ್ಥಳಕ್ಕೆ ಆಗಮಿಸಿ, ಪರಿಶೀಲಿಸಿ, ಜೆಸಿಬಿಯಿಂದ ಅಲ್ಲಿ ಬೆಳೆದಿದ್ದ ಗಿಡ ಗಂಟಿಗಳನ್ನು ತೆಗೆಸಿರುವುದು ಶ್ಲಾಘನೀಯ ಕಾರ್ಯವಾಗಿದೆ. ಇನ್ನೊಂದು ಸಮಸ್ಯೆ ಎಂದರೆ 2ನೇ ಮುಖ್ಯ ರಸ್ತೆಯಲ್ಲಿರುವ ಜನರು ಎಲ್ಲೆಂದರಲ್ಲಿ ಒಣ ಕಸ ಹಾಕುತ್ತಿದ್ದಾರೆ. ಇದರ ಜೊತೆಗೆ ರಾತ್ರಿ ಸಮಯದಲ್ಲಿ ಫಾಸ್ಟ್‌ಫುಡ್‌ನವರು ತಮ್ಮ ವ್ಯಾಪಾರ ಮುಗಿದು ಹೊರಡುವ ಮುನ್ನ ಎಲ್ಲೆಂದರಲ್ಲಿ ಕಾಗದದ ಚೂರುಗಳನ್ನು ಎಸೆಯದೇ ಒಂದು ಟಬ್‌ನಲ್ಲಿ ಅದನ್ನು ಹಾಕಿದರೆ ಪರಿಸರ ಸ್ವಚ್ಛವಾಗಿರುತ್ತದೆ. ಪಾಲಿಕೆ ಇನ್‌ಸ್ಪೆಕ್ಟರ್ ಎಷ್ಟು ಸಲ ದಂಡ ವಸೂಲು ಮಾಡುತ್ತೇವೆ ಎಂದು ಎಚ್ಚರಿಕೆ ಕೊಟ್ಟರೂ ಜನರು ಕ್ಯಾರೇ ಅನ್ನುತ್ತಿಲ್ಲ. ಅದಕ್ಕೆ ಈ ರಸ್ತೆಯಲ್ಲಿ ಸಿಸಿ ಕ್ಯಾಮರಾವನ್ನು ಅಳವಡಿಸಿದರೆ ಆಗ ಜನ ಒಣ ಕಸ ಎಸೆಯುವುದನ್ನು ತಪ್ಪಿಸಬಹುದು. ನಗರಪಾಲಿಕೆಯವರು ಆದಷ್ಟು ಬೇಗ ಕ್ರಮ ಕೈಗೊಳ್ಳುವರೆಂದು ಆಶಿಸೋಣವೇ?

–ಜೆ.ಪಿ. ಹರೀಶ್, ಮೈಸೂರು.

### ಕೆರೆಗೆ ಮತ್ತೆ ನ್ಯಾಯ ಸಿಕ್ಕಿದೆ!


ಮಾನ್ಯರೆ,

ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಬಿದ್ದ ಭಾರೀ ಮಳೆಗೆ ನಗರಗಳೇ ಮುಳುಗಿವೆ! ಬಡಾವಣೆ, ಏರಿಯಾಗಳು ಕೆರೆಯಂತಾಗಿವೆ. ಇದನ್ನೆಲ್ಲಾ ನೋಡಿದಾಗ ಅನಿಸಿದ್ದಿಷ್ಟು... ಕೆರೆ ಯಾವ ಕೋರ್ಟ್‌ಗೂ ಕೇಸ್ ಹಾಕದೇ, ಯಾವ ಪೊಲೀಸ್ ಸ್ಟೇಷನ್ ಮೆಟ್ಟಿಲೇರದೇ, ಕೆರೆ ತನ್ನೆಲ್ಲಾ ಒತ್ತುವರಿ ಭೂಮಿಯನ್ನು ಖುದ್ದಾಗಿ ತಾನೇ ಬಿಡಿಸಿಕೊಳ್ಳುತ್ತಿದೆ!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

### ವೈದ್ಯರಿಗೆ ಅಭಿನಂದನೆಗಳು

ಮಾನ್ಯರೆ,



ಬೆಂಗಳೂರು ಟ್ರಾಫಿಕ್ ಜಾಮ್‌ನಿಂದಾಗಿ ಮೂರು ಕಿಲೋ ಮೀಟರ್ ನಡೆದು ಹೋಗಿ ರೋಗಿಯೊಬ್ಬರಿಗೆ ಸರಿಯಾದ ಸಮಯದಲ್ಲಿ ಶಸ್ತ್ರಚಿಕಿತ್ಸೆ ಮಾಡಿದ ಗ್ಯಾಸ್ಟ್ರೋ ಎಂಟೆರಾಲಜಿ ತಜ್ಞ ವೈದ್ಯ ಡಾ. ಗೋವಿಂದ ನಂದಕುಮಾರ್ ಅವರಿಗೆ ಸಹಸ್ರ ಪ್ರಣಾಮಗಳು. ಅವರ ಕರ್ತವ್ಯ ಕ್ಷಮತೆ ಇಂದಿನ ದಿನಗಳಲ್ಲಿ ಅಪರೂಪದ್ದೇ ಸರಿ.

ಆಸ್ಪತ್ರೆಗಳೆಂದರೆ ಹಣ ಕೀಳುವ ರಾಕ್ಷಸ ಸಂಸ್ಥೆಗಳೆಂದು ಕುಖ್ಯಾತಿ ಹೊಂದಿರುವ ಪ್ರಸ್ತುತ ಪರಿಸ್ಥಿತಿಯಲ್ಲಿ ತಪ್ಪು ತಪ್ಪು ರಿಪೋರ್ಟ್ ನೀಡಿ ರೋಗಿಯ ಕಡೆಯವರನ್ನು ಮಾನಸಿಕವಾಗಿ ಬೆದರಿಸಿ (ನನ್ನದೇ ಉದಾಹರಣೆ ಇದೆ) ಆಸ್ಪತ್ರೆಗಳ ಬಿಲ್ ಕಟ್ಟಿಸಿಕೊಳ್ಳುವ ದೊಡ್ಡ–ದೊಡ್ಡ ಖಾಸಗಿ ಆಸ್ಪತ್ರೆಗಳಿರುವಾಗ, ಅಬ್ಬಾ ಅಂತೂ ಜೀವ ಉಳಿಸಿಕೊಂಡು ಹೊರಬಂದೆವಲ್ಲ ಎಂದು ನಿಟ್ಟುಸಿರು ಬಿಡುವ ಸಾರ್ವಜನಿಕರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಗೋವಿಂದ ನಂದಕುಮಾರ್‌ರಂತಹ ವೈದ್ಯರ ಕರ್ತವ್ಯ ಪ್ರಜ್ಞೆ ಅತ್ಯಂತ ಶ್ಲಾಘನೀಯ, ಅನುಕರಣೀಯ...ಇತರ ವೈದ್ಯರಿಗೆ.

ಕೇವಲ ದುಡ್ಡು ಮಾಡುವುದೊಂದೇ ತಮ್ಮ ದಂಧೆ ಎಂದು ತಿಳಿದಿರುವ ವೈದ್ಯಕೀಯ ಸಂಸ್ಥೆಗಳೇ ಇನ್ನಾದರೂ ಸ್ವಲ್ಪ ಮಾನವೀಯತೆ ಕಲಿಯಿರಿ. ನಿಮ್ಮ ಸಂಸ್ಥೆಗಳಿಗೆ ಗೋವಿಂದ ನಂದಕುಮಾರ್ ಅಂತಹವರ ಕರ್ತವ್ಯಪರತೆ ಹೆಚ್ಚು ಪ್ರಚಾರ ಕೊಟ್ಟೀತು. ಅದನ್ನು ಬಂಡವಾಳ ಮಾಡಿಕೊಂಡು ರೋಗಿಗಳನ್ನು ಹಿಂಡದಿರಿ.. ಡಾ. ಗೋವಿಂದ ನಂದಕುಮಾರ ಅಂತವರ ಸಂತತಿ ಸಾವಿರವಾಗಲಿ. "ವೈದ್ಯೋ ನಾರಾಯಣೋ ಹರಿಃ" ಎಂಬುದಕ್ಕೆ ಇವರು ಅನ್ವರ್ಥರು.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

---



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

# ಪರಿಸರದ ಸುಸ್ಥಿರ ಸಂರಕ್ಷಣೆಗಿಂತ ಆರ್ಥಿಕ ಅಭಿವೃದ್ಧಿಯೇ ಮುಖ್ಯವೇ?

> "ನಾವು ಇಂದು ಭಾರಿ ಬೆಲೆಯನ್ನೇ ತೆರಬೇಕಾದ ಪರಿಸ್ಥಿತಿ ಸೃಷ್ಟಿಯಾಗಿದೆ. ಹವಾಮಾನ ಬದಲಾವಣೆ, ಅಕಾಲಿಕ ಮಳೆ, ಮಾನವ ವಾಸಸ್ಥಾನಗಳ ಮೇಲೆ ವನ್ಯಜೀವಿಗಳ ಆಕ್ರಮಣ–ಇದರಿಂದಾಗಿ ಸಂಭವಿಸುತ್ತಿರುವ ಮಾನವ ಜೀವ ಹಾಗೂ ಜೀವನಾಧಾರಗಳಿಗೆ ಹಾನಿ–ಇವ್ಯಾವುದೂ ಅನೇಕರನ್ನು, ಅದರಲ್ಲೂ ಲಾಭ ಕೇಂದ್ರಿತ ಆರ್ಥಿಕ ಮತ್ತು ರಾಜಕೀಯ ವಲಯವನ್ನು ತಟ್ಟಿಲ್ಲ ಎನ್ನುವುದು ಸಮಕಾಲೀನ ಸಂದರ್ಭದ ದುರಂತಗಳಲ್ಲಿ ಒಂದು.

ಆರ್ಥಿಕ ಬೆಳವಣಿಗೆ ಒಂದು ದೇಶದ ಅಭಿವೃದ್ಧಿಗೆ ಎಷ್ಟು ಮುಖ್ಯವೋ ಪರಿಸರದ ಸಂರಕ್ಷಣೆಯೂ ಅಷ್ಟೇ ಮುಖ್ಯ ಎಂಬ ಸರಳ ಸತ್ಯವನ್ನು ನಾವು ಇನ್ನೂ ಮೈಗೂಢಿಸಿಕೊಂಡಿಲ್ಲವೆನ್ನುವುದಕ್ಕೆ ಈಗಷ್ಟೇ ಮಳೆಯ ಹೊಡೆತಕ್ಕೆ ಸಿಲುಕಿ ರಾಜ್ಯದ ನಾನಾ ಭಾಗಗಳಲ್ಲಿ ಸಂಭವಿಸಿದ ಅಪಾರ ಸಾರ್ವಜನಿಕ ಆಸ್ತಿ ಮತ್ತು ಜೀವ ಹಾನಿಯೇ ಸಾಕ್ಷಿ. ಆದಾಗ್ಯೂ ಪಾಕೃತಿಕ ಸಂಪನ್ಮೂಲಗಳನ್ನು ಕಾಪಾಡುವುದಕ್ಕಿಂತ ಬೃಹತ್ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ, ಸೂಕ್ಷ್ಮ ಪ್ರದೇಶಗಳಲ್ಲಿ ರೈಲು ಮಾರ್ಗಗಳ ನಿರ್ಮಾಣಕ್ಕೆ, ರಸ್ತೆ ಅಗಲೀಕರಣ ಯೋಜನೆಗಳಿಗೆ, ಐಷಾರಾಮಿ ಪ್ರವಾಸಿ ತಾಣಗಳ, ನೂತನ ಬಡಾವಣೆಗಳ ನಿರ್ಮಾಣಕ್ಕೆ ಮರಗಳ ಹನನ ಮಾಡುವುದಕ್ಕೆ ಆಗಾಗ್ಗೆ ಅನುಮತಿಯನ್ನು ನೀಡುವುದರಿಂದ ಪ್ರಾಕೃತಿಕ ಸಂಪನ್ಮೂಲಗಳ ಮೇಲೆ ನಿರಂತರವಾಗಿ ಆಕ್ರಮಣವಾಗುತ್ತಲೇ ಇದೆ. ಭಾರತದಲ್ಲಿ 1980ರಿಂದ ಇಲ್ಲಿಯವರೆಗೆ ಅಭಿವೃದ್ಧಿ ಕಾರ್ಯಗಳಿಗಾಗಿ ಕಳೆದು ಹೋಗಿರುವ ಅರಣ್ಯ ಸಂಪತ್ತು 1.5 ಮಿಲಿಯನ್ ಹೆಕ್ಟೇರ್ ಎಂಬುದು ಒಂದು ಅಂದಾಜು. ಕಳೆದು ಹೋಗುತ್ತಿರುವ ಅರಣ್ಯ ಸಂಪತ್ತಿಗೆ ಮರುಜೀವ ಕೊಡಬೇಕೆಂದರೆ ಅರ್ಧ ಶತಮಾನವೇ ಹಿಡಿಸಬಹುದು.

ಜಾಗತೀಕರಣದ ಯುಗ ಆರಂಭವಾದ ಮೇಲೆ, ಅಂದರೆ ಕಳೆದ 20 ವರ್ಷಗಳಲ್ಲಿ, ಬಂಡವಾಳಶಾಹಿ ಮಾದರಿಯ ಆರ್ಥಿಕ ಚಟುವಟಿಕೆಗಳು ಹಿಂದೆಂದೂ ಕಾಣದ ಹೆಚ್ಚಳವನ್ನು ಕಂಡಿದ್ದರಿಂದ ಸಸ್ಯ ಮತ್ತು ಪ್ರಾಣಿ ಸಂಕುಲ, ಮಳೆ ಕಾಡುಗಳು, ನೆರಳು–ನೀರು ನೀಡುತ್ತಿದ್ದ ಮರಗಳು ಅತಿ ಆಸೆಯ ಪ್ರವೃತ್ತಿಗಳಿಗೆ ಸುಲಭ ಬಲಿಯಾಗಿದ್ದರಿಂದ ಪ್ರಕೃತಿಯ ನಡವಳಿಕೆಯೇ ಬದಲಾಗಿ, ನಾವು ಇಂದು ಭಾರಿ ಬೆಲೆಯನ್ನೇ ತೆರಬೇಕಾದ ಪರಿಸ್ಥಿತಿ ಸೃಷ್ಟಿಯಾಗಿದೆ. ಹವಾಮಾನ ಬದಲಾವಣೆ, ಅಕಾಲಿಕ ಮಳೆ, ಮಾನವ ವಾಸಸ್ಥಾನಗಳ ಮೇಲೆ ವನ್ಯಜೀವಿಗಳ ಆಕ್ರಮಣ–ಇದರಿಂದಾಗಿ ಸಂಭವಿಸುತ್ತಿರುವ ಮಾನವ ಜೀವ ಹಾಗೂ ಜೀವನಾಧಾರಗಳಿಗೆ ಹಾನಿ–ಇವ್ಯಾವುದೂ ಅನೇಕರನ್ನು, ಅದರಲ್ಲೂ ಲಾಭ ಕೇಂದ್ರಿತ ಆರ್ಥಿಕ ಮತ್ತು ರಾಜಕೀಯ ವಲಯವನ್ನು ತಟ್ಟಿಲ್ಲ ಎನ್ನುವುದು ಸಮಕಾಲೀನ ಸಂದರ್ಭದ ದುರಂತಗಳಲ್ಲಿ ಒಂದು.

ಈ ಹೊತ್ತು ಭಾರತವೇ ಅಲ್ಲದೆ ಪ್ರಪಂಚದ ನಾನಾ ಭಾಗಗಳಲ್ಲಿ ನಗರ ಪ್ರದೇಶಗಳ ವಿಸ್ತರಣ ತ್ವರಿತಗತಿಯಲ್ಲಿ ನಡೆಯುತ್ತಿದೆ. ಹೊಸ–ಹೊಸ ಉಪನಗರಗಳ ನಿರ್ಮಾಣಕ್ಕೆ ಅನುವು ಮಾಡಿಕೊಡಲು ಕೆರೆ–ಕಾಲುವೆಗಳನ್ನು ಮುಚ್ಚಿ ಅವುಗಳ ಮೇಲೆ ಭಾರಿ ಗಾತ್ರದ ಕಟ್ಟಡಗಳ ನಿರ್ಮಾಣ ಒಂದೆಡೆ ಸಾಗುತ್ತಿದ್ದರೆ, ಮತ್ತೊಂದೆಡೆ ಬಹು ಕಾಲ ಪ್ರಾಣಿ–ಪಕ್ಷಿ ಸಂಕುಲಗಳ ಆಶ್ರಯ ತಾಣವಾಗಿದ್ದ ಭೂಪ್ರದೇಶಗಳಲ್ಲಿ ಬೃಹತ್ ಮರಗಳು ಧರೆಗುರುಳಿ ಅವುಗಳ ಜಾಗದಲ್ಲಿ, ಮನೆಗಳು, ವಿಲಾಸ ತಾಣಗಳು, ಉದ್ಯಾನವನಗಳು, ಶಿಕ್ಷಣ ಸಂಸ್ಥೆಗಳು, ಆರೋಗ್ಯ ರಕ್ಷಣಾ ಕೇಂದ್ರಗಳು ತಲೆಯೆತ್ತಿವೆ. ತಮ್ಮ ಪ್ರಾಕೃತಿಕ ನೆಲೆಗಳಿಂದ ಹೊರದೂಡಲ್ಪಟ್ಟ ಈ ಪ್ರಾಣಿ–ಪಕ್ಷಿಗಳು ಆಹಾರ–ಆಸರೆಯನ್ನು ಹುಡುಕುತ್ತಾ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗಬೇಕಾದಂಥ ಪರಿಸ್ಥಿತಿ ಸೃಷ್ಟಿಯಾಗಿದ್ದು, ಈ ಪ್ರಕ್ರಿಯೆಯಲ್ಲಿ ಅನೇಕ ವಿಶಿಷ್ಟ ಸಂಕುಲಗಳು ನಶಿಸಿ ಹೋಗುತ್ತಿವೆ, ಇಲ್ಲ ಅವುಗಳ ಸಂಖ್ಯೆಯೇ ಕ್ಷೀಣಿಸುತ್ತಿದೆ.

ತಮ್ಮ ಸಾಂಪ್ರದಾಯಿಕ ವಾಸಸ್ಥಾನಗಳಿಂದ ಹೊರದೂಡಲ್ಪಟ್ಟ ವನ್ಯಜೀವಿಗಳು ಅಥವಾ ಪಕ್ಷಿಗಳು ಮತ್ತು ಮಾನವರ ನಡುವೆ ಸಂಘರ್ಷಗಳು ದಿನೇ–ದಿನೆ ಹೆಚ್ಚಾಗುತ್ತಿದ್ದು ಮಾನವ ಬದುಕಿಗೂ ಅದು ಅಪಾಯಕಾರಿ ಪರಿಸ್ಥಿತಿಗಳನ್ನು ಸೃಷ್ಟಿಸುತ್ತಿದೆ. ಆಸ್ಟ್ರೇಲಿಯಾದ ನೌರ ಎಂಬ ಪಟ್ಟಣದ ಮೇಲೆ ಕೆಲ ಸಮಯದ ಹಿಂದೆ ಸಾವಿರಾರು ಪಕ್ಷಿಗಳ ಸಮೂಹವೊಂದು ನಡೆಸಿದ ಧಾಳಿ ಇದಕ್ಕೆ ಒಂದು ನಿದರ್ಶನವಷ್ಟೇ. ತಮ್ಮ ಮೂಲ ನೆಲೆಯನ್ನು ಈ ಪ್ರದೇಶದೊಡನೆ ಗುರುತಿಸಿಕೊಂಡಿದ್ದ ಕಾಕಟೂ ಎಂಬ ಪಕ್ಷಿ ಸಮುದಾಯ ಇಡೀ ಊರನ್ನೇ ತನ್ನ ವಶಕ್ಕೆ ತೆಗೆದುಕೊಂಡಿದ್ದು, ಆ ಪ್ರದೇಶವಾಸಿಗಳಿಗೆ ಹೊರಬರಲಾರದಂತೆ ಒಂದು ರೀತಿಯ ದಿಗ್ಬಂಧನವನ್ನು ವಿಧಿಸಿದ್ದು, ವಾಹನಗಳು, ವಿದ್ಯುತ್ ಕಂಬಗಳ ಮೇಲೇರಿ ಯಾರಾದರೂ ಬಳಿ ಬಂದರೆ ಅವರ ಮೇಲೆ ಆಕ್ರಮಣ ಮಾಡುತ್ತಿದ್ದುದು, ದೂರವಾಣಿ ಹಾಗೂ ಮಾಧ್ಯಮ ಸಂಪರ್ಕಗಳನ್ನು ಕಡಿದುಹಾಕಿದ್ದು, ಇಡೀ ಊರನ್ನು ಕಲುಷಿತಗೊಳಿಸಿದ್ದು–ಇವೆಲ್ಲ ಇಂಥ ಅನೇಕ ಪ್ರದೇಶಗಳಿಗೆ ಅಪಾಯಸೂಚಿ ಸಂದೇಶಗಳು. ನಿಧಾನವಾಗಿ ಆ ಊರಿನ ನಾಗರಿಕರಿಗೆ ಪಕ್ಷಿಗಳ ಜಾಗವನ್ನು ನಾವು ಆಕ್ರಮಿಸಿದ್ದೇವೆ, ಇನ್ನು ಮುಂದೆ ಇಂಥ ಆಕ್ರಮಣಗಳು ಆಗಾಗ್ಗೆ ಸಂಭವಿಸಬಹುದು ಎಂಬ ಸತ್ಯ ಒಂದೆಡೆ ವೇದ್ಯವಾಗುತ್ತಿದ್ದರೆ, ಮತ್ತೊಂದೆಡೆ ಅವು ಬಿಟ್ಟುಹೋಗಿರುವ ಸಂತತಿ ಬೆಳೆದು ವೃದ್ಧಿಯಾದಾಗ ಎದುರಾಗಬಹುದಾದ ಸಮಸ್ಯೆಗಳನ್ನು ನಿರ್ವಹಿಸುವುದು ಹೇಗೆ ಎಂಬ ಚಿಂತೆ ಕಾಡುತ್ತಿದೆ ಎಂದು ವರದಿಗಳು ತಿಳಿಸಿವೆ. ಭಾರತದ ನಾನಾ ಭಾಗಗಳಲ್ಲೂ ನಿರಂತರ ಮಾನವ–ಪ್ರಾಣಿ–ಪಕ್ಷಿ ಸಂಘರ್ಷಗಳು ನಡೆಯುತ್ತಲೇ ಇದ್ದು, ಗ್ರಾಮಗಳು, ನಗರಗಳ ಆಯ್ದ ಭಾಗಗಳು ಅಪಾಯದ ಅಂಚಿನಲ್ಲೇ ಬದುಕುತ್ತಿರುವ ಅನೇಕ ಉದಾಹರಣೆಗಳು ನಮ್ಮ ಮುಂದಿವೆ.

ನಗರ ಕೇಂದ್ರಿತ ಆರ್ಥಿಕ ಬೆಳವಣಿಗೆ ಪ್ರಾಕೃತಿಕ ಸಂಪನ್ಮೂಲಗಳ ವಿನಾಶಕ್ಕೆ ಅತ್ಯಂತ ಮುಖ್ಯ ಕಾರಣಗಳಲ್ಲಿ ಒಂದು. ನಗರಗಳು ಬೆಳೆಯುತ್ತಾ ಹೋದ ಹಾಗೆಲ್ಲ ಕೈಗಾರಿಕೆಗಳ ಸಂಖ್ಯೆಯೂ ಹೆಚ್ಚುತ್ತಾ ಹೋಗುತ್ತದೆ, ವ್ಯಕ್ತಿಗಳ ಮತ್ತು ವಸ್ತುಗಳ ಚಲನೆಯೂ ಹೆಚ್ಚುತ್ತಾ ಹೋಗುತ್ತದೆ. ಹೊಸ ರೈಲು ಮಾರ್ಗಗಳ ಹಾಗೂ ವಿಮಾನ ನಿಲ್ದಾಣಗಳ ನಿರ್ಮಾಣ ಒಂದೆಡೆ, ಅಥವಾ ಈಗಾಗಲೇ ಇರುವ ಸಾರಿಗೆ ಸೌಲಭ್ಯಗಳ ಬಲವರ್ಧನೆ ಮತ್ತೊಂದೆಡೆ– ಇವೆರಡೂ ಪರಿಸರಕ್ಕೆ ಹಾನಿ ಉಂಟು ಮಾಡುತ್ತಲೇ ಇವೆ. ನಗರೀಕರಣದಿಂದ ಪ್ರಾಕೃತಿಕ ಸಂಪತ್ತಿಗೆ ಹೆಚ್ಚು ಘಾಸಿಯಾಗುತ್ತಿರುವ ರಾಜ್ಯಗಳ ಸಾಲಿನಲ್ಲಿ ಕರ್ನಾಟಕವೂ ಇದ್ದು ಇತ್ತೀಚೆಗಂತೂ ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಹೊಸ ರೈಲು ಮಾರ್ಗಗಳ ನಿರ್ಮಾಣ, ಬೃಹತ್ ನಗರಗಳಲ್ಲಿ ರಸ್ತೆ ಅಗಲೀಕರಣ ಹಾಗೂ ಮೇಲ್ ಸೇತುವೆಗಳನ್ನು ನಿರ್ಮಿಸಲು ಸಾವಿರಾರು ಮರಗಳ ಹನನ–ಇವು ತೀರಾ ಸಾಮಾನ್ಯವಾದ ಘಟನೆಗಳಾಗುತ್ತಿವೆ.

ಪರಿಸರವನ್ನು ಉಳಿಸಲು ಹೋರಾಟಗಳು, ಚಳುವಳಿಗಳು ಮತ್ತು ಕಾನೂನಾತ್ಮಕ ಹೋರಾಟಗಳ ಮೂಲಕ ಪ್ರತಿಭಟನೆಗಳು ನಡೆಯುತ್ತಲೇ ಇದ್ದರೂ ಅಸೂಕ್ಷ್ಮ ಆರ್ಥಿಕ ಬೆಳವಣಿಗೆ ಮಾತ್ರ ಅವ್ಯಾಹತವಾಗಿ ನಡೆಯುತ್ತಲೇ ಇದೆ. ಇತ್ತೀಚೆಗಷ್ಟೇ ಪರಿಸರ ಸೂಕ್ಷ್ಮ ವಲಯವಾದ ಪಶ್ಚಿಮ ಘಟ್ಟಗಳಲ್ಲಿ ಕರ್ನಾಟಕದ ಕಾಸಲ್ ರಾಕ್‌ನಿಂದ ಗೋವಾದ ಕೊಲ್ಲೆಮ್‌ವರೆಗಿನ ರೈಲು ಮಾರ್ಗವನ್ನು ಇಮ್ಮಡಿ ಮಾಡುವ ಪ್ರಸ್ತಾವನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ನೀಡಿದ್ದ ಅನುಮತಿಯನ್ನು ಸರ್ವೋಚ್ಚ ನ್ಯಾಯಾಲಯ ರದ್ದುಪಡಿಸಿರುವುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ. ಈ ಸಂಯೋಜನೆಯೇನಾದರೂ ಕಾರ್ಯಗತವಾದರೆ ವನ್ಯಜೀವಿ ಸಂಕುಲವೇ ಅಲ್ಲದೆ, ಕೃಷಿ ಚಟುವಟಿಕೆಗಳು, ಕಿರು ಅರಣ್ಯ ಉತ್ಪನ್ನ ಸಂಗ್ರಹ ಹಾಗೂ ಅರಣ್ಯಾವೃತ್ತವಾಗಿರುವ ಈ ಇಡೀ ಪ್ರದೇಶದ ಜೀವವೈವಿಧ್ಯ ಮತ್ತು ಜೀವನಾಧಾರಗಳು ಕುಸಿದು ಹೋಗುತ್ತವೆ. ಈಗಾಗಲೇ ಕರ್ನಾಟಕ–ಗೋವಾ ಗಡಿಯಲ್ಲಿರುವ ಧೂದ್ ಸಾಗರ್ ಜಲಪಾತದಲ್ಲಿ ನಡೆದ ಚಲನಚಿತ್ರವೊಂದರ ಹೊರಾಂಗಣ ಚಿತ್ರೀಕರಣ ಈ ಸ್ಥಳಕ್ಕೆ ನೀಡಿದ ಪ್ರಚಾರದಿಂದ ಹೆಚ್ಚು–ಕಡಿಮೆ ಜನನಿಬಿಡವಾಗಿದ್ದ ಈ ಪರಿಸರ ಸೂಕ್ಷ್ಮ ಪ್ರಕೃತಿ ರಮ್ಯ ತಾಣ ಕಳೆದ 10 ವರ್ಷಗಳಿಂದ ಸಾವಿರಾರು ಪ್ರವಾಸಿಗರ ದಾಳಿಗೆ ತುತ್ತಾಗಿ ಪ್ಲಾಸ್ಟಿಕ್ ನೀರಿನ ಬಾಟಲಿಗಳು, ತಿಂಡಿಗಳ ಪೊಟ್ಟಣಗಳು ಎಲ್ಲೆಲ್ಲೂ ಹರಡುತ್ತಿದ್ದರೆ, ಮತ್ತೊಂದೆಡೆ ಅನೇಕ ಅನಪೇಕ್ಷಿತ ಚಟುವಟಿಕೆಗಳಿಗೂ ಸಾಕ್ಷಿಯಾಗಿದೆ.



ಹುಬ್ಬಳ್ಳಿ–ಅಂಕೋಲಾ ನಡುವಣ ರೈಲು ಮಾರ್ಗದ ಪ್ರಸ್ತಾವನೆ ಕೂಡ ಕರ್ನಾಟಕದಲ್ಲಿಯೇ, ಪರಿಸರಾಘಾತವಾಗಬಹುದಾದ ಮತ್ತೊಂದು ಸಂಯೋಜನೆ. ಹಾಲಿ ಇದು ಕೂಡ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಮುಂದಿದ್ದು ಈ ಪ್ರಸ್ತಾವನೆಯೇನಾದರೂ ಕಾರ್ಯರೂಪಕ್ಕೆ ಬಂದರೆ ಪಶ್ಚಿಮ ಘಟ್ಟಗಳ ಪರಿಸರ ಸೂಕ್ಷ್ಮ ಕಾಳಿ ಹುಲಿ ಸಂರಕ್ಷಣಾ ಪ್ರದೇಶದ ನಡುವೆ ಸಾಗಿಹೋಗಿ 500ಕ್ಕೂ ಹೆಚ್ಚು ಹೆಕ್ಟೇರು ಅರಣ್ಯ ಭೂಮಿಯೇ ಅಲ್ಲದೆ ಎರಡು ಲಕ್ಷ ಮರಗಳೂ ನೆಲಕ್ಕುರುಳುತ್ತವೆ. ಅಷ್ಟೇ ಅಲ್ಲದೆ ಈ ಯೋಜನೆ ನೀರಿನ ಮೂಲಗಳಿಗೆ ಧಕ್ಕೆ ತಂದು, ವನ್ಯ ಜೀವಿಗಳ ಚಲನೆಗೂ ಅಡ್ಡಿಯನ್ನು ಉಂಟು ಮಾಡಲಿದ್ದು ತೀವ್ರ ಸ್ವರೂಪದ ಹವಾಮಾನ ಬದಲಾವಣೆಗೂ ಕಾರಣವಾಗಲಿದೆ ಎಂದು ಪರಿಸರಾಸಕ್ತರು ಎಚ್ಚರಿಕೆ ನೀಡಿದ್ದಾರೆ. ಈ ಪ್ರದೇಶ ಅನೇಕ ಜನಸಮುದಾಯಗಳಿಗೆ ಆಹಾರ, ಆಶ್ರಯ ಮತ್ತು ಜೀವನ ನಿರ್ವಹಣಾ ಅವಕಾಶಗಳನ್ನೂ ನೀಡಿದ್ದು ಈ ಬೃಹತ್ ಯೋಜನೆ ಅವರನ್ನು ಸ್ಥಾನಪಲ್ಲಟ ಮಾಡಿದಾಗ ಅವರ ಬದುಕಿನ ಮೇಲಾಗುವ ಪರಿಣಾಮಗಳ ತೀವ್ರತೆಯನ್ನೇನಾದರೂ ಅಳೆಯಲು ಸಾಧ್ಯವೇ?

ಪ್ರಾಕೃತಿಕ ಅವಘಡಗಳು ಸಂಭವಿಸಿದಾಗಲೆಲ್ಲ ಕೆಲ ದಿನಗಳು ಎಲ್ಲೆಡೆ ಅದೇ ಮಾತು, ಅದೇ ಚರ್ಚೆ. ಆದರೆ ದಿನಗಳು ಕಳೆಯುತ್ತಾ ಹೋದ ಹಾಗೆ ಈ ಘಟನೆಗಳು ಸಾರ್ವಜನಿಕ ಮನಃಪಟಲದಿಂದ ಹಿಂದೆ ಸರಿಯುತ್ತವೆ. ಗಂಭೀರ ಸ್ವರೂಪದ ಜೀವ ಹಾಗೂ ಆಸ್ತಿ ಹಾನಿಯುಂಟಾದಾಗ ಪರಿಸರದ ಬಗೆಗಿನ ಕಾಳಜಿ ಮತ್ತೆ ಮುಂದೆ ಬರುತ್ತದೆ. ಬಂಡವಾಳಶಾಹಿ ಹಾಗೂ ಅಧಿಕಾರ ವಲಯಗಳು ಆರ್ಥಿಕ ಅಭಿವೃದ್ಧಿಯ ಹೆಸರಿನಲ್ಲಿ ತೆಗೆದುಕೊಳ್ಳುವ ಪರಿಸರ ಅಸೂಕ್ಷ್ಮ ನಿಲುವು–ನಿರ್ಧಾರಗಳಿಗೆ ತಡೆಯೊಡ್ಡಿ ನೆಲ–ಜಲ–ಜೀವಗಳನ್ನು ರಕ್ಷಿಸಬೇಕಾದರೆ, ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ, ಸ್ಥಳೀಯ ಮಟ್ಟದಲ್ಲಿ ಸಭೆಗಳು–ಸಂವಾದಗಳು–ಸಮಾಲೋಚನೆಗಳ ಮೂಲಕ ನಾಗರಿಕ ಪ್ರಜ್ಞೆ ಸದಾ ಕಾಲ ಜಾಗೃತವಾಗಿರಬೇಕು.

---

# ನೆಫ್ಟ್ ಮೂಲಕ ಆನ್‌ಲೈನ್‌ನಲ್ಲಿ ನೀರಿನ ಬಿಲ್ ಪಾವತಿ ಆರಂಭ

## ವಾರದೊಳಗೆ ಗೂಗಲ್ ಪೇ, ಫೋನ್ ಪೇ ಮೂಲಕವೂ ಪಾವತಿ ವ್ಯವಸ್ಥೆ

ಮೈಸೂರು, ಸೆ.14 (ಆರ್‌ಕೆ)–ಕೆಲ ತಾಂತ್ರಿಕ ಕಾರಣಗಳಿಂದಾಗಿ ಕಳೆದ ಎರಡು ತಿಂಗಳಿಂದ ಸ್ಥಗಿತಗೊಂಡಿದ್ದ ಕುಡಿಯುವ ನೀರಿನ ಆನ್‌ಲೈನ್ ಬಿಲ್ ಪಾವತಿ ಸೌಲಭ್ಯವನ್ನು ಮತ್ತೆ ಆರಂಭಿಸಲಾಗಿದೆ. ಇದೀಗ ನಾಗರಿಕರು ಮನೆಯಿಂದಲೇ ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ಸ್ ಟ್ರಾನ್ಸ್‌ಫರ್ (ನೆಫ್ಟ್) ಮೂಲಕ ತಮ್ಮ ಮನೆಯ ನೀರಿನ ಬಿಲ್ ಪಾವತಿಸಬಹುದಾಗಿದೆ. ಗೂಗಲ್ ಪೇ ಮತ್ತು ಫೋನ್ ಪೇ ಮೂಲಕವೂ ಪಾವತಿಸುವ ವ್ಯವಸ್ಥೆಯನ್ನು ಒಂದು ವಾರದೊಳಗಾಗಿ ಕಲ್ಪಿಸಲಾಗುವುದು ಎಂದು ಮೈಸೂರು ಮಹಾನಗರ ಪಾಲಿಕೆಯ ವಾಣಿವಿಲಾಸ ವಾಟರ್ ವರ್ಕ್ಸ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಸುವರ್ಣ 'ಮೈಸೂರು ಮಿತ್ರ'ನಿಗೆ ತಿಳಿಸಿದರು.




ಆನ್‌ಲೈನ್ ಪೇಮೆಂಟ್ ಸಿಸ್ಟಂ ಸ್ಥಗಿತಗೊಂಡಿದ್ದ ಕಾರಣ ಕಳೆದ 2 ತಿಂಗಳಿಂದ ಗ್ರಾಹಕರು ಪಾಲಿಕೆ ವಲಯ ಕಚೇರಿಗಳಿಗೆ ತೆರಳಿ ಕೌಂಟರ್‌ಗಳಲ್ಲಿ ಸಾಲಾಗಿ ನಿಂತು ನೀರಿನ ಬಿಲ್ ಪಾವತಿಸುವಂತಾಗಿದ್ದು, ಕೆಲಸದ ಒತ್ತಡವಿರುವವರು, ಕೌಂಟರ್‌ಗಳಿಗೆ ಹೋಗಲು ಸಾಧ್ಯವಾಗದವರು ಮಾಸಿಕ ಬಿಲ್ ಪಾವತಿಸದ ಕಾರಣ ಬಾಕಿ ಸೇರಿ ಪ್ರಸಕ್ತ ತಿಂಗಳ ಬಿಲ್‌ನಲ್ಲಿ ಹೆಚ್ಚಿನ ಮೊತ್ತ ನಮೂದಾಗಿದೆ. ಪ್ರತೀ ತಿಂಗಳು ಡಿಜಿಟಲ್ ಮೋಡ್‌ನಲ್ಲಿ ಸುಮಾರು ಕೋಟಿ ರೂ. ನೀರಿನ ಬಿಲ್ ಪಾವತಿಯಾಗುತ್ತಿತ್ತು. ಆನ್‌ಲೈನ್ ವ್ಯವಸ್ಥೆ ಸ್ಥಗಿತಗೊಂಡಿದ್ದರಿಂದ ಪಾಲಿಕೆಗೆ ಆದಾಯ ಕಡಿಮೆಯಾಗಿತ್ತು. ಮೈಸೂರಿನ 16 ಬಿಲ್ ಸಂಗ್ರಹ ಕೇಂದ್ರಗಳಲ್ಲಿ ನೀರಿನ ಶುಲ್ಕ ಪಾವತಿಸುವ ಅವಕಾಶ ಕಲ್ಪಿಸಲಾಗಿದೆಯಾದರೂ, ಜನರು ಸಮಯದ ಅಭಾವ ಹಾಗೂ ಇನ್ನಿತರ ಕಾರಣಗಳಿಂದಾಗಿ ಸ್ವತಃ ಹೋಗಿ ಕೌಂಟರ್‌ನಲ್ಲಿ ಹಣ ಪಾವತಿಸಲು ಆಸಕ್ತಿ ತೋರುತ್ತಿರಲಿಲ್ಲ.

---

# ಸೆಸ್ಕ್ ಕಚೇರಿ ವಹಿವಾಟು ಇನ್ನು ಕಾಗದರಹಿತ ಇ–ಆಫೀಸ್‌ಗೆ ಸಚಿವ ಸುನಿಲ್‌ಕುಮಾರ್ ಚಾಲನೆ

ಮೈಸೂರು, ಸೆ. 14 (ಆರ್‌ಕೆ)– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ಕಚೇರಿಗಳು ಇನ್ನು ಮುಂದೆ ಕಾಗದ ರಹಿತ (ಪೇಪರ್ ಲೆಸ್)ವಾಗಲಿವೆ. ಇದೇ ಮೊದಲ ಬಾರಿ ತಂತ್ರಜ್ಞಾನ ಬಳಸಿ ಪೇಪರ್ ರಹಿತ ಆಡಳಿತ ನಡೆಸಲು ಸೆಸ್ಕ್ ಕಚೇರಿಯ ಇ–ಆಫೀಸ್ ವ್ಯವಸ್ಥೆಗೆ ಇಂಧನ ಸಚಿವ ಸುನಿಲ್‌ಕುಮಾರ್ ಮಂಗಳವಾರ ಬೆಂಗಳೂರಿನಲ್ಲಿ ವರ್ಚ್ಯುಯಲ್ ಮೂಲಕ ಚಾಲನೆ ನೀಡಿದ್ದಾರೆ. ಈ ವೇಳೆ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಜಯವಿಭವಸ್ವಾಮಿ ಉಪಸ್ಥಿತರಿದ್ದು, ನೂತನ ಆನ್‌ಲೈನ್ ವ್ಯವಸ್ಥೆ ಕುರಿತು ಸಚಿವರಿಗೆ ಮಾಹಿತಿ ನೀಡಿದರು.



ಸುನಿಲ್‌ಕುಮಾರ್

ಪ್ರಥಮ ಹಂತದಲ್ಲಿ ಮೈಸೂರಿನ ಹಿನಕಲ್ ಬಳಿ ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ಕಾರ್ಪೋರೇಟ್ ಕಚೇರಿಯಲ್ಲಿ ಇ–ಆಫೀಸ್‌ಗೆ ಸೌಲಭ್ಯ ಒದಗಿಸಿದ್ದು, ಕಾಗದ ರಹಿತ ಆಡಳಿತಕ್ಕೆ ಸಾಫ್ಟ್‌ವೇರ್ ವ್ಯವಸ್ಥೆ ಮಾಡಿಕೊಂಡಿದ್ದು, ಇನ್ನು ಮುಂದೆ ನಿಗಮದ ವ್ಯವಹಾರಗಳೆಲ್ಲಾ ಇ–ಆಫೀಸ್‌ನಲ್ಲೇ ನಡೆಯಲಿದ್ದು, ಕಾಗದ ರಹಿತ ಆಡಳಿತಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಇಂಧನ ಸಚಿವರಿಗೆ ವಿವರಿಸಿದರು. ವಿವಿಧ ಸೇವೆಗಳಿಗಾಗಿ ವಿದ್ಯುತ್ ಗ್ರಾಹಕರು ಕಾರ್ಪೋರೇಟ್, ಸರ್ಕಲ್, ಉಪ ವಿಭಾಗದ ಕಚೇರಿಗಳು ಹಾಗೂ ಸೇವಾ ಕೇಂದ್ರಗಳಿಗೆ ಅಲೆಯುವ ಅಗತ್ಯವಿಲ್ಲ. ಮನೆಯಲ್ಲೇ ಕುಳಿತು ಆನ್‌ಲೈನ್‌ನಲ್ಲಿ ಕೋರಿಕೆ ಸಲ್ಲಿಸಿ ಶುಲ್ಕ ಪಾವತಿಸಿದರೆ ಸಾಕು, ಬಯಸಿದ ಸೇವೆ ಒದಗಿಸುವ ವ್ಯವಸ್ಥೆಗೆ ಸಿದ್ಧತೆ ಮಾಡಿಕೊಂಡಿದ್ದೇವೆ ಎಂದು ಮಾಹಿತಿ ನೀಡಿದ್ದಾರೆ.

> "ನಿಗಮದ ವ್ಯಾಪ್ತಿಯ ಎಲ್ಲಾ ಸರ್ಕಲ್, ಉಪ ವಿಭಾಗಗಳ ಕಚೇರಿಗಳಲ್ಲಿ ಹಂತ ಹಂತವಾಗಿ ಆನ್‌ಲೈನ್ ವ್ಯವಸ್ಥೆ ಮಾಡಿ ಗ್ರಾಹಕರಿಗೆ ಕುಳಿತಲ್ಲೇ ಸೇವೆ ಒದಗಿಸಲಾಗುವುದು. ವಿದ್ಯುತ್ ಸಂಪರ್ಕ, ಬಿಲ್ ಪಾವತಿ, ಟ್ರಾನ್ಸ್‌ಫಾರ್ಮರ್, ವಿದ್ಯುತ್ ಕಂಬ ಅಳವಡಿಸಿ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ ಸೇರಿದಂತೆ ನಿಗಮದ ಎಲ್ಲಾ ಸೇವೆಗಳನ್ನು ತಂತ್ರಾಂಶದ ಮೂಲಕವೇ ಪೂರೈಸಲಾಗುವುದು.
> –ಜಯವಿಭವಸ್ವಾಮಿ, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ

---

## ಇಂದು ಮೈಸೂರಿಗೆ ಯೋಗ ಸತ್ಸಂಗ ಸೊಸೈಟಿ ಸನ್ಯಾಸಿಗಳ ಭೇಟಿ

ಮೈಸೂರು,ಸೆ.14–ಶ್ರೀ ಪರಮಹಂಸ ಯೋಗಾನಂದರ ಪ್ರಚರಿತವಾದ ಆತ್ಮ–ಸಾಕ್ಷಾತ್ಕಾರದ ತತ್ವ ಬೋಧನೆಗಳನ್ನು ತಿಳಿಸಲು, ಧ್ಯಾನ–ಕ್ರಿಯಾ ಯೋಗದ ಕುರಿತು ಅಭ್ಯಾಸ ತರಗತಿಗಳನ್ನು ನಡೆಸಿಕೊಡಲು ಸೆ.15ರಂದು ರಾಂಚಿಯ ಹಿರಿಯ ಸನ್ಯಾಸಿಗಳು ಮೈಸೂರಿಗೆ ಆಗಮಿಸಲಿದ್ದಾರೆ. ಸೆ.16ರಿಂದ 18ರವರೆಗೆ ನಡೆಯುವ 3 ದಿನಗಳ ಆಧ್ಯಾತ್ಮಿಕ ಶಿಬಿರ, ಧ್ಯಾನ, ತಂತ್ರಗಳ ಆಳವಾದ ಅಭ್ಯಾಸ ಮಾಡಲಿಚ್ಛಿಸುವ ವೈಎಸ್‌ಎಸ್ ಪಾಠಗಳ ಸಾಧಕರಿಗೆ ಹಾಗೂ ಸೊಸೈಟಿ ನೂತನ ಸದಸ್ಯರಿಗೆ ಸದಾವಕಾಶ. ಸೆ.15ರಂದು ಸಂಜೆ 5ರಿಂದ 7ರವರೆಗೆ ವಿಶೇಷ ಸತ್ಸಂಗ ಕಾರ್ಯಕ್ರಮ ಏರ್ಪಡಿಸಿದೆ. ಸೆ.16, 17ರಂದು ಸಂಜೆ 6.30ರಿಂದ 7.30ರವರೆಗೆ ವಿಶೇಷ ಉಪನ್ಯಾಸಗಳು ನೆರವೇರಲಿವೆ. ಎಲ್ಲಾ ಕಾರ್ಯಕ್ರಮಗಳು ಗೋವಿಂದರಾವ್ ಮೆಮೋರಿಯಲ್ ಹಾಲ್‌ನಲ್ಲಿ ನಡೆಯಲಿವೆ.

---

# ಯುಕೆಯಲ್ಲಿ ವಸತಿ ಸೌಕರ್ಯ ಕಲ್ಪಿಸುವುದಾಗಿ ಮೈಸೂರು ವಿದ್ಯಾರ್ಥಿಗೆ 1.85 ಲಕ್ಷ ವಂಚನೆ

ಮೈಸೂರು, ಸೆ.14–ಯುನೈಟೆಡ್ ಕಿಂಗ್‌ಡಮ್(ಯುಕೆ)ನಲ್ಲಿ ವಸತಿ ಸೌಲಭ್ಯ ಕಲ್ಪಿಸುವುದಾಗಿ ವಿದ್ಯಾರ್ಥಿಗೆ 1.85 ಲಕ್ಷ ರೂ. (2000 ಪೌಂಡ್) ವಂಚಿಸಿರುವ ಬಗ್ಗೆ ವರದಿಯಾಗಿದೆ.




ಮೈಸೂರಿನ ಹಿನಕಲ್ ನಿವಾಸಿ ಶಿವರಾಮೇಗೌಡ ಎಂಬುವರ ಪುತ್ರ ಎಸ್.ಜಯಂತ್(22) ವಂಚನೆಗೊಳಗಾದವರಾಗಿದ್ದು, ಇವರು ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಎಂ.ಎಸ್. ವ್ಯಾಸಂಗ ಮಾಡಲು ಅರ್ಜಿ ಸಲ್ಲಿಸಿದ್ದು, ಅಲ್ಲಿ ರೂಮುಗಳು ಖಾಲಿ ಇವೆ ಎಂದು ಫೇಸ್ ಬುಕ್‌ನಲ್ಲಿ ಬಂದಿದ್ದ ಜಾಹೀರಾತನ್ನು ನೋಡಿ, ಅಲ್ಲಿದ್ದ ಮೊಬೈಲ್ ಸಂಖ್ಯೆಯನ್ನು ಜಯಂತ್ ಸಂಪರ್ಕಿಸಿದ್ದಾರೆ. ಅವರಿಗೆ ಯುನೈಟೆಡ್ ಕಿಂಗ್‌ಡಮ್‌ನಲ್ಲಿನ ರೂಮ್ ಹೇಗಿರುತ್ತದೆ, ಅಲ್ಲಿನ ಸೌಲಭ್ಯಗಳೇನು ಎಂಬುದನ್ನೆಲ್ಲಾ ವಿವರಿಸಿದ ವಂಚಕ, 3 ಹಂತಗಳಲ್ಲಿ 2000 ಪೌಂಡ್ (1,85,696 ರೂ.) ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ಮೂರನೇ ಬಾರಿ ಹಣ ವರ್ಗಾವಣೆಯಾದ ನಂತರ ಯಾವುದೇ ಪ್ರತಿಕ್ರಿಯೆ ಬಾರದ ಹಿನ್ನೆಲೆಯಲ್ಲಿ ಅವರು ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಟೆಲಿಗ್ರಾಂ ಗ್ರೂಪ್‌ನಲ್ಲಿ ಪರಿಚಯವಾದ ವ್ಯಕ್ತಿ ಬೇರೊಂದು ಗ್ರೂಪ್ ಅನ್ನು ಪರಿಚಯಿಸಿ ಯುವತಿಗೆ 9.54 ಲಕ್ಷ ರೂ. ಆನ್‌ಲೈನ್ ಮೂಲಕ ವಂಚಿಸಿದ್ದಾನೆ. ಮೈಸೂರಿನ ಶ್ರೀರಾಂಪುರ 2ನೇ ಹಂತದ ಎಸ್‌ಬಿಎಂ ಕಾಲೋನಿ ನಿವಾಸಿ ಸುಶ್ಮಿತಾ ಆರ್.ಗೋಪಿನಾಥ್(24) ವಂಚನೆಗೊಳಗಾದವರಾಗಿದ್ದು, ಇವರಿಗೆ ಆರ್.ಸಂಕೇತ್ ಎಂಬಾತ ಟೆಲಿಗ್ರಾಂ ಗ್ರೂಪ್‌ನಲ್ಲಿ ಪರಿಚಯವಾಗಿದ್ದಾನೆ. ಆತ ಎಸ್‌ಟಿಸಿ ಲಿಮಿಟೆಡ್ ಕೋ. ಇನ್ ಗ್ರೂಪ್ ಅನ್ನು ಯುವತಿಗೆ ಪರಿಚಯಿಸಿದ್ದು, ಆ ಗ್ರೂಪ್‌ನಲ್ಲಿ ಸೇರ್ಪಡೆಯಾದ ನಂತರ ಅಲ್ಲಿಂದ ಬಂದ ಸಂದೇಶಗಳನ್ನು ಪಾಲಿಸುವ ಮೂಲಕ ಯುವತಿ 9.54 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿದ್ದಾರೆ. ಅವರಿಗೆ ಹಣವಾಗಲೀ, ಅಥವಾ ಯಾವುದೇ ಲಾಭದ ಹಣವಾಗಲೀ ಬಂದಿಲ್ಲ. ಈ ಹಿನ್ನೆಲೆಯಲ್ಲಿ ಅವರು ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

---

## ಬೇರೆಯವರ ಮನೆ ಭೋಗ್ಯಕ್ಕೆ ನೀಡಿ 12 ಲಕ್ಷ ವಂಚನೆ

ಮೈಸೂರು, ಸೆ.14–ಬೇರೆಯವರ ಮನೆಯನ್ನು ತಮ್ಮ ಮನೆ ಎಂದು ತಿಳಿಸಿ ಭೋಗ್ಯಕ್ಕೆ ಕೊಡುವುದಾಗಿ 12 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮಂಚೇಗೌಡನಕೊಪ್ಪಲು ನಿವಾಸಿ ಎಲ್.ಸೂರ್ಯನಾರಾಯಣಾಚಾರ್ (60) ವಂಚನೆಗೊಳಗಾದವರಾಗಿದ್ದು, ಇವರನ್ನು ಸಂಪರ್ಕಿಸಿದ ಎನ್.ಎಲೀಷಾ, ಮುಷ್ತಾ ಹಾಗೂ ಚಂದ್ರು ಎಂಬುವರು ಮೈಸೂರಿನ ಗೋಕುಲಂ 1ನೇ ಹಂತ, ಎರಡನೇ ಕ್ರಾಸ್, 45ನೇ ಸಂಖ್ಯೆಯ ಮನೆ ತಮ್ಮದು ಎಂದು ಜೂ.12ರಂದು ತಿಳಿಸಿ, 12 ಲಕ್ಷಕ್ಕೆ ಭೋಗ್ಯಕ್ಕೆ ನೀಡುವುದಾಗಿ ಮಾತುಕತೆ ನಡೆಸಿ ಮೊದಲಿಗೆ 500 ರೂ. ಟೋಕನ್ ಅಡ್ವಾನ್ಸ್ ಪಡೆದಿದ್ದಾರೆ. ಮರುದಿನ 99,500 ರೂ. ಪಡೆದು ಭೋಗ್ಯದ ಕರಾರು ಪತ್ರವನ್ನು ನೋಟರಿಯಿಂದ ಮಾಡಿಸಿಕೊಂಡು ಬಂದು ಕೊಟ್ಟ ನಂತರ ಉಳಿದ ಹಣವನ್ನು ಪಡೆದಿದ್ದಾರೆ. ಮನೆಯಲ್ಲಿ ಬೇರೆಯವರು ವಾಸವಿದ್ದು, ಅವರನ್ನು ಖಾಲಿ ಮಾಡಿಸಿಕೊಡುತ್ತೇವೆ ಎಂದು ಸಬೂಬು ಹೇಳುತ್ತಲೇ ದಿನ ದೂಡಿದ್ದಾರೆ. ಆದರೆ ಸದರಿ ಮನೆ ಇವರಿಗೆ ಸೇರಿದ್ದಲ್ಲ ಎಂದು ಖಚಿತವಾದ ನಂತರ ಸೂರ್ಯನಾರಾಯಣಾಚಾರ್ ವಿವಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

## ಗೃಹಿಣಿಯ ಮಾಂಗಲ್ಯ ಸರ ಕಳವು

ಮೈಸೂರು,ಸೆ.14–ದೇವಸ್ಥಾನಕ್ಕೆ ತೆರಳುತ್ತಿದ್ದ ಗೃಹಿಣಿಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಗಂಗೋತ್ರಿ ಲೇಔಟ್‌ನಲ್ಲಿ ನಡೆದಿದೆ. ಅಲ್ಲಿನ ನಿವಾಸಿ ಪದ್ಮಾವತಿ (64) ಅವರು ಸೆ.12ರಂದು ಸಂಜೆ ಮಾರುತಿ ದೇವಸ್ಥಾನಕ್ಕೆ ತೆರಳುತ್ತಿದ್ದ ವೇಳೆ ಬೈಕ್‌ನಲ್ಲಿ ಬಂದ ಖದೀಮರು ಅವರ ಕತ್ತಿನಲ್ಲಿದ್ದ 37 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಸರಸ್ವತಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

# 18 ವರ್ಷ ಮೇಲ್ಪಟ್ಟವರಿಗೆ ಉಚಿತ ಕೋವಿಡ್ ಮುನ್ನೆಚ್ಚರಿಕಾ ಡೋಸ್

ಮೈಸೂರು,ಸೆ.14-ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ವತಿಯಿಂದ 75ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆ ಅಮೃತ ಮಹೋತ್ಸವದ ಅಂಗವಾಗಿ 18 ವರ್ಷ ಮೇಲ್ಪಟ್ಟ ಫಲಾನುಭವಿಗಳಿಗೆ ಎಲ್ಲಾ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಕೋವಿಡ್-19 ಮುನ್ನೆಚ್ಚರಿಕೆ ಡೋಸ್ ನೀಡಲಾಗುತ್ತಿದ್ದು, ಮುಂದಿನ 15 ದಿನಗಳವರೆಗೆ 18 ವರ್ಷ ಮೇಲ್ಪಟ್ಟ ಫಲಾನುಭವಿಗಳಿಗೆ ಎಲ್ಲ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ಕೋವಿಡ್-19 ಮುನ್ನೆಚ್ಚರಿಕೆ ಡೋಸ್‌ನ್ನು ನೀಡಲಾಗುವುದು. ಅ.1ರ ನಂತರ 18ರಿಂದ 59 ವರ್ಷದೊಳಗಿನವರಿಗೆ ಖಾಸಗಿ ಆರೋಗ್ಯ ಸಂಸ್ಥೆಗಳಲ್ಲಿ ಸರ್ಕಾರ ನಿಗದಿಪಡಿಸಿರುವ ದರ ಪಾವತಿಸಿ ಮುನ್ನೆಚ್ಚರಿಕೆ ಡೋಸ್‌ನ್ನು ಪಡೆಯಬೇಕಾಗಿರುತ್ತದೆ. ಲಸಿಕೆ ಪಡೆಯುವುದರ ಮೂಲಕ ಕೋವಿಡ್-19ರ ನಿಯಂತ್ರಣದ ವಿರುದ್ಧ ಹೋರಾಡೋಣ ಎಂದು ಜಿಲ್ಲಾ ಆರ್‌ಸಿಹೆಚ್ ಅಧಿಕಾರಿಗಳು ತಿಳಿಸಿದ್ದಾರೆ.






ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಎಸ್.ಸಿ.ಘಟಕದ ರಾಜ್ಯ ಕಾರ್ಯಕಾರಿಣಿ ಸಮಿತಿಯ ಸದಸ್ಯರಾಗಿ ಹಾಗೂ ಕೊಡಗು ಜಿಲ್ಲೆಯ ವೀಕ್ಷಕರಾಗಿ ಮಂಡಕಳ್ಳಿ ಸೋಮಶೇಖರ್ ನೂತನವಾಗಿ ನೇಮಕವಾದ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯರವರನ್ನು ಭೇಟಿ ಮಾಡಿ ಅಭಿನಂದಿಸಿದ ಸಂದರ್ಭ... ಮಂಜುಳ ಮಂಜುನಾಥ್, ಮಾಜಿ ಅಧ್ಯಕ್ಷರು, ತಾಲ್ಲೂಕು ಪಂಚಾಯಿತಿ, ಮೈಸೂರು, ಮಹದೇವ್ ಗಾಣಿಗ, ಮುಖಂಡರು, ವರುಣಾ ವಿಧಾನ ಸಭಾ ಕ್ಷೇತ್ರ ಹಾಗೂ ಇತರರು ಉಪಸ್ಥಿತರಿದ್ದರು.

Promotional Feature



## ನಂಜನಗೂಡು ತಾಲ್ಲೂಕು ಉಪಾಧ್ಯಾಯರುಗಳ ಸಹಕಾರ ಸಂಘ ನಿಯಮಿತ

ಮಹದೇಶ್ವರ ಬೀಡಿಟ್, ಹುಲ್ಲಹಳ್ಳಿ ರಸ್ತೆ ನಂಜನಗೂಡು-571301
ರಿ.ನಂ.ಎ.ಆರ್.ಎಂ 1020/52, ದಿನಾಂಕ: 20-10-1952

ಕ್ರಮ ಸಂಖ್ಯೆ: 43/2022-23 ದಿನಾಂಕ:13.09.2022

ಮಾನ್ಯ ಸದಸ್ಯರುಗಳಲ್ಲಿ ವಿನಂತಿ,

ಮೇಲ್ಕಂಡ ಸಹಕಾರ ಸಂಘದ 2021-22ನೇ ಸಾಲಿನ 69ನೇ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷರು ಹಾಗೂ ತಾಲ್ಲೂಕಿನ ಕ್ಷೇತ್ರಶಿಕ್ಷಣಾಧಿಕಾರಿಗಳಾದ ಶ್ರೀಮಾನ್ ಸಿ.ಎನ್.ರಾಜುರವರ ಘನ ಅಧ್ಯಕ್ಷತೆಯಲ್ಲಿ ದಿನಾಂಕ : 17.09.2022ನೇ ಶನಿವಾರ ಬೆಳಿಗ್ಗೆ 11.00 ಘಂಟೆಗೆ ನಂಜನಗೂಡು ಟೌನ್ ಹುಲ್ಲಹಳ್ಳಿ ವೃತ್ತದಲ್ಲಿರುವ (ಕೌಸಲ್ಯ ಕಾಂಪ್ಲೆಕ್ಸ್) ಶ್ರಾವಣ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರುಗಳಿಗೆ ಮಹಾಸಭೆ ನೋಟೀಸ್‌ಗಳನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು, ಕಾರಣಾಂತರಗಳಿಂದ ತಲುಪದೇ ಇದ್ದಲ್ಲಿ ಇದನ್ನೇ ಮಹಾಸಭೆಗೆ ಆಹ್ವಾನ ಎಂದು ಭಾವಿಸಿ ಸಭೆಗೆ ಆಗಮಿಸಿ ತಮ್ಮ ಪೂರ್ಣ ಸಹಕಾರವನ್ನು ನೀಡಬೇಕಾಗಿ ಈ ಮೂಲಕ ಕೋರಿದೆ.

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ,
ಸಹಿ/- (ಜಿ.ಶಿವಕುಮಾರ್), ಕಾರ್ಯದರ್ಶಿ,



## ಆರೋಗ್ಯ ಮತ್ತು ಕುಟುಂಬ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ.)

ಯಶೋಧ ಆರ್ಕೇಡ್, ನಂ.2014, ಹೊಸ ನಂ, ಡಿ-6, 2ನೇ ಮಹಡಿ,
ಸೀಬಯ್ಯ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು-570001

ಮಾನ್ಯರೇ, 2021-2022ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ: 18.09.2022ರಂದು ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಪಂಡಿತ್ ಶ್ರೀ. ನಾರಾಯಣಚಾರ್ಯ ಕಲ್ಯಾಣ ಮಂದಿರ, ದಿವಾನ್ಸ್ ರಸ್ತೆ, ಚಾಮರಾಜ ಜೋಡಿ ರಸ್ತೆ. (100) ಅಡಿ ರಸ್ತೆ, ಮೈಸೂರು-570024 ಇಲ್ಲಿ ಏರ್ಪಡಿಸಲಾಗಿದೆ. ಮಹಾಸಭೆಯ ನೋಟಿಸನ್ನು ಈಗಾಗಲೇ ಸಂಘದ ಎಲ್ಲಾ ಸದಸ್ಯರಿಗೆ ಕಳುಹಿಸಿಕೊಡಲಾಗಿದೆ. ಒಂದು ವೇಳೆ ನೋಟಿಸು ತಲುಪದಿದ್ದರೆ ಇದನ್ನೇ ಆಹ್ವಾನ ಪತ್ರಿಕೆ ಎಂದು ಪರಿಗಣಿಸಿ ತಪ್ಪದೇ ಹಾಜರಾಗಲು ಕೋರಿದೆ.

ಸಹಿ/- (ಡಿ.ವೀಣಾ), ಮುಖ್ಯಕಾರ್ಯನಿರ್ವಹಣಾಧಿಕಾರಿ



Promotional Feature

# ಬಿಜೆಪಿಯ ಭವಿಷ್ಯದ ಭರವಸೆ ನಾಯಕ

# ಅರುಣ್‌ಕುಮಾರ್‌ಗೌಡ



ಮೈಸೂರು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡ ಎನ್.ಅರುಣ್‌ಕುಮಾರ್ ಗೌಡ ಅವರು ಜನಾನುರಾಗಿ ಯುವ ನಾಯಕರಾಗಿ ಗುರುತಿಸಿಕೊಂಡಿದ್ದಾರೆ. ವಿವಿಧ ಹಂತಗಳಲ್ಲಿ ಪಕ್ಷದ ಬಲವರ್ಧನೆಗೆ ದುಡಿದಿರುವ ಇವರು, ಸರ್ಕಾರ ಹಾಗೂ ಜನರ ನಡುವಿನ ಕೊಂಡಿಯಾಗಿ ಕೆಲಸ ಮಾಡುತ್ತಿದ್ದಾರೆ. ಪಕ್ಷ ಸಂಘಟನೆ ಜೊತೆಗೆ ಮನೆ ಮಗನಂತೆ ಜನರ ಕಷ್ಟ-ಸುಖದಲ್ಲಿ ಭಾಗಿಯಾಗುವ ಅತ್ಯಂತ ಸ್ನೇಹಜೀವಿ. ಬೋಗಾದಿ ಗ್ರಾಮದ ನಂಜೇಗೌಡ ಹಾಗೂ ಜಯಲಕ್ಷ್ಮಮ್ಮ ದಂಪತಿ ಪುತ್ರ ಅರುಣ್‌ಕುಮಾರ್ ಗೌಡರು ಎಂಬಿಎ ಪದವೀಧರ. ವಿದ್ಯಾರ್ಥಿ ದೆಸೆಯಿಂದಲೇ ಜನಪರ ಹೋರಾಟದ ಮೂಲಕ ನಾಯಕತ್ವದ ಗುಣ ಬೆಳೆಸಿಕೊಂಡಿರುವ ಇವರು, ಪಕ್ಷ ಸಂಘಟನೆ ಮೂಲಕ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸೀಮಿತವಾಗದೆ ಜಿಲ್ಲೆಯಾದ್ಯಂತ ಚಿರಪರಿಚಿತರಾಗಿದ್ದಾರೆ. ಸಂಘಟನೆ ಹಾಗೂ ಸಾಮಾಜಿಕ ಕಾರ್ಯಗಳ ಮೂಲಕ ಮನೆ ಮಾತಾಗಿರುವ ಅರುಣ್‌ಕುಮಾರ್ ಗೌಡ, ರಾಜಕೀಯ ರಂಗದಲ್ಲಿ ಉನ್ನತ ಸ್ಥಾನಕ್ಕೇರಬೇಕೆಂಬ ಅಭಿಲಾಷೆ ಕ್ಷೇತ್ರದ ಜನರದ್ದಾಗಿದೆ.



**ಕಾಲೇಜು ದಿನಗಳಿಂದಲೇ ಹೋರಾಟ:** ಅರುಣ್‌ಕುಮಾರ್‌ಗೌಡ ಅವರು ಪಿಯು ವಿದ್ಯಾರ್ಥಿಯಾಗಿದ್ದಾಗಲೇ ಎಬಿವಿಪಿ ಸಂಘಟನೆಯಲ್ಲಿ ಸಕ್ರಿಯರಾಗಿದ್ದರು. ವಿದ್ಯಾರ್ಥಿಗಳ ಪರ ಹಲವು ಹೋರಾಟದಲ್ಲಿ ಭಾಗಿಯಾಗಿದ್ದರು. ತಮ್ಮ ಸಂಗಡಿಗರು ಮಾತ್ರವಲ್ಲದೆ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳನ್ನು ಸಂಪರ್ಕಿಸಿ ಹೋರಾಟಕ್ಕೆ ಸಂಘಟಿಸುತ್ತಿದ್ದರು. ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಪ್ರತಿಭಟನೆ, ಧರಣಿಗಳಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವ ಮೂಲಕ ಇತರೆ ವಿದ್ಯಾರ್ಥಿಗಳಿಗೆ ಪ್ರೇರಣೆ-ಯಾಗುತ್ತಿದ್ದರು. ಹೀಗೆ ಸಂಘಟನಾ ಕಲೆಯನ್ನು ಕರಗತ ಮಾಡಿಕೊಂಡಿರುವ ಅರುಣ್ ಕುಮಾರ್ ಗೌಡ ಅವರಲ್ಲಿ ನಾಯಕತ್ವ ಗುಣ ಹಾಸುಹೊಕ್ಕಾಗಿದೆ ಎಂಬುದು ಅವರ ಸಹಚರರ ಅಭಿಪ್ರಾಯವಾಗಿದೆ.

**ಅಟಲ್ ಬಿಹಾರಿ ವಾಜಪೇಯಿ ಸ್ಫೂರ್ತಿ:** ಎಬಿವಿಪಿಯಲ್ಲಿ ಸಕ್ರಿಯರಾಗಿದ್ದ ಅರುಣ್ ಕುಮಾರ್ ಗೌಡ ಅವರು ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಅವರ ಆಡಳಿತಕ್ಕೆ ಮಾರು ಹೋಗಿದ್ದರು. ಅವರ ಪ್ರೇರಣೆಯಿಂದಲೇ ಬಿಜೆಪಿ ಯುವ ಕಾರ್ಯಕರ್ತನಾಗಿ ರಾಜಕೀಯ ರಂಗ ಪ್ರವೇಶಿಸಿದರು. ಯಾವ ಪ್ರತಿಫಲಾಕ್ಷೆಯಿಲ್ಲದೆ ಸಾಮಾನ್ಯ ಕಾರ್ಯಕರ್ತನಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡರು. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಸಂಘಟನೆಯೇ ಆಗದಿರುವ ಸಂದರ್ಭದಲ್ಲಿ ಇವರು 1999ರಿಂದಲೇ ಸಕ್ರಿಯವಾದರು. ವಿಧಾನಸಭೆ ಹಾಗೂ ಲೋಕಸಭೆಗೆ ಒಟ್ಟಿಗೆ ಚುನಾವಣೆ ನಡೆದ ಸಂದರ್ಭದಲ್ಲಿ ಮನೆ ಮನೆಗೆ ತೆರಳಿ ಬಿಜೆಪಿಯತ್ತ ಮತ ಸೆಳೆಯುವಲ್ಲಿ ನಿರತರಾದರು. ಪರಿಣಾಮ ಚುನಾವಣೆಯಲ್ಲಿ ಇಡೀ ಕ್ಷೇತ್ರದಲ್ಲಿ ಬೋಗಾದಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಅತೀ ಹೆಚ್ಚು ಮತಗಳು ಬಿಜೆಪಿಗೆ ದೊರಕಿಸಿಕೊಡುವಲ್ಲಿ ಯಶಸ್ವಿಯಾಗಿದ್ದರು.

**ಗ್ರಾಪಂ ಸದಸ್ಯನಾಗಿಯೂ ಸೇವೆ:** ಯಾವುದೇ ಪಕ್ಷ ಶಕ್ತಿಯುತವಾಗಿ ಬೆಳೆಯುವಲ್ಲಿ ತಳಮಟ್ಟದ ಸಂಘಟನೆ ಬಹಳ ಮುಖ್ಯ. ಇದು ಅರುಣ್ ಕುಮಾರ್ ಗೌಡ ಅವರಿಗೆ ತಿಳಿದಿದ್ದರಿಂದಲೇ ಪ್ರತಿ ಬೂತ್ ಮಟ್ಟದಲ್ಲೂ ಪಕ್ಷದ ಸಂಘಟನೆಗೆ ಶ್ರಮಿಸಿದ್ದರು. ಪರಿಣಾಮ ಅವರು ಚುನಾವಣಾ ರಾಜಕೀಯದಲ್ಲೂ ಗೆಲುವಿನ ಹೆಜ್ಜೆ ಇಡಲು ಕಾರಣವಾಯಿತು. 2010ರಲ್ಲಿ ಬೋಗಾದಿ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವಿನ ನಗೆ ಬೀರಿದರು. ಆ ಸಂದರ್ಭದಲ್ಲಿ ಬೋಗಾದಿ ಗ್ರಾಮ ಪಂಚಾಯ್ತಿಯಲ್ಲಿ ಕಮಲ ಅರಳಿತ್ತು. ಅಂ-ದರೆ ಬಿಜೆಪಿ ಬೆಂಬಲಿತ ಸದಸ್ಯೆ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದರು. ಅದರಲ್ಲಿ ಅರುಣ್ ಕುಮಾರ್ ಗೌಡ ಅವರ ಪರಿಶ್ರಮ ಪ್ರಧಾನವಾಗಿತ್ತು. ನಂತರದಲ್ಲಿ ತಾಪಂ ಚುನಾವಣೆಯಲ್ಲೂ ಶಕ್ತಿ ಪ್ರದರ್ಶಿಸಿದ್ದು ವಿಶೇಷವಾಗಿತ್ತು. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲೇ ಬೋಗಾದಿ ತಾಪಂ ಕ್ಷೇತ್ರದಲ್ಲಿ ಮಾತ್ರ ಬಿಜೆಪಿ ಅಭ್ಯರ್ಥಿ ಗೆಲುವು ಸಾಧಿಸಿದ್ದರು. ಇದ-ಕ್ಕೆ ಅರುಣ್ ಕುಮಾರ್ ಗೌಡ ಅವರ ಸಂಘಟನೆ ಹಾಗೂ ಪರಿಶ್ರಮ ಪ್ರಮುಖ ಕಾರಣ ಎಂದ-ರೆ ಅತಿಶಯೋಕ್ತಿಯಾಗದು ಎಂದು ಕ್ಷೇತ್ರದ ಕಾರ್ಯಕರ್ತರು ಹೇಳುತ್ತಾರೆ.

**ಬಿಜೆಪಿಯನ್ನು ಮತ್ತಷ್ಟು ಸದೃಢಗೊಳಿಸುವ ಸಂಕಲ್ಪ:** ಚಾಮುಂಡೇಶ್ವರಿ ಕ್ಷೇತ್ರದ ಜನರಲ್ಲಿ ಬಿಜೆಪಿ ಬಗ್ಗೆ ವಿಶೇಷವಾದ ಒಲವಿದೆ. ಆದರೆ ಅದನ್ನು ಸಮರ್ಪಕ ರೀತಿಯಲ್ಲಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಮತ್ತಷ್ಟು ಕೆಲಸ ಮಾಡಬೇಕಿದೆ. ಪ್ರತಿಪಕ್ಷದವರು ಟೀಕಿಸುವುದು ಸಹಜ. ಆದರೆ ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದ ಬಗ್ಗೆ ಜನರಿಗೆ ಚೆನ್ನಾಗಿ ತಿಳಿದಿದೆ. ಅವರ ಅತ್ಯುತ್ತಮ ಹಾಗೂ ಸಮರ್ಥ ಆಡಳಿತವನ್ನು ಮೆಚ್ಚಿದ್ದಾರೆ. ಹಾಗೆಯೇ ರಾಜ್ಯದಲ್ಲೂ ಬಿಜೆಪಿ ಸರ್ಕಾರ ಉತ್ತಮ ಆಡಳಿತ ನೀಡಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಸಾಕಷ್ಟು ಜನಪರ ಕಾರ್ಯಕ್ರಮಗಳನ್ನು ನೀಡಿದ್ದಾರೆ. ರಾಜಕೀಯ ಮೇಲಾಟದಲ್ಲಿ ಬಿಜೆಪಿ ಜನಪರ ಕಾರ್ಯಗಳ ಬಗ್ಗೆ ಜನರಿಗೆ ತಿಳಿಸುವುದು ಬಹಳ ಮುಖ್ಯವಾಗಿದೆ. ಹಾಗಾಗಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿಯನ್ನು ಮತ್ತಷ್ಟು ಸದೃಢಗೊಳಿಸಲು ಯುವ ಸಮೂಹ ಸಂಕಲ್ಪ ತೊಟ್ಟಿದೆ. ಜನರ ನಿರೀಕ್ಷೆಯಂತೆ ಕ್ಷೇತ್ರದಲ್ಲಿ ರಾಜಕೀಯ ಬದಲಾವಣೆಗೆ ಶ್ರಮಿಸುವ ನಿಟ್ಟಿನಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸಾಮಾನ್ಯ ಕಾರ್ಯಕರ್ತನಾಗಿದ್ದ ನನಗೆ ವಿವಿಧ ಜವಾಬ್ದಾರಿಗಳನ್ನು ನೀಡುವ ಮೂಲಕ ಇಡೀ ಜಿಲ್ಲೆಯಲ್ಲಿ ಗುರುತಿಸಿಕೊಳ್ಳಲು ಪಕ್ಷ ಅನುವು ಮಾಡಿಕೊಟ್ಟಿದೆ. ಎಲ್ಲಿ ಹೋದರೂ ಜನ ನನ್ನನ್ನು ಗುರುತಿಸಿ ಅತ್ಯಂತ ಪ್ರೀತಿ-ವಿಶ್ವಾಸದಿಂದ ಮಾತನಾಡಿಸುತ್ತಾರೆ ಎಂದರೆ ಅದಕ್ಕೆ ಪಕ್ಷವೇ ಕಾರಣ. ನನಗೆ ನೀಡಿದ ಜವಾಬ್ದಾರಿಯನ್ನು ಯಾವ ಅಪೇಕ್ಷೆಯಿಲ್ಲದೆ ಶಕ್ತಿಮೀರಿ ನಿರ್ವಹಿಸಿದ್ದೇನೆ ಎನ್ನುವ ಸಮಾಧಾನವಿದೆ. ಮುಂದೆಯೂ ಪಕ್ಷದ ಸಂಘಟನೆಗೆ ಕಾರ್ಯಕರ್ತರೊಡಗೂಡಿ ಕೆಲಸ ಮಾಡುತ್ತೇನೆ. ಬದಲಾವಣೆ ಆಶಯದೊಂದಿಗೆ ಪಕ್ಷ ಸಂಘಟನೆಗೆ ನಿರ್ಧರಿಸಿರುವ ಕಾರ್ಯಕರ್ತರ ದಂಡಿನಲ್ಲಿ ನಾನೂ ಒಬ್ಬನಾಗಿರುತ್ತೇನೆ. ಚುನಾವಣೆಗೆ ಸಂಬಂಧಿಸಿದಂತೆ ಪಕ್ಷ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧನಾಗಿ ಕೆಲಸ ಮಾಡುತ್ತೇನೆ. ಸದ್ಯ ಪಕ್ಷದ ಬಲವರ್ಧನೆ ನಮ್ಮ ಮುಂದಿರುವ ಗುರಿ ಎನ್ನುವುದು ಎನ್.ಅರುಣ್ ಕುಮಾರ್ ಗೌಡ ಅವರ ಸ್ಪಷ್ಟ ನುಡಿಯಾಗಿದೆ.

**ನಾಯಕರು-ಕಾರ್ಯಕರ್ತರೊಂದಿಗೆ ಉತ್ತಮ ಬಾಂಧವ್ಯ:** ಅರುಣ್ ಕುಮಾರ್‌ಗೌಡ ಅವರು ಪಕ್ಷದ ನಾಯಕರು ಹಾಗೂ ಕಾರ್ಯಕರ್ತರೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವುದು ಇವರ ಯಶಸ್ಸಿಗೆ ಪ್ರಮುಖ ಕಾರಣವಾಗಿದೆ. ಪಕ್ಷದ ಸ್ಥಳೀಯ ಶಾಸಕರು, ಸಂಸದರು ಮಾತ್ರವಲ್ಲದೆ ರಾಜ್ಯ ಮಟ್ಟದ ನಾಯಕರೊಂದಿಗೆ ಉತ್ತಮ ಒಡನಾಟ ಹೊಂದಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು, ಹಿರಿಯರಾದ ಆರ್.ಅಶೋಕ್, ಸಿ.ಟಿ.ರವಿ, ಸುನೀಲ್ ಕುಮಾರ್ ಸೇರಿದಂತೆ ಹಲವು ನಾಯಕರು ಅರುಣ್ ಕುಮಾರ್‌ಗೌಡರ ಕಾರ್ಯ ವೈಖರಿಯನ್ನು ಮೆಚ್ಚಿ ಬೆನ್ನುತಟ್ಟಿ ಶ್ಲಾಘಿಸಿದ್ದಾರೆ. ಅದರಂತೆ ಪಕ್ಷದ ಕಾರ್ಯಕರ್ತರೊಂದಿಗಿದ್ದು ಅವರಂತೆಯೇ ಶ್ರಮ ವಹಿಸುವ ಕಾರಣ ಪರಸ್ಪರ ಬಾಂಧವ್ಯ ಗಟ್ಟಿಯಾಗಿದೆ. ಕಾರ್ಯಕರ್ತರ ಅಭಿಪ್ರಾಯ, ಸಮಸ್ಯೆಗಳನ್ನು ಪಕ್ಷದ ನಾಯಕರ ಗಮನಕ್ಕೆ ತಂದು ಪರಿಹರಿಸುವಲ್ಲಿ ಮುಂಚೂಣಿಯಲ್ಲಿರುವ ಮುಖಂಡರೆನಿಸಿಕೊಂಡಿದ್ದಾರೆ.

**ನಾಯಕರು-ಕಾರ್ಯಕರ್ತರೊಂದಿಗೆ ಉತ್ತಮ ಬಾಂಧವ್ಯ:** ಕ್ಷೇತ್ರದ ಜನರ ವಿಶೇಷ ಪ್ರೀತಿಗೆ ಪಾತ್ರವಾಗಿದ್ದಾರೆರಾಜಕೀಯ ರಂಗದಲ್ಲಿ ಬಿಜೆಪಿ ಮುಖಂಡರಾಗಿ ಗುರುತಿಸಿಕೊಂಡಿದ್ದರೂ ಅರುಣ್ ಕುಮಾರ್ ಗೌಡರಿಗೆ ಪಕ್ಷಾತೀತವಾಗಿ ಜನ ಬೆಂಬಲವಿದೆ. ಜನಪರ ಕಾಳಜಿವುಳ್ಳ ಅರುಣ್ ಕುಮಾರ್ ಗೌಡ ಎಂದ-ರೆ ಎಲ್ಲರಿಗೂ ವಿಶೇಷವಾದ ಪ್ರೀತಿ ಇದೆ. ಅದರಂತೆ ಬಿಜೆಪಿ ಪಾಳಯದಲ್ಲೂ ಇವರೆಂದರೆ ಅಚ್ಚುಮೆಚ್ಚು. ತಳಮಟ್ಟದಿಂದ ಪಕ್ಷ ಸಂಘಟನೆಯಲ್ಲಿ ತೊಡಗಿರುವ ಅರುಣ್ ಕುಮಾರ್ ಗೌಡ, ಪಕ್ಷ ನೀಡಿದ ಪ್ರತಿಯೊಂದು ಜವಾಬ್ದಾರಿಯನ್ನೂ ಸಮರ್ಥವಾಗಿ ನಿರ್ವಹಿಸಿದ್ದಾರೆ. ಹಂತ ಹಂತವಾಗಿ ಬೆಳೆದು ಯುವ ನಾಯಕರಾಗಿ ಗುರುತಿಸಿಕೊಂಡಿದ್ದಾರೆ. ಇವರು ರಾಜಕೀಯವಾಗಿ ಮತ್ತಷ್ಟು ಉನ್ನತ ಸ್ಥಾನಕ್ಕೇರಿ ಜನಸೇವೆ ವಿಸ್ತರಿಸಿಕೊಳ್ಳಬೇಕು. ಕ್ಷೇತ್ರದ ರಾಜಕೀಯದಲ್ಲಿ ಬದಲಾವಣೆ ಗಾಳಿ ಬೀಸುತ್ತಿರುವ ಈ ಸಂದರ್ಭದಲ್ಲಿ ಅರುಣ್ ಕುಮಾರ್ ಅವರಂತಹ ಸಮರ್ಥರನ್ನು ಪಕ್ಷ ಬಳಸಿಕೊಳ್ಳಬೇಕು. ಜನರ ನಡುವೆ ಇದ್ದು ಕಷ್ಟ-ಸುಖದಲ್ಲಿ ಭಾಗಿಯಾಗುವ ಅರುಣ್ ಕುಮಾರ್ ಗೌಡರ ಸೇವೆ, ಸಂಘಟನೆಯನ್ನು ಪರಿಗಣಿಸಿ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧೆಗೆ ಅವಕಾಶ ಮಾಡಿಕೊಡಬೇಕು. ಪಕ್ಷಾತೀತವಾಗಿ ಜನರ ಪ್ರೀತಿ-ವಿಶ್ವಾಸ ಗಳಿಸಿರುವ ಅರುಣ್ ಕುಮಾರ್ ಗೌಡ ಅವರಿಗೆ ಖಂಡಿತವಾಗಿ ಜನ ಬೆಂಬಲಿಸುತ್ತಾರೆ ಎನ್ನುವುದು ಕ್ಷೇತ್ರದ ಹಲವರು ಒತ್ತಾಸೆಯಾಗಿದೆ. ಅರುಣ್ ಕುಮಾರ್ ಗೌಡರ ಹುಟ್ಟುಹಬ್ಬವನ್ನು ಕ್ಷೇತ್ರದಾದ್ಯಂತ ಅರ್ಥಪೂರ್ಣವಾಗಿ ಆಚರಿಸಲು ಅವರ ಹಿತೈಷಿಗಳು ಸಿದ್ಧತೆ ಮಾಡಿಕೊಂಡಿರುವುದು ಇದಕ್ಕೆ ಪೂರಕವೆನಿಸುತ್ತದೆ.





**ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದ ನಿಷ್ಠಾವಂತ:** ಅರುಣ್ ಕುಮಾರ್ ಗೌಡ ಅವರ ಸಂಘಟನಾತ್ಮಕ ಶಕ್ತಿಯನ್ನು ಗಮನಿಸಿದ ಬಿಜೆಪಿ, ಅವರಿಗೆ ವಿವಿಧ ಜವಾಬ್ದಾರಿಗಳನ್ನು ನೀಡುವ ಮೂಲಕ ಪಕ್ಷ ಸಂಘಟನೆಗೆ ಅವಕಾಶ ನೀಡಿದೆ. ಆರಂಭದಿಂದ 15 ವರ್ಷ ಬಿಜೆಪಿ ಯುವಮೋರ್ಚಾ ಘಟಕದಲ್ಲಿ ಶ್ರಮಿಸಿದ ಇವರಿಗೆ ಮುಂಚೂಣಿ ವಿಭಾಗದಲ್ಲೂ ಅನುವು ಮಾಡಿಕೊಟ್ಟಿದೆ. ಮೊದಲಿಗೆ ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ಯುವಮೋರ್ಚಾ ಉಪಾಧ್ಯಕ್ಷನಾಗಿ ನೇಮಕಗೊಂಡ ಇವರು ಪಕ್ಷದ ಬಲವರ್ಧನೆಗೆ ಶ್ರಮಿಸಿದರು. ಇದನ್ನು ಮನಗಂಡು ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು. ನಂತರ ಜಿಲ್ಲಾ ಯುವಮೋರ್ಚಾ ಕಾರ್ಯದರ್ಶಿಯಾಗಿ ಬಳಿಕ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಯುವಮೋರ್ಚಾ ಜಿಲ್ಲಾಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಜಿಲ್ಲೆಯಾದ್ಯಂತ ಪ್ರವಾಸ ಮಾಡಿ ಯುವ ಸಮುದಾಯವನ್ನು ಸಂಘಟಿಸಿ, ಪಕ್ಷದ ಬಲ ಹೆಚ್ಚಿಸುವಲ್ಲಿ ಯಶಸ್ವಿಯಾಗಿದ್ದರು. ಇವರ ಕಾರ್ಯ ವೈಖರಿಯನ್ನು ಮೆಚ್ಚಿದ ಪಕ್ಷದ ನಾಯಕರು, 2016ರಲ್ಲಿ ಮುಂಚೂಣಿ ಘಟಕದ ಜವಾಬ್ದಾರಿ ನೀಡಿದರು. ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಸ್ಥಾನ ನೀಡಿ, ಪ್ರೋತ್ಸಾಹಿಸಲಾಯಿತು. ವಿಶ್ವಾಸದಿಂದ ಪಕ್ಷ ನೀಡಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದ ಅವರು, ಕ್ಷೇತ್ರದ ಪ್ರತಿ ಬೂತ್‌ಗಳಿಗೂ ಭೇಟಿ ನೀಡಿ, ಪಕ್ಷವನ್ನು ಮತ್ತಷ್ಟು ಸಂಘಟಿಸುವಲ್ಲಿ ಸಫಲರಾದರು. ಕ್ಷೇತ್ರದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ನಡೆದ ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಅತೀ ಹೆಚ್ಚು ಮತ ಸಂದಾಯವಾಗಿದ್ದು ಗಮನಾರ್ಹ ಸಂಗತಿ. ಒಟ್ಟಾರೆ ಕ್ಷೇತ್ರದಲ್ಲಿ ಬಿಜೆಪಿ ಬಲವರ್ಧನೆಯಲ್ಲಿ ಅರುಣ್ ಕುಮಾರ್ ಗೌಡರ ಪಾತ್ರ ಪ್ರಮುಖವಾಗಿದೆ.








**ಸಾಮಾಜಿಕ ಕಾರ್ಯದಲ್ಲೂ ಎತ್ತಿದ ಕೈ:** ಒಂದೆಡೆ ಪಕ್ಷ ನೀಡಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸುವ ಮೂಲಕ ಪಕ್ಷ ಸಂಘಟನೆಯಲ್ಲಿ ನಿರತರಾಗಿರುವ ಅರುಣ್ ಕುಮಾರ್‌ಗೌಡರು ಅವರು ಮತ್ತೊಂದೆಡೆ ಸಾಮಾಜಿಕ ಕಾರ್ಯದಲ್ಲೂ ಎತ್ತಿದ ಕೈ. ಪಕ್ಷಾತೀತವಾಗಿ ಜನರ ಸಂಕಷ್ಟಕ್ಕೆ ಸ್ಪಂದಿಸುವ ಗುಣವುಳ್ಳವರು. ಸಮಸ್ಯೆ ಗಮನಕ್ಕೆ ಬಂದಾಕ್ಷಣ ಅದನ್ನು ಪರಿಹರಿಸುವ ನಿಟ್ಟಿನಲ್ಲಿ ಶಕ್ತಿ ಮೀರಿ ಶ್ರಮಿಸುವ ಜನಸೇವಕ. ಸರ್ಕಾರ ಹಾಗೂ ಜನರ ನಡುವಿನ ಸೇತುವೆಯಾಗಿ ಕಾರ್ಯ ನಿರ್ವಹಿಸುವ ಮಾನವೀಯ ವ್ಯಕ್ತಿ. ಕೊರೊನಾ ಸಂದರ್ಭದಲ್ಲೂ ಸೇನಾನಿಯಂತೆ ಕೆಲಸ ಮಾಡಿದ್ದರು. ಆ ಸಂದಿಗ್ಧ ಪರಿಸ್ಥಿತಿಯಲ್ಲಿ ವೈಯಕ್ತಿಕವಾಗಿ ಐದಾರು ಸಾವಿರ ಬಡವರು, ನಿಸ್ಸಹಾಯಕರಿಗೆ ದಿನಸಿ ಕಿಟ್ ವಿತರಿಸುವ ಮೂಲಕ ನೆರವಾಗಿದ್ದಾರೆ. ಚಿಕಿತ್ಸೆ, ಲಸಿಕೆ ಇನ್ನಿತರ ವ್ಯವಸ್ಥೆಗಾಗಿ ತಮ್ಮ ಶಕ್ತಿ ಬಳಸಿ ಸಹಾಯ ಮಾಡಿದ್ದಾರೆ.

# ಮಾಲ್ದಾರೆ ಸಮೀಪ ಮತ್ತೆ ಹುಲಿಗೆ ಹಸು ಬಲಿ

## ಇದುವರೆಗೂ 15ಕ್ಕೂ ಹೆಚ್ಚು ಜಾನುವಾರು ಬಲಿ; ಆತಂಕದಲ್ಲಿ ಗ್ರಾಮಸ್ಥರು





ಸಿದ್ದಾಪುರ, ಸೆ.14– ಸಿದ್ದಾಪುರ ಸುತ್ತ–ಮುತ್ತ ದಿನದಿಂದ ದಿನ ಹುಲಿ ಕಾಟ ಹೆಚ್ಚಾಗುತ್ತಿದ್ದು, ಇದೀಗ ಮತ್ತೊಂದು ಹಸು ಬಲಿಯಾಗಿದೆ. ವಿರಾಜಪೇಟೆ ತಾಲೂಕಿನ ಮಾಲ್ದಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಘಟ್ಟದಳ್ಳ ತಮಿಳು ಶಾಲೆ ಬಳಿ ಈ ಘಟನೆ ಸಂಭವಿಸಿದ್ದು, ಹುಲಿ ದಾಳಿಯನ್ನು ಕಣ್ಣಾರೆ ಕಂಡ ಕಾರ್ಮಿಕರು ಭಯಭೀತರಾಗಿ ಓಡಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಿಷಯ ತಿಳಿದ ಸ್ಥಳೀಯರು ಸ್ಥಳಕ್ಕಾಗಮಿಸಿ ಜೋರಾಗಿ ಕಿರಿಚಾಟ ಮಾಡಿದ ಸಂದರ್ಭ ಹುಲಿ ಕಾಫಿ ತೋಟದತ್ತ ನುಗ್ಗಿ ಪರಾರಿಯಾಗಿದೆ. ಕಾರ್ಮಿಕ ಜಯಚಂದ್ರ ಎಂಬವರಿಗೆ ಸೇರಿದ ಎರಡನೇ ಹಸುವಾಗಿದ್ದು, ಎರಡು ದಿನಗಳ ಹಿಂದೆ ಮತ್ತೊಂದು ಹಸುವನ್ನು ಹುಲಿ ಬಲಿ ತೆಗೆದುಕೊಂಡಿತ್ತು. ಇದೀಗ ಎರಡು ಹಸುಗಳನ್ನು ಕಳೆದು ಕೊಂಡಿರುವ ಕಾರ್ಮಿಕ ಜಯಚಂದ್ರ ಕಂಗಾಲಾಗಿದ್ದಾರೆ.

ಘಟ್ಟದಳ ಪಾಲಿಬೆಟ್ಟ ಮಾರ್ಗದ ಮುಖ್ಯ ರಸ್ತೆಯ ತಮಿಳು ಶಾಲೆ ಬಳಿ ಹಸುವನ್ನು ಮೇಯಲು ಬಿಟ್ಟಿದ್ದರು. ಈ ವೇಳೆ ಕಾಫಿ ತೋಟದಿಂದ ಬಂದ ಹುಲಿ ಹಸು ಮೇಲೆ ಹಾತ್ತನೆ ದಾಳಿ ಮಾಡಿತು.ಕಾಫಿ ತೋಟಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಮನೆಗೆ ಹಿಂತಿರುಗುತ್ತಿದ್ದ ವೇಳೆ ಘಟನೆಯನ್ನು ಕಂಡು ಭಯಭೀತವಾಗಿ ಓಡಿ ಹೋದರು.

ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳನ್ನು ಸ್ಥಳೀಯರು ತರಾಟೆಗೆ ತೆಗೆದುಕೊಂಡು ಕಾರ್ಯಾಚರಣೆ ಚುರುಕುಗೊಳಿಸಿ ಹುಲಿ ಸೆರೆ ಹಿಡಿಯಬೇಕೆಂದು ಒತ್ತಾಯಿಸಿದರು. ಸ್ಥಳಕ್ಕೆ ಮಾಲ್ದಾರೆ ಗ್ರಾಪಂ ಅಧ್ಯಕ್ಷ ಸಮೀರ್ ಭೇಟಿ ನೀಡಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಗಡುವು ನೀಡಿದ್ದಾರೆ. ಕೂಡಲೇ ಹುಲಿ ಸೆರೆ ಹಿಡಿಯದಿದ್ದಲ್ಲಿ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ವಲಯ ಕಾಂಗ್ರೆಸ್ ಅಧ್ಯಕ್ಷ ಸಜಿ ತೋಮಸ್ ಮಾತನಾಡಿ, ಮಾಲ್ದಾರೆ, ಹುಂಡಿ, ಬಾಡಗ ಬಾಣಂಗಾಲ, ಮೈಲಾಪುರ, ಘಟ್ಟದಳ್ಳ, ಮಟ್ಟ ಸೇರಿದಂತೆ ಹಲವೆಡೆ ನಿರಂತರ ಕಾಡು ಪ್ರಾಣಿಗಳ ಹಾವಳಿಯಿಂದ ಬೆಳೆಗಾರರು ಕಾರ್ಮಿಕರು, ಶಾಲಾ ವಿದ್ಯಾರ್ಥಿಗಳು ಆತಂಕದ ಜೀವನ ನಡೆಸುವಂತಾಗಿದೆ ಎಂದರು.

ಕಳೆದ 3 ತಿಂಗಳಿನಿಂದ ನಿರಂತರವಾಗಿ ಹುಲಿ ಕಾಣಿಸಿಕೊಂಡು 15ಕ್ಕೂ ಹೆಚ್ಚು ಜಾನುವಾರುಗಳನ್ನು ಬಲಿ ತೆಗೆದುಕೊಂಡಿದೆ. ಕೂಡಲೇ ಸರ್ಕಾರ ಹಾಗೂ ಜನಪ್ರತಿನಿಧಿಗಳು, ಅಧಿಕಾರಿಗಳು ಎಚ್ಚೆತ್ತುಕೊಂಡು ಆದಷ್ಟು ಬೇಗ ಹುಲಿ ಸೆರೆ ಹಿಡಿಯದಿದ್ದಲ್ಲಿ ಕಾರ್ಮಿಕರು, ಬೆಳೆಗಾರರನ್ನು ಒಗ್ಗೂಡಿಸಿ ಅರಣ್ಯ ಇಲಾಖೆ ಕಚೇರಿ ಮುಂದೆ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.



ನಿವೃತ್ತ ಪ್ರಾಂಶುಪಾಲ ಪ್ರೊ. ನಿಂಗರಾಜು ಅವರ 'ನಂಗಾರು ನಕ್ಷತ್ರ' ಪುಸ್ತಕದ ಮುಖಪುಟವನ್ನು ಕೊಚ್ಚಿನ್‌ನಲ್ಲಿ ಬಿಡುಗಡೆ ಮಾಡಲಾಯಿತು. ಐಎಎಸ್ ಅಧಿಕಾರಿ ರಿಚರ್ಡ್ ವಿನ್‌ಸೆಂಟ್, ಯುಎಸ್ ಮಾಜಿ ಸೇನಾಧಿಕಾರಿ ವಿನಯ್, ಯು.ಎನ್. ಅಧಿಕಾರಿ ನಿತ್ಯಾನಂದ, ಜಿಎಸ್‌ಟಿ ಮತ್ತು ಕಸ್ಟಮ್ಸ್ ಕಮಿಷನರ್ ದೇವರಾಜ್, ಬಿಸಿಸಿಐ ಮಾಜಿ ಉಪಾಧ್ಯಕ್ಷ ಮ್ಯಾಥ್ಯೂ, ಮಲೆಯಾಳಂ ಚಿತ್ರನಟ ನಿಯಾಜ್ ಇತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

# ಹಿಂದಿ ದಿವಸ್ ವಿರೋಧಿಸಿ ಜೆಡಿಎಸ್ ಪ್ರತಿಭಟನೆ



ವಿರಾಜಪೇಟೆ, ಸೆ.14– ಕೇಂದ್ರ ಸರಕಾರ 'ಹಿಂದಿ ದಿವಸ್' ಆಚರಣೆ ಮಾಡುತ್ತಿರುವುದನ್ನು ವಿರೋಧಿಸಿ ಜೆಡಿಎಸ್ ವಿರಾಜಪೇಟೆ ತಾಲೂಕು ಘಟಕದ ವತಿಯಿಂದ ನಗರದ ಗಡಿಯಾರ ಕಂಬದ ಬಳಿ ಪ್ರತಿಭಟನೆ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ತಹಶೀಲ್ದಾರ್ ಅರ್ಚನಾ ಭಟ್ ಅವರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಜೆಡಿಎಸ್ ಪಕ್ಷದ ತಾಲೂಕು ಅಧ್ಯಕ್ಷ ಪಿ.ಎ.ಮಂಜುನಾಥ್ ಮಾತನಾಡಿ ಹಿಂದಿ ಭಾಷೆಗೆ ಕೇವಲ 400 ವರ್ಷ. ಆದರೆ ಕನ್ನಡ ಭಾಷೆಗೆ ಸುಮಾರು 2,500 ವರ್ಷಗಳ ಇತಿಹಾಸವಿದೆ. ಆದ್ದರಿಂದ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಲು ರಾಜ್ಯದ ಜನತೆ ಹೋರಾಟ ನಡೆಸುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಕನ್ನಡ ಭಾಷೆಯ ಜೊತೆಗೆ ತುಳು, ಕೊಂಕಣಿ, ಕೊಡವ ಸೇರಿದಂತೆ ನಾನಾ ಭಾಷೆ ಬೆಸೆದುಕೊಂಡು ಏಕತೆಯಲ್ಲಿ ಮುನ್ನಡೆಯುತ್ತಿದೆ. ಕರ್ನಾಟಕದಲ್ಲಿ ಅನೇಕ ಆಚಾರ ವಿಚಾರಗಳನ್ನು ಒಳಗೊಂಡ ಪವಿತ್ರ ಭೂಮಿಯಾಗಿದೆ. ಇಂತಹ ನೆಲದಲ್ಲಿ ಹಿಂದಿ ಭಾಷೆಯನ್ನು ಹೇರುವ ಮೂಲಕ ಜನರ ಭಾವನೆಗೆ ನೋವುಂಟು ಮಾಡುವುದು ಸರಿಯಲ್ಲ. ಆದ್ದರಿಂದ ಹಿಂದಿ ಮಾತನಾಡುವ ಪ್ರದೇಶಗಳಿಗೆ ಹಿಂದಿ ದಿವಸ್ ಸೀಮಿತಗೊಳಿಸಲಿ. ಇದನ್ನು ಪ್ರಾದೇಶಿಕ ಭಾಷೆಯ ನೆಲೆಗಟ್ಟಿರುವ ರಾಜ್ಯಕ್ಕೆ ಬಲವಂತದಿಂದ ತರುವುದು ಸರಿಯಲ್ಲ ಎಂದರು.

ಪ್ರತಿಭಟನೆಯಲ್ಲಿ ಜೆಡಿಎಸ್ ಪಕ್ಷದ ಅಲ್ಪ ಸಂಖ್ಯಾತ ಘಟಕದ ಅಧ್ಯಕ್ಷ ಮಜೀದ್, ಯುವ ಘಟಕದ ಸೈಮುದ್ದೀನ್, ಜಯಮ್ಮ, ಪಕ್ಷದ ಪ್ರಮುಖರಾದ ಬಿ.ಎ.ಜುಬೇದ, ಪಿ.ರವಿಮಾದಪ್ಪ, ಬಾಳೆಕುಟ್ಟಿರ ದಿನಿ, ಟಿ.ಆರ್.ಹರ್ಷ, ಪಾಣತಲೆ ಸತ್ಯ, ಆಶೀಕ್, ಆಶ್ರಫ್ ಅಲಿ, ನೌಪುಲ್, ಎಂ.ಎನ್.ಗಫೂರ್, ಎ.ಸಾಧಿಕ್, ನೂರ್ ಅಹ್ಮದ್, ಎ.ಸನ್ನು, ಸಿ.ಗಣಪತಿ, ಕೆ.ಬೋಪಣ್ಣ, ಸ್ಲೇನ್ ಮತ್ತಿತರರು ಉಪಸ್ಥಿತರಿದ್ದರು.

# ಸೆ.30, ಕರ್ನಾಟಕಕ್ಕೆ ಭಾರತ್ ಜೋಡೋ ಯಾತ್ರೆ

ಮಡಿಕೇರಿ,ಸೆ.14– ಭಾರತೀಯ ಜನತಾ ಪಾರ್ಟಿಯ ಒಡೆದು ಆಳುವ ನೀತಿಯನ್ನು ವಿರೋಧಿಸಿ, ಸಮಾಜದಲ್ಲಿ ಐಕ್ಯತಾ ಮನೋಭಾವನೆಯನ್ನು ಮೂಡಿಸುವ ನಿಟ್ಟಿನಲ್ಲಿ ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್‌ನ 'ಭಾರತ್ ಜೋಡೋ' ಯಾತ್ರೆ ಕರ್ನಾಟಕವನ್ನು ಸೆ.30ರಂದು ಗುಂಡ್ಲುಪೇಟೆ ಮೂಲಕ ಪ್ರವೇಶಿಸಲಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಲಕ್ಷ್ಮಣ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಅಂದು ಗುಂಡ್ಲುಪೇಟೆಯಲ್ಲಿ ಭಾರತ್ ಜೋಡೋ ಯಾತ್ರೆಯನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯಿಂದ ಅದ್ಧೂರಿಯಾಗಿ ಸ್ವಾಗತಿಸಲಿದ್ದು, ಲಕ್ಷಕ್ಕೂ ಹೆಚ್ಚಿನ ಮಂದಿ ಪಾಲ್ಗೊಳ್ಳಲಿದ್ದಾರೆ.

ಈ ಯಾತ್ರೆ ರಾಜ್ಯದಲ್ಲಿ 511 ಕಿಮೀ ದೂರವನ್ನು ಕ್ರಮಿಸಲಿದೆ ಎಂದು ಎಂ.ಲಕ್ಷ್ಮಣ್ ತಿಳಿಸಿದರು. ಈ ಯಾತ್ರೆ ಕೇವಲ ಕಾಂಗ್ರೆಸ್‌ಗೆ ಮಾತ್ರ ಸೀಮಿತವಾಗಿಲ್ಲ, ಯಾತ್ರೆಯ ಉದ್ದಕ್ಕೂ ರೈತ ಸಂಘಟನೆಗಳು, ಮಹಿಳಾ ಸಂಘಟನೆಗಳು ಮತ್ತು ಸಾರ್ವಜನಿಕರು ತಮ್ಮ ಬೆಂಬಲ ವ್ಯಕ್ತಪಡಿಸಿ ಕೈಜೋಡಿಸುತ್ತಿರುವುದಾಗಿ ತಿಳಿಸಿದರು. ಗುಂಡ್ಲುಪೇಟೆಗೆ ಆಗಮಿಸುವ ಭಾರತ್ ಜೋಡೋ ಯಾತ್ರೆ, ಬಳಿಕ ಚಾಮರಾಜನಗರದ ಕಳಲೆಗೆ ಆಗಮಿಸಲಿದೆ. ಈ ಸಂದರ್ಭ ಕೊಡಗಿನ 4 ಸಾವಿರಕ್ಕೂ ಹೆಚ್ಚಿನ ಕಾಂಗ್ರೆಸ್ಸಿಗರು, ಈ ಜಿಲ್ಲೆಯ ಸಂಸ್ಕೃತಿಯನ್ನು ಬಿಂಬಿಸುವ ಕಲಾ ತಂಡಗಳೊಂದಿಗೆ ಯಾತ್ರೆಯನ್ನು ಸ್ವಾಗತಿಸಲಿದ್ದಾರೆ ಎಂದರು.

ಅ.1ರಂದು ನಂಜನಗೂಡಿಗೆ ತೆರಳುವ ಯಾತ್ರೆ ಅ.2ರಂದು ಚಾಮರಾಜನಗರದಲ್ಲಿ ಮಹಾತ್ಮಾ ಗಾಂಧೀಜಿಯವರು ಭೇಟಿ ನೀಡಿದ್ದ ಬದನವಾಳುವಿಗೆ ಭೇಟಿ ನೀಡಿ ಸಂಜೆ ಮೈಸೂರಿನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಅ.3ರಂದು ಮೈಸೂರಿನಿಂದ ಶ್ರೀರಂಗಪಟ್ಟಣ ಬಳಿಕ ಪಾಂಡವಪುರಕ್ಕೆ ಹೀಗೆ 21 ದಿನಗಳ ಕಾಲ ಭಾರತ್ ಜೋಡೋ ಯಾತ್ರೆ ಕರ್ನಾಟಕದಲ್ಲಿ ಸಂಚರಿಸಲಿದೆ. ಈ ನಡುವೆ ದಸರಾ ಉತ್ಸವದ ಹಿನ್ನೆಲೆ ಯಾತ್ರೆಗೆ ಅ.4 ಮತ್ತು 5 ಹಾಗೂ ಅ.18 ಮತ್ತು 19ರಂದು ಬಿಡುವು ಇರಲಿದೆ ಎಂದು ತಿಳಿಸಿದರು.

ವಿಧಾನ ಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ, ಕೆ.ಕೆ.ಮಂಜುನಾಥ್‌ಕುಮಾರ್ ಈ ವೇಳೆ ಉಪಸ್ಥಿತರಿದ್ದರು.

# ಮೈಷುಗರ್ ವ್ಯಾಪ್ತಿಯ ಕಬ್ಬು ಕಟಾವಿಗೆ ಡಿಸಿ ಸೂಚನೆ



ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬು ನುರಿಸುವಿಕೆ ನಿಗದಿಪಡಿಸಿರುವ ಗುರಿಯಂತೆ ಪ್ರತಿದಿನ ನಡೆಯಬೇಕು. ಕಡಿಮೆ ಗುರಿ ಸಾಧಿಸಿರುವ ಕಾರ್ಖಾನೆಗಳು ಕಬ್ಬು ನುರಿಸುವಿಕೆಯನ್ನು ಹೆಚ್ಚು ಮಾಡುವ ಮೂಲಕ ರೈತರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು

– ಎಸ್.ಅಶ್ವಥಿ, ಜಿಲ್ಲಾಧಿಕಾರಿ

ಮಂಡ್ಯ, ಸೆ.14– ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳು ತಮ್ಮ ವ್ಯಾಪ್ತಿಗೆ ಮೀಸಲಿರಿಸಿರುವ ಕಬ್ಬನ್ನು ಮಾತ್ರ ಕಟಾವು ಮಾಡಬೇಕು. ಬೇರೆ ಸಕ್ಕರೆ ಕಾರ್ಖಾನೆಗೆ ನಿಗದಿಪಡಿಸಿರುವ ಕಬ್ಬನ್ನು ಕಟಾವು ಮಾಡಬಾರದು ಎಂದು ಸಕ್ಕರೆ ಕಾರ್ಖಾನೆ ಮುಖ್ಯಸ್ಥರಿಗೆ ಜಿಲ್ಲಾಧಿಕಾರಿ ಎಸ್.ಅಶ್ವತಿ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಹಂಗಾಮಿನ ಕಬ್ಬು ನುರಿಸುವಿಕೆ ಹಾಗೂ ಹಣ ಪಾವತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೈಷುಗರ್ ಸಕ್ಕರೆ ಕಾರ್ಖಾನೆ ಪ್ರಾರಂಭವಾಗಿದ್ದು, ಈ ಕಾರ್ಖಾನೆ ವ್ಯಾಪ್ತಿಗೆ ಮೀಸಲಿರುವ ಕಬ್ಬನ್ನು ಬೇರೆ ಕಾರ್ಖಾನೆ ಅವರು ಕಟಾವು ಮಾಡಿಕೊಳ್ಳುತ್ತಿದ್ದು, ಇದರಿಂದ ಮೈಷುಗರ್ ಕಾರ್ಖಾನೆ ಕಬ್ಬು ನುರಿಸುವ ಕೆಲಸಕ್ಕೆ ತೊಂದರೆಯಾಗುತ್ತಿದೆ. ತಕ್ಷಣವೇ ಮೈಷುಗರ್ ವ್ಯಾಪ್ತಿಯ ಕಬ್ಬು ಕಟಾವು ಮಾಡುತ್ತಿದ್ದರೆ ನಿಲ್ಲಿಸಬೇಕು. ಕಟಾವನ್ನು ಮೈಷುಗರ್ ಕಾರ್ಖಾನೆ ಅವರೆ ಮುಂದುವರಿಸಲಿದ್ದಾರೆ ಎಂದರು.

ಜೂನ್, ಜುಲೈ ವೇಳೆಯಲ್ಲಿ ಮೈಷುಗರ್ ವ್ಯಾಪ್ತಿಯ ಕಬ್ಬನ್ನು ಬೇರೆ ಕಾರ್ಖಾನೆ ಅವರು ಕಟಾವು ಮಾಡುತ್ತಿದ್ದರು. ಕಾರ್ಖಾನೆ ಪ್ರಾರಂಭವಾಗದ ಹಿನ್ನೆಲೆ ಹಾಗೂ ರೈತರ ಹಿತದೃಷ್ಟಿಯಿಂದ ಕಟಾವಿಗೆ ಅವಕಾಶ ನೀಡಲಾಗಿತ್ತು. ಇದನ್ನು ಮುಂದುವರಿಸಬಾರದು ಎಂದು ಸೂಚಿಸಿದರು.

12 ರಿಂದ 14 ತಿಂಗಳ ಅವಧಿ ತುಂಬಿದ ಕಬ್ಬನ್ನು ಆದ್ಯತೆ ಮೇರೆಗೆ ಕಟಾವು ಮಾಡಬೇಕು. ಈ ಕುರಿತಂತೆ ಕಳೆದ ಬಾರಿ ಜಿಲ್ಲಾಡಳಿತಕ್ಕೆ ದೂರುಗಳು ಬಂದಿತ್ತು ಈ ಬಾರಿ ದೂರು ಬಾರದಂತೆ ಎಲ್ಲರೂ ಎಚ್ಚರಿಕೆ ವಹಿಸಬೇಕು. ಕಬ್ಬು ಕಟಾವು ಮಾಡಿದ 14 ದಿನದೊಳಗಾಗಿ ರೈತರಿಗೆ ಎಫ್‌ಆರ್‌ಪಿ ದರದಂತೆ ಹಣ ಪಾವತಿ ಮಾಡಬೇಕು. ಸಕ್ಕರೆ ಕಾರ್ಖಾನೆಯವರು 14 ದಿನಗಳಿಗಿಂತ ಹೆಚ್ಚಿನ ಅವಧಿಯ ಹಣ ಪಾವತಿ ಮಾಡದೆ ಉಳಿಸಿಕೊಂಡಿದ್ದಲ್ಲಿ ಪಾವತಿಸಬೇಕು ಎಂದರು.

ಉಪವಿಭಾಗಾಧಿಕಾರಿ ಶಿವಾನಂದಮೂರ್ತಿ ಮಾತನಾಡಿ, ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸಿ 5 ಲಕ್ಷ ಟನ್ ಕಬ್ಬು ನುರಿಸುವ ಗುರಿ ಹೊಂದಲಾಗಿದೆ. ಬೇರೆ ಕಾರ್ಖಾನೆ ಅವರು ಮೈಷುಗರ್ ವ್ಯಾಪ್ತಿಯ ಕಬ್ಬು ಕಟಾವು ಮಾಡಿದರೆ ತೊಂದರೆಯಾಗಲಿದೆ ಎಂದರು. ಸಭೆಯಲ್ಲಿ ಎಸಿ ಆರ್.ಐಶ್ವರ್ಯ, ತಹಸೀಲ್ದಾರ್ ಕುಂಇ ಅಹಮದ್, ಮೈಷುಗರ್ ವ್ಯವಸ್ಥಾಪಕ ನಿರ್ದೇಶಕ ಅಪ್ಪಾಸಾಹೇಬ ಪಾಟೀಲ, ಆಹಾರ ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕ ಕೃಷ್ಣ ಕುಮಾರ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ವಿ.ಆರ್. ಅಶೋಕ್, ಜಿಲ್ಲಾ ವಾರ್ತಾಧಿಕಾರಿ ಎಸ್.ಹೆಚ್. ನಿರ್ಮಲಾ, ವಿವಿಧ ಇಲಾಖೆಯ ಅಧಿಕಾರಿಗಳಿದ್ದರು.

# ಕಿರುತೆರೆ ನಟ ಮಂಡ್ಯ ರವಿಪ್ರಸಾದ್ ನಿಧನ



ಮಂಡ್ಯ, ಸೆ.14– ಕನ್ನಡ ಕಿರುತೆರೆಯ ಖ್ಯಾತ ನಟ, 'ಮಗಳು ಜಾನಕಿ' ಧಾರಾವಾಹಿಯ ಚಂದು ಭಾರ್ಗಿಯಾಗಿ ಪ್ರೇಕ್ಷಕರ ಹೃದಯ ಗೆದ್ದಿದ್ದ ನಟ ಮಂಡ್ಯ ರವಿ ಪ್ರಸಾದ್ (43) ಅನಾರೋಗ್ಯದಿಂದ ಬುಧವಾರ ಬೆಂಗಳೂರಿನ ಬಿಜಿಎಸ್ ಆಸ್ಪತ್ರೆಯಲ್ಲಿ ನಿಧನರಾದರು.

ಸಾಹಿತಿ ಡಾ.ಹೆಚ್.ಎಸ್.ಮುದ್ದೇಗೌಡರ ಪುತ್ರರಾದ ರವಿ ಪ್ರಸಾದ್ ಅವರು ತಾಯಿ ಪಾಪಚ್ಚಿ, ಇಬ್ಬರು ಸಹೋದರಿಯರು, ಪತ್ನಿ, ಮಗ ಸೇರಿದಂತೆ ಅಪಾರ ಬಂಧು–ಬಳಗ, ಗೆಳೆಯರನ್ನು ಅಗಲಿದ್ದಾರೆ.

ಮಂಡ್ಯದ ಗೆಳೆಯರ ಬಳಗ ಹಾಗೂ ಜನದನಿ ರಂಗಭೂಮಿ ತಂಡದ ಮೂಲಕ ಕಲೆಯ ಗೀಳು ಅಂಟಿಸಿಕೊಂಡ ರವಿ ಪ್ರಸಾದ್, ಧಾರವಾಹಿ ಮತ್ತು ಸಿನಿಮಾಗಳಲ್ಲಿ ನಟಿಸುತ್ತಲೇ ಮಂಡ್ಯ ರವಿ ಆಗಿ ಪ್ರಸಿದ್ಧಿ ಪಡೆದಿದ್ದರು. ಬಾಲ್ಯದಲ್ಲೇ ನಾಟಕಗಳಲ್ಲಿ ಅಭಿನಯಿಸುತ್ತಿದ್ದ ರವಿ, ನಂತರ ಬಣ್ಣದ ಲೋಕದತ್ತ ಒಲವು ಬೆಳೆಸಿಕೊಂಡರು. ಎಂಎ(ಇಂಗ್ಲೀಷ್) ಮತ್ತು ಎಲ್‌ಎಲ್‌ಬಿ ಮಾಡಿದ್ದರೂ ಆಯ್ಕೆ ಮಾಡಿಕೊಂಡಿದ್ದ ವೃತ್ತಿ ಮಾತ್ರ ನಟನೆ. 1996ರಲ್ಲಿ ಜನದನಿ ಹವ್ಯಾಸಿ ನಾಟಕ ತಂಡ ಸೇರಿ ಅಲ್ಲಿಂದ ಟಿ.ಎಸ್. ನಾಗಾಭರಣ ನಿರ್ದೇಶನದ 'ಮಹಾಮಾಯಿ' ಧಾರಾವಾಹಿಯಲ್ಲಿ ನಟಿಸುವ ಮೂಲಕ ಕಿರುತೆರೆ ಜಗತ್ತಿಗೆ ಕಾಲಿಟ್ಟರು.

ನಂತರ 'ಮಿಂಚು', 'ಮುಕ್ತ ಮುಕ್ತ', 'ಚಿತ್ರಲೇಖ', 'ಯಶೋಧೆ', 'ವರಲಕ್ಷ್ಮಿ ಸ್ಟೋರ್ಸ್' ಸೇರಿದಂತೆ ಹಲವು ಧಾರವಾಹಿಗಳಲ್ಲಿ ನಟಿಸಿರುವ ರವಿ ಅವರು, ಇತ್ತೀಚೆಗೆ ಪ್ರಸಾರವಾದ 'ಮಗಳು ಜಾನಕಿ' ಧಾರಾವಾಹಿಯ ಚಂದು ಭಾರ್ಗಿ ಪಾತ್ರದ ಮೂಲಕ ಅಸಂಖ್ಯಾತ ಅಭಿಮಾನಿಗಳನ್ನು ಹೊಂದಿದ್ದರು. ಅಲ್ಲದೆ, 'ಕಾಫಿ ತೋಟ' ಸೇರಿದಂತೆ ಹಲವು ಸಿನಿಮಾಗಳಲ್ಲೂ ನಟಿಸಿದ್ದಾರೆ.

**ಇಂದು ಅಂತ್ಯಕ್ರಿಯೆ:** ಅಂತ್ಯಕ್ರಿಯೆ ನಗರದ ಕಲ್ಲಹಳ್ಳಿಯಲ್ಲಿರುವ ರುದ್ರಭೂಮಿಯಲ್ಲಿ ಮಧ್ಯಾಹ್ನ 1ಕ್ಕೆ ನಡೆಯಲಿದೆ ಎಂದು ಮೃತರ ತಂದೆ ಡಾ.ಹೆಚ್.ಎಸ್. ಮುದ್ದೇಗೌಡ ತಿಳಿಸಿದ್ದಾರೆ.

# ಕೃಷಿ ಪತ್ತಿನ ಸಹಕಾರ ಸಂಘದ ಅಭಿವೃದ್ಧಿಗೆ ಎಲ್ಲರ ಸಹಕಾರ ಅಗತ್ಯ




ಭಾರತೀನಗರ, ಸೆ.14– ಇಲ್ಲಿಗೆ ಸಮೀಪದ ದೊಡ್ಡರಸಿನಕೆರೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷ ಎಂ.ಚಿಕ್ಕಹುಚ್ಚೇಗೌಡ ಅವರ ನೇತೃತ್ವದಲ್ಲಿ ನಡೆಯಿತು.

ಈ ವೇಳೆ ಮಾತನಾಡಿದ ಅವರು, ಸದಸ್ಯರು ಮತ್ತು ಷೇರುದಾರರ ಸಹಕಾರದಿಂದ ಸಂಘ ಉತ್ತಮ ಲಾಭದಿಂದ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿಗೊಳಿಸಲು ಎಲ್ಲರ ಸಹಕಾರ ಅಗತ್ಯ ಎಂದರು.

ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಹಾಗೂ ಹಾಲಿ ಸದಸ್ಯ ಎಂ.ಹೊನ್ನೇಗೌಡ ಮಾತನಾಡಿ, ಸಂಘವನ್ನು ಮತ್ತಷ್ಟು ಅಭಿವೃದ್ಧಿಗೊಳಿಸಲು ಸಂಘದ ವ್ಯಾಪ್ತಿಯ ಕುರಿಕೆಂಪನದೊಡ್ಡಿ, ದೇವರಹಳ್ಳಿ, ದೊಡ್ಡರಸಿನಕೆರೆ, ಗೌಡಯ್ಯನದೊಡ್ಡಿ, ಚಿಕ್ಕಮರೀಗೌಡನದೊಡ್ಡಿ ಗ್ರಾಮಸ್ಥರ ಸಹಕಾರ ಅಗತ್ಯ ಎಂದರು.

ಸಂಘದ ಸಿಇಓ ಶೋಭಾ ವಾರ್ಷಿಕ ವರದಿ ಮಂಡಿಸಿದರು. ಸಂಘದ ನಿರ್ದೇಶಕರಾದ ಡಿ.ಹೆಚ್.ಕೃಷ್ಣ, ಡಿ.ಎಂ.ಮಂಚೇಗೌಡ, ಪ್ರದೀಪ್, ಡಿ.ಎಂ.ರಮೇಶ್, ಮುದ್ದಶೆಟ್ಟಿ, ರಾಮಣ್ಣ, ಮಂಗಳಮ್ಮ, ಶಾಂತಮ್ಮ, ಭಾಗ್ಯಮ್ಮ, ಪ್ರಶಾಂತ್ ಇದ್ದರು.

# ಸರ್ಕಾರದ ವೈಫಲ್ಯ ಜನರಿಗೆ ತಿಳಿಸಲು ಡಿಕೆಶಿ ಕರೆ



ಮದ್ದೂರು, ಸೆ.14– ಕೇಂದ್ರ ಹಾಗೂ ರಾಜ್ಯದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರಗಳ ವೈಫಲ್ಯತೆ, ದುರಾಡಳಿತದ ಬಗ್ಗೆ ಜನರಿಗೆ ತಿಳಿಸುವ ಕೆಲಸವನ್ನು ಕಾಂಗ್ರೆಸ್ ಕಾರ್ಯಕರ್ತರು ಮಾಡಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಲಹೆ ನೀಡಿದರು.


ಕಾಂಗ್ರೆಸ್ ಜೋಡೋ ಯಾತ್ರೆ ಹಿನ್ನೆಲೆಯಲ್ಲಿ ಕೊಳ್ಳೇಗಾಲದಲ್ಲಿ ನಡೆಯುತ್ತಿದ್ದ ಪಕ್ಷದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದ ಅವರು, ಮಾರ್ಗ ಮಧ್ಯೆ ಮದ್ದೂರಿನ ಬ್ಲಾಕ್ ಕಾಂಗ್ರೆಸ್ ಕಚೇರಿಗೆ ಭೇಟಿ ನೀಡಿ ಮಾತನಾಡಿದರು.

ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿರವರ ನೇತೃತ್ವದಲ್ಲಿ ನಡೆಯಲಿರುವ ಭಾರತ್ ಜೋಡೋ ಯಾತ್ರೆಯು ಒಂದು ಅಭೂತಪೂರ್ವ ಕಾರ್ಯಕ್ರಮವಾಗಿದ್ದು, ಪಾದಯಾತ್ರೆ ನಡೆಯಲಿರುವ ಎಲ್ಲಾ ತಾಲೂಕುಗಳಿಗೂ ಪರಿಶೀಲನೆಗೆ ತೆರಳುತ್ತಿದ್ದೇನೆ ಎಂದ ಅವರು, ಈ ಪಾದಯಾತ್ರೆಯ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವೈಫಲ್ಯತೆ ಹಾಗೂ ದುರಾಡಳಿತ, ಜನ ವಿರೋಧಿತನದ ಬಗ್ಗೆ ಮನೆ–ಮನೆಗೂ ತಿಳಿಸುವ ಪ್ರಯತ್ನವಾಗುತ್ತದೆ ಎಂದರು. ಕೆಪಿಸಿಸಿ ಸದಸ್ಯ ಎಸ್.ಗುರುಚರಣ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಸಂದರ್ಶ, ಪುರಸಭಾ ಮಾಜಿ ಅಧ್ಯಕ್ಷ ಎಂ.ಪಿ.ಅಮರ್‌ಬಾಬು, ಮುಖಂಡರಾದ ಸಿದ್ದು ಇದ್ದರು.

## ಭಾರತ್ ಜೋಡೋ ಪಾದಯಾತ್ರೆ ಹಿನ್ನೆಲೆ ಚಾ.ನಗರ ಜಿಲ್ಲೆಯ ವಿವಿಧೆಡೆ ಪೂರ್ವಭಾವಿ ಸಭೆ

# ಭಾರತ್ ಜೋಡೋ ನಡಿಗೆ ದೇಶಕ್ಕೊಂದು ಕೊಡುಗೆ

## ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್



ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರದಿಂದ ಸೆ.30ರಂದು ಬೆಳಗ್ಗೆಯೇ ಗುಂಡ್ಲುಪೇಟೆಗೆ ಆಗಮಿಸಬೇಕು. ರಾಜ್ಯಕ್ಕೆ ಪಾದಯಾತ್ರೆ ಆಗಮಿಸಿದ ಮೊದಲ ದಿನ 21 ಕಿಮೀ ಪಾದಯಾತ್ರೆಯಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು. ಈ ಮೂಲಕ ಪಕ್ಷದ ಮುಖಂಡರು, ಕಾರ್ಯಕರ್ತರು ತಮ್ಮ ಗೌರವವನ್ನು ಉಳಿಸಿಕೊಳ್ಳಬೇಕು.

–ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ.

ಚಾಮರಾಜನಗರ, ಸೆ.14–ರಾಷ್ಟ್ರೀಯ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ನೇತೃತ್ವದಲ್ಲಿ ಹಮ್ಮಿಕೊಂಡಿರುವ ಭಾರತ್ ಜೋಡೋ ಯಾತ್ರೆಯು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ದೇಶವನ್ನು ಒಂದುಗೂಡಿಸಲು ಕಾಂಗ್ರೆಸ್ ನೀಡುವ ಕೊಡುಗೆಯಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅಭಿಪ್ರಾಯಪಟ್ಟರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ನಡೆದ ಭಾರತ್ ಜೋಡೋ ಪಾದಯಾತ್ರೆ ಪೂರ್ವಭಾವಿ ಸಭೆ ಉದ್ಘಾಟಿಸಿ ಅವರು ಮಾತನಾಡಿದರು. ಬಿಜೆಪಿಯವರು ದೇಶವನ್ನು ಇಬ್ಭಾಗ ಮಾಡಲು ಹೊರಟಿದ್ದಾರೆ. ಅದನ್ನು ತಪ್ಪಿಸಲು, ಹಿರಿಯರು ತಂದು ಕೊಟ್ಟಿರುವ ಸ್ವಾತಂತ್ರ್ಯ ಉಳಿಸಲು, ಸಂವಿಧಾನ ರಕ್ಷಿಸಲು, ರಾಷ್ಟ್ರಧ್ವಜ ಉಳಿಸಲು ಹಾಗೂ ಹೆಣ್ಣು ಮಕ್ಕಳು ಹಾಗೂ ಯುವಕರಿಗೆ ಶಕ್ತಿ ತುಂಬಲು ಭಾರತ್ ಜೋಡೋ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದರು.

**ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿ:** ಸೆ.30ರಂದು ಗುಂಡ್ಲುಪೇಟೆಯಿಂದ ನಡೆಯುವ ಭಾರತ್ ಜೋಡೋ ಪಾದಯಾತ್ರೆಯಲ್ಲಿ ಹನೂರು, ಚಾಮರಾಜನಗರ, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಿಂದ ತಲಾ 10 ಸಾವಿರ ಜನರು ಭಾಗವಹಿಸಿ, ಪಾದಯಾತ್ರೆ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಶಾಸಕ ಸಿ.ಪುಟ್ಟರಂಗಶೆಟ್ಟಿ, ಎಐಸಿಸಿ ಕಾರ್ಯದರ್ಶಿ ರೋಜಿ ಜಾನ್ ಕೇಂದ್ರ ಹಾಗೂ ರಾಜ್ಯದಲ್ಲಿರುವ ಬಿಜೆಪಿ ಸರ್ಕಾರ ವಿರುದ್ಧ ವಾಗ್ದಾಳಿ ನಡೆಸಿದರು. ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಎಸ್.ಸಿ.ಬಸವರಾಜು, ಮಂಜುಳಾ ಮಾನಸ, ಶಾಸಕ ಆರ್.ನರೇಂದ್ರ, ಮಾಜಿ ಶಾಸಕ ಎಸ್.ಬಾಲರಾಜ್, ಜಿಪಂ ಮಾಜಿ ಅಧ್ಯಕ್ಷ ಸಿ.ಎ.ಮಹದೇವಶೆಟ್ಟಿ, ಜಿಲ್ಲಾ ಕಾಂಗ್ರೆಸ್ ವಕ್ತಾರ ಕೆರೆಹಳ್ಳಿ ನವೀನ್, ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಆರ್. ಮಹದೇವ್, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದ್ ಅಸ್ಗರ್, ಗುರುಸ್ವಾಮಿ, ಜಿಲ್ಲಾ ಮಾಧ್ಯಮ ಕಾರ್ಯದರ್ಶಿ, ವಕೀಲ ಅರುಣ್‌ಕುಮಾರ್ ಮುಖಂಡರಾದ ಕೆ.ಪಿ. ಸದಾಶಿವಮೂರ್ತಿ, ಆರ್.ಉಮೇಶ್, ಅಕ್ಬರ್ ಅಲಿ, ಭಾಸ್ಕರ್, ಸೈಯದ್‌ರಫಿ, ಸುಹೇಲ್ ಅಲಿ ಖಾನ್, ಚಿಕ್ಕಮಹದೇವು, ಶ್ರೀನಿವಾಸನಾಯ್ಕ, ಡಿ.ನಾಗೇಂದ್ರ ಆಲೂರು ಪ್ರದೀಪ್, ಅಬ್ದುಲ್ ಮಜ್ಜಿದ್, ನಾಗರಾಜು ಇತರರಿದ್ದರು.

## ಕೆಪಿಸಿಸಿ ಅಧ್ಯಕ್ಷ ಗಾದಿ: ಪಕ್ಷದ ತೀರ್ಮಾನಕ್ಕೆ ಬದ್ಧ

**ಕೊಳ್ಳೇಗಾಲ:** ಕೆಪಿಸಿಸಿ ಚುನಾವಣೆ ಸಂಬಂಧ ಶೀಘ್ರವೇ ಕೆಪಿಸಿಸಿ ಸದಸ್ಯರ ಸಭೆ ಕರೆಯಲಿದ್ದು, ಪಕ್ಷ ತೆಗೆದುಕೊಳ್ಳುವ ತೀರ್ಮಾನಕ್ಕೆ ನಾನು ಬದ್ಧ. ಕಳೆದ ಮೂರು ವರ್ಷಗಳಲ್ಲಿ ನನ್ನ ಶಕ್ತಿ ಮೀರಿ ಪಕ್ಷಕ್ಕಾಗಿ ಕೆಲಸ ಮಾಡಿದ್ದೇನೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದರು. ಕೊಳ್ಳೇಗಾಲದಲ್ಲಿ ಭಾರತ್ ಜೋಡೋ ಪಾದಯಾತ್ರೆ ಪೂರ್ವಭಾವಿ ಸಭೆಗೂ ಮುನ್ನ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಚುನಾವಣೆಗೆ ಯಾರೂ ಬೇಕಾದರೂ ನಿಲ್ಲಬಹುದು. ಪಕ್ಷ ತೆಗೆದುಕೊಳ್ಳುವ ತೀರ್ಮಾನಕ್ಕೆ ನಾನು ಬದ್ಧ. ಕೆಪಿಸಿಸಿ ಚುನಾವಣೆ ಬಳಿಕ ಎಐಸಿಸಿ ಚುನಾವಣೆ ನಡೆಯಬೇಕಿದ್ದು, ತಿಂಗಳೊಳಗೆ ಚುನಾವಣೆ ನಡೆಯಲಿದೆ ಎಂದರು.

**ಟಿಕೆಟ್ ಬೇಕಾದರೆ ಜನರನ್ನು ಕರೆತನ್ನಿ:** ಕೊಳ್ಳೇಗಾಲದಲ್ಲಿ ಖಾಸಗಿ ಕಲ್ಯಾಣ ಮಂಟಪದಲ್ಲಿ ನಡೆದ ಪಾದಯಾತ್ರೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್, ಟಿಕೆಟ್‌ಗೆ ಒತ್ತಾಯಿಸುವ ಮಾಜಿ ಶಾಸಕರು ಜನರನ್ನು ಒಗ್ಗೂಡಿಸಬೇಕು. ಪ್ರತಿ ಗ್ರಾಪಂಗೂ ಮೂವರು ಮಾಜಿ ಶಾಸಕರು ಒಟ್ಟಿಗೆ ತೆರಳಿ ಕರಪತ್ರ ನೀಡಿ ಜನರನ್ನು ಪಾದಯಾತ್ರೆಗೆ ಆಹ್ವಾನಿಸಬೇಕು ಎಂದು ಕೊಳ್ಳೇಗಾಲ ಕ್ಷೇತ್ರ ಟಿಕೆಟ್ ಆಕಾಂಕ್ಷಿಗಳಿಗೆ ಕಿವಿಮಾತು ಹೇಳಿದರು.

## ಬಿಜೆಪಿ ಭ್ರಷ್ಟಾಚಾರದ ಪಿತಾಮಹ

**ಗುಂಡ್ಲುಪೇಟೆ:** ಬಿಜೆಪಿಯವರು ಭ್ರಷ್ಟಾಚಾರದ ಪಿತಾಮಹರಾಗಿದ್ದು, ಪ್ರಸ್ತುತ ಪ್ರತಿಯೊಂದಕ್ಕೂ ದುಡ್ಡು ಕೊಡಬೇಕಾದ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ ಎಂದು ಕೆಪಿಸಿಸಿ ಡಿ.ಕೆ.ಶಿವಕುಮಾರ್ ಆರೋಪಿಸಿದರು. ಸೆ.30 ರಂದು ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೋ ಯಾತ್ರೆ ಅಂಗವಾಗಿ ಪಟ್ಟಣದ ಖಾಸಗಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಜೀವನಾವಶ್ಯಕ ವಸ್ತುಗಳ ಬೆಲೆ ಏರಿಸಿರುವ ಬಿಜೆಪಿ ಸರ್ಕಾರ ಕಮಿಷನ್ ದರವನ್ನೂ ಏರಿಸಿದೆ. ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವಧಿಯಲ್ಲಿ 20 ಪರ್ಸೆಂಟ್ ಇದ್ದ ಕಮಿಷನ್ ಈಗ ಶೇ.40 ಆಗಿದೆ ಎಂದು ಕಂಟ್ರಾಕ್ಟರ್‌ಗಳು ಆರೋಪಿಸಿದರಲ್ಲದೆ, ಚಾಮರಾಜನಗರದ ಆಕ್ಸಿಜನ್ ದುರಂತದಲ್ಲಿ 36 ಜನ ಸಾವಿಗೀಡಾದ ಪ್ರಕರಣಕ್ಕೆ ಕಾರಣವಾದ ಅಧಿಕಾರಿಯನ್ನು ಅಮಾನತುಗೊಳಿಸಲು ಸಾಧ್ಯವಾಗದ ಸರ್ಕಾರದಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ ಎಂದು ಟೀಕಿಸಿದರು. ಈ ಸಂದರ್ಭದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಜಿಲ್ಲಾಧ್ಯಕ್ಷ ಮರಿಸ್ವಾಮಿ, ಹನೂರು ಶಾಸಕ ನರೇಂದ್ರ, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜಪ್ಪ, ಮುಖಂಡರಾದ ಹೆಚ್.ಎಂ.ಗಣೇಶ್ ಪ್ರಸಾದ್, ಹೆಚ್.ಎಸ್.ನಂಜುಂಡಪ್ರಸಾದ್, ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿ, ಮಾಜಿ ಸಂಸದ ಎ.ಸಿದ್ದರಾಜು ನವೀನ್, ಕೆ.ಎಸ್.ಮಹೇಶ್ ಸೇರಿದಂತೆ ಹಲವರು ಇದ್ದರು.

# ವೈದ್ಯನ ವಿರುದ್ಧ ದೂರು; ತನಿಖೆ ಆರಂಭ

ಡಾ.ರವಿಶಂಕರ್ ವಿರುದ್ಧ ಬಂದಿರುವ ದೂರಿನ ಹಿನ್ನೆಲೆಯಲ್ಲಿ ತನಿಖೆಗೆ ಅಧಿಕಾರಿಯೊಬ್ಬರನ್ನು ನೇಮಿಸಲಾಗಿದೆ. ನಾನು ಸಹ ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಪಡೆದಿದ್ದೇನೆ. ಈ ಸಂಬಂಧ ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸಲಾಗುವುದು. ಅವರು ಕಾರ್ಡಿಯಾಲಜಿಸ್ಟ್ ಎಂದು ಪಡೆದುಕೊಂಡಿರುವ ಪ್ರಮಾಣ ಪತ್ರವನ್ನು ಇಲಾಖೆ ಪಡೆದುಕೊಂಡಿದ್ದು, ಆ ಪ್ರಮಾಣ ಪತ್ರದಲ್ಲಿ ಇವರ ಇನ್ಸಿಯಲ್ ಇಲ್ಲ. ಹಾಗಾಗಿ ಇದು ಅನುಮಾನ, ಗೊಂದಲಕ್ಕೆ ಕಾರಣವಾಗಿದ್ದು, ಹಿರಿಯ ಅಧಿಕಾರಿಗಳಿಗೆ ಮುಂದಿನಕ್ರಮಕ್ಕೆ ಸಲ್ಲಿಸಲಾಗಿದೆ. ವಿಶೇಷ ಭತ್ಯೆ ನಾವು ಮಂಜೂರು ಮಾಡಿಲ್ಲ. ಸರ್ಕಾರದ ಹಂತದಲ್ಲಿ ಮಂಜೂರು ಮಾಡಿರುವುದರಿಂದ ಮುಂದಿನ ಕ್ರಮ ಸರ್ಕಾರದ ಹಿರಿಯ ಅಧಿಕಾರಿಗಳ ವಿವೇಚನೆಗೆ ಬಿಟ್ಟಿದ್ದು.

–ಡಾ. ವಿಶ್ವೇಶ್ವರಯ್ಯ, ಡಿ.ಹೆಚ್.ಓ.

ಕೊಳ್ಳೇಗಾಲ,ಸೆ.14–ಕೊಳ್ಳೇಗಾಲ ಉಪವಿಭಾಗ ಆಸ್ಪತ್ರೆಯ ಡಾ.ಹೆಚ್.ಪಿ.ರವಿಶಂಕರ್ ಅವರು ವಿಶೇಷ ತಜ್ಞರಲ್ಲದಿದ್ದರೂ ಸರ್ಕಾರದ ವಿಶೇಷ ಭತ್ಯೆ ಪಡೆದ ಆರೋಪದ ಹಿನ್ನೆಲೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಂಗಳವಾರದಿಂದಲೇ ತನಿಖೆ ಆರಂಭಿಸಿದ್ದು, ಈ ಸಂಬಂಧ ಡಿಹೆಚ್‌ಓ ವಿಶ್ವೇಶ್ವರಯ್ಯ ಭೇಟಿ ನೀಡಿ ಮುಖ್ಯ ವೈದ್ಯಾಧಿಕಾರಿಗಳಿಂದ ದಾಖಲೆ ಪಡೆದುಕೊಂಡಿದ್ದಾರೆ.

ಡಾ.ರವಿಶಂಕರ್ ವಿರುದ್ಧ ನಗರ ನಿವಾಸಿ ರಮೇಶ್ ಎಂಬುವರು ಸರ್ಕಾರಿ ಉಪವಿಭಾಗ ಆಸ್ಪತ್ರೆಗೆ ಅವರು ಕರ್ತವ್ಯಕ್ಕೆ ವಿಳಂಬವಾಗಿ ಆಗಮಿಸುತ್ತಾರೆ. ವೈದ್ಯ ಶಾಸ್ತ್ರ ಹುದ್ದೆಗೆ ಅರ್ಹತೆ ಇಲ್ಲದಿದ್ದರೂ ನಿಯಮ ಉಲ್ಲಂಘಿಸಿ ವಿಶೇಷ ಭತ್ಯೆ ಮಂಜೂರು ಮಾಡಿಸಿಕೊಂಡಿದ್ದಾರೆ ಹಾಗೂ ಕಾರ್ಡಿಯಾಲಜಿಸ್ಟ್ ಅಲ್ಲದಿದ್ದರೂ ಪ್ರತಿಷ್ಠಿತ ಯುನಿವರ್ಸಿಟಿವೊಂದರಿಂದ ನಕಲಿ ಪ್ರಮಾಣ ಪತ್ರ ಪಡೆದು ಸರ್ಕಾರವನ್ನು ವಂಚಿಸಿದ್ದಾರೆ ಎಂದು ಆರೋಪಿಸಿ, ಕೂಡಲೇ ತನಿಖೆ ನಡೆಸಿ ಶಿಸ್ತುಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳ ಕಚೇರಿಗೆ ಲಿಖಿತ ದೂರ ನೀಡಿದ್ದರು. ಈ ಕುರಿತು 'ಮೈಸೂರು ಮಿತ್ರ' ಪತ್ರಿಕೆಯ ಸೆ.10ರ ಪುಟ 8ರಲ್ಲಿ ವರದಿ ಪ್ರಕಟಿಸಲಾಗಿತ್ತು.

ಈ ಬೆನ್ನಲ್ಲೇ ಆಸ್ಪತ್ರೆ ಕೆಲ ವೈದ್ಯರು, ಸಿಬ್ಬಂದಿಯಿಂದಲೂ ಸಹ ರವಿಶಂಕರ್ ಕಾರ್ಡಿಯಾಲಜಿಸ್ಟ್ ಅಲ್ಲ. ಅವರು ಪಡೆದ ಪ್ರಮಾಣ ಪತ್ರ ನಕಲಿ ಎಂಬ ಮಾತುಗಳು ಕೇಳಿ ಬಂದಿತ್ತು. ಈ ಕುರಿತು ಸಹ ಸಮರ್ಪಕ ದಾಖಲೆ ಪಡೆದಿದ್ದರು. ಏತನ್ಮಧ್ಯೆ ಈ ಪ್ರಕರಣ ಈಗ ಮುಖ್ಯಮಂತ್ರಿ, ರಾಜ್ಯ ಆರೋಗ್ಯ ಇಲಾಖೆ ಅಪರ ಕಾರ್ಯದರ್ಶಿ, ಮುಖ್ಯಮಂತ್ರಿಗಳ ಆಪ್ತ ವಲಯಕ್ಕೂ ತಲುಪಿದ್ದು, ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎನ್ನಲಾಗಿದೆ. ಸದ್ಯ ವಿಶೇಷಾಧಿಕಾರಿ ಮಂಜುನಾಥ್ ಮೂಲಕ ಈ ಪ್ರಕರಣದ ತನಿಖೆ ನಡೆಸುತ್ತಿದ್ದು, ನಾಳೆಯೊಳಗೆ ಸರ್ಕಾರಕ್ಕೆ ಡಾ.ರವಿಶಂಕರ್ ಅವರ ಕುರಿತು ತನಿಖಾ ವರದಿ ಸಲ್ಲಿಸುವ ಸಾಧ್ಯತೆ ಇದೆ.

## ಅರ್ಜಿ ಆಹ್ವಾನ

ಚಾಮರಾಜನಗರ, ಸೆ.14–ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸೆ.30ರಿಂದ ಅ.2ರ ವರೆಗೆ ಆಂಧ್ರ ಪ್ರದೇಶದಲ್ಲಿ ಭಾರತೀಯ ಸಂಸ್ಕೃತಿ ಮತ್ತು ಬುಡಕಟ್ಟು ಸಮುದಾಯ ಕುರಿತು ಮೂರು ದಿನಗಳ ರಾಷ್ಟ್ರೀಯ ಅಧ್ಯಯನ ಶಿಬಿರ ಏರ್ಪಡಿಸಿದ್ದು, ಶಿಬಿರಕ್ಕೆ ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ.

ಸೆ.19 ಅರ್ಜಿ ಸಲ್ಲಿಸಲು ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ವೆಬ್‌ಸೈಟ್ http://sahithyaacademy.karnataka.gov.in ನಲ್ಲಿ ಅರ್ಜಿ ನಮೂನೆ ಹಾಗೂ ವಿವರಗಳನ್ನು ಪಡೆಯಬಹುದು.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ
ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

### ಮ್ಯಾನ್ ಪವರ್ ಏಜೆನ್ಸಿ (ರಿ)
8 hr / 24 hr ನಮ್ಮಲ್ಲಿ Patient ನೋಡಿಕೊಳ್ಳಲು ಹಾಗೂ ಅಡುಗೆ ಮತ್ತು ಮನೆ ಕೆಲಸ ಮಾಡಲು ಮಹಿಳೆಯರು ಸಿಗುತ್ತಾರೆ.
ಸಂಪರ್ಕಿಸಿ:
8105149095

### ಮನೆ ಮಾರಾಟಕ್ಕಿದೆ
30x40 ಡ್ಯೂಪ್ಲೆಕ್ಸ್ ಮನೆ, ದಿಶಾ ಲೇಔಟ್, ವಿಜಯನಗರ, 4ನೇ ಹಂತದ ಹತ್ತಿರ, ಆಲ್ ಟಿಕ್ 3 ಬೆಡ್ ರೂಂ, ಇಟಲಿಯನ್ ಕಿಚನ್.
ಬೆಲೆ : 86 ಲಕ್ಷ, ಸಂಪರ್ಕಿಸಿ:
9945042875

### ಮಾರುವವರು ಕೊಳ್ಳುವವರು
18x40, 20x30, 30x40, 40x60, 50x80
ಎಲ್ಲಾ ಅಳತೆಯ ಹೊಸಮನೆ, ಹಳೇ ಮನೆ, ಸೈಟ್, ಮೈಸೂರು ನಗರದ ಎಲ್ಲಾ ಬಡಾವಣೆಗಳಲ್ಲಿ ಮಾರುವವರು, ಕೊಳ್ಳುವವರು ಸಂಪರ್ಕಿಸಿ.
8618495118

### HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC
Sales & Service
Contact: Srinivas
9379699229

### ARCHITECT WANTED
QUALIFICATIONS:
* Diploma / B.Arch
* Good experience in AUTOCAD & 3D Design.
* Communication Skill.

Ganesh Constructions
Hebbal, Mysore
0821-4250327, 9916250327

### COMMERCIAL BUILDING FOR RENT
1, 2, 3, 4 Floor avialable
Each Floors 500 Sq.ft
with Indivisual Washroom and Lift
Beside Amogha Residency, Irwin Main Road, Mysore.



9449697228 / 7259401020

### ಬೇಕಾಗಿದ್ದಾರೆ
ರೂಂ ಬಾಯ್ –2,
ಶ್ರೀ ಗಣೇಶ್ ಪ್ರಸಾದ್ ಲಾಡ್ಜ್, #1096, ಶಿವರಾಂ ಪೇಟೆ ಮುಖ್ಯ ರಸ್ತೆ, ಮೈಸೂರು – 570001
9986756866

### ಬೇಕಾಗಿದ್ದಾರೆ
ಮೈಸೂರಿನ ಬೆಳವಾಡಿ, ಹುಣಸೂರು ರಸ್ತೆಯಲ್ಲಿರುವ ಪ್ರತಿಷ್ಠಿತ ಕಂಪನಿಗೆ ನುರಿತ ಮತ್ತು ಹೊಸ ಸೆಕ್ಯೂರಿಟಿ ಸೂಪರ್ ವೈಜರ್ ಮತ್ತು ಸೆಕ್ಯೂರಿಟಿ ಗಾರ್ಡ್‌ಗಳು SSLC ವ್ಯಾಸಂಗ ಮಾಡಿರುವ ಅಭ್ಯರ್ಥಿಗಳು ತಕ್ಷಣ ಬೇಕಾಗಿದ್ದಾರೆ. ESI / EPF/ ಊಟ / ತಿಂಡಿ ಸೌಲಭ್ಯಗಳಿದ್ದು, 26 ದಿನಕ್ಕೆ 16,000 ಸಂಬಳ ದೊರೆಯುತ್ತದೆ. ಆಸಕ್ತರು ಕೂಡಲೇ ಈ ನಂಬರ್‌ಗೆ ಸಂಪರ್ಕಿಸಿ:
9900066284
08212001661

### ಬೇಕಾಗಿದ್ದಾರೆ
ಹೋಟೆಲ್ ದೇವಿಶ್ರೀ
ಪಂಚಮುಖಿ ಗಣಪತಿ ದೇವಸ್ಥಾನದ ಹತ್ತಿರ, ಅಕ್ಬರ್ ರೋಡ್, ಮಂಡಿಮೊಹಲ್ಲಾ, ಕೌಂಟರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ.:
9036890169
8618959466

### ಬೇಕಾಗಿದ್ದಾರೆ
ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ:
Mob: 9886745981

### ಸೈಟ್ ಫಾರ್ ಸೇಲ್
30x40
ಮೈಸೂರು ಜೆ.ಪಿ. ನಗರದ ರಿಂಗ್ ರೋಡ್ ನಿಂದ ಕೇವಲ 5 ಕಿ.ಮೀ. ದೂರದ ಜ್ಞಾನ ಭಾರತಿ ಲೇಔಟ್, ದಡದಹಳ್ಳಿ, 2ನೇ ಸ್ಟೇಜ್, ಈಸ್ಟ್ ಫೇಸಿಂಗ್. MUDA ಖಾತೆ ಆಗಿದೆ.
Mob: 9342123373

### ಬೇಕಾಗಿದ್ದಾರೆ
ಭದ್ರತಾ ಸಿಬ್ಬಂದಿಗಳು / ಸೂಪರ್‌ವೈಸರ್, ಆಫೀಸ್ ಅಟೆಂಡರ್ (ವಯಸ್ಸು 25 ರಿಂದ 50). ಮೈಸೂರು ಸಿಟಿ, ಕೆ.ಆರ್. ಸರ್ಕಲ್ ಹತ್ತಿರ, ಹೆಬ್ಬಾಳ್, ಮೇಟಗಳ್ಳಿ ಸುತ್ತಮುತ್ತ. ಸಂಪರ್ಕಿಸಿ:
9036745292, 9972837203

### ಶ್ರೀ ಗೌರಿಶಂಕರ ಟ್ರಾವೆಲ್ಸ್
8.10.22 (14/18 ದಿನ): ದೆಹಲಿ, ಹರಿದ್ವಾರ, ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರ್ ನಾಥ್ ಇತ್ಯಾದಿ.
30.10.22 (8/12 ದಿನ): ದೆಹಲಿ, ಆಗ್ರಾ, ಮಥುರ, ಅಲಹಾಬಾದ್, ಕಾಶಿ, ಗಯಾ, ಅಯೋಧ್ಯ ಇತ್ಯಾದಿ.
11.11.22 (4 ದಿನ) ಶಿರಡಿ, ಬಾಂಬೆ, ಎಲ್ಲೋರ, 3 ಜ್ಯೋತಿರ್ಲಿಂಗ ಇತ್ಯಾದಿ.
26.11.22 (7 ದಿನ) Isha, ಮಥುರ, ಕನ್ಯಾ ಕುಮಾರಿ, ರಾಮೇಶ್ವರ ಇತ್ಯಾದಿ.
9620002114

### HOUSE FOR SALE
2nd Floor house, 2 BHK rooms Lalbahaddur Shastri Nagar, Near Police Layout 3rd Stage, Mysore. *Contact:*
Mob: 9900125239

### WANTED FEMALE TELECALLERS
Language: Kannada, English & Hindi
Qualification: SSLC/ PUC/ Degree/ Post Graduation
Salary: Rs.8,000 to Rs.15,000 + Incentive
9538688412

### ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿಕೊಡಲಾಗುತ್ತದೆ
ಒಂದು ಚದರಕ್ಕೆ 1,60,000/–
*ಷರತ್ತು ಅನ್ವಯ
ಸ್ವಾಮಿ ಎಂ. ಸಿವಿಲ್ ಕಂಟ್ರಾಕ್ಟರ್
9945442361
9380885787

### ಏಷಿಯನ್ ಟೂರ್ಸ್ & ಟ್ರಾವೆಲ್ಸ್
7–11–2022 – 11 ದಿನಗಳು – ಕಾಶಿ–ಅಯೋಧ್ಯೆ–ನೈಮಿಶಾರಣ್ಯ–ಬೈದ್ಯನಾಥ ಜ್ಯೋತಿರ್ಲಿಂಗ.
10–11–2022– 16 ದಿನಗಳು – ಮಲ್ಟಿಆಕ್ಸೆಲ್ ಬಸ್ ಮತ್ತು ವಿಮಾನದ ಮೂಲಕ ಅಷ್ಟ ಜ್ಯೋತಿರ್ಲಿಂಗ ದರ್ಶನ– ಭೀಮಾಶಂಕರ್–ಶಿರಡಿ–ನಾಸಿಕ್–ತ್ರಯಂಬಕೇಶ್ವರ–ಓಂಕಾರೇಶ್ವರ–ಮಹಾಕಾಲೇಶ್ವರ–ಉಜ್ಜಯಿನಿ–ಮೌಂಟ್ ಅಬು–ದ್ವಾರಕಾ–ಸೋಮನಾಥ–ನಿಷ್ಕಲಂಕ ಮಹಾದೇವ. ಸಂಪರ್ಕಿಸಿ: ರಾಮಕೃಷ್ಣ–
9342287551 / 9482239855

### ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

### Dr.D.H.BAGALKOT SEXOLOGIST (Since 1983)
ಲೈಂಗಿಕ ನಿಶ್ಯಕ್ತಿ ಹಾಗೂ ನಶಾಮುಕ್ತಿ
ಶೀಘ್ರಸ್ಖಲನ, ಸ್ವಪ್ನದೋಷ, ಹಸ್ತಮೈಥುನ, ನರಗಳ ದೌರ್ಬಲ್ಯ, ಸಂತಾನದೋಷ, ವೀರ್ಯ ತೆಳುವಾಗಿ ಹೋಗುವುದು, ಲಿಂಗ ಚಿಕ್ಕದಾಗಿರುವುದು, ಮಧುಮೇಹದಿಂದ ಬರುವ ಲೈಂಗಿಕ ನಿಶ್ಯಕ್ತಿಗೆ ಹಾಗೂ ಮದ್ಯ ಕುಡಿಯುವ ವ್ಯಕ್ತಿಗೆ ಕುಡಿತದ ಚಟ ಬಿಡಿಸಲು ಯಾವುದೇ ಅಡ್ಡ ಪರಿಣಾಮ ಇಲ್ಲದೆ ಸರಳವಾದ ಪರಿಹಾರ



*ಮೈಸೂರು : ಪ್ರತಿ ತಿಂಗಳು 1,2 ಹಾಗೂ 16, 17 ರಂದು ಹೋಟೆಲ್ ಆಶ್ರಯಾ. ಧನವಂತ್ರಿ ರೋಡ್
ಡಾ.ಡಿ.ಎಚ್.ಬಾಗಲಕೋಟ Cell:9743193428
www.drbagalkot.com

### WALK IN INTERVIEW REQUIRED FOR HOTEL
Receptionist, Office Assistant, Room Boys, House Keeping Ladies, Chinese Cook.
Old Ramanashri Hotel Complex, Harding Circle, Opp. to Woodlands.
9620672223

### ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಅನುಭವವುಳ್ಳ ಹುಡುಗಿಯರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. Salary: 8K + Incentives.
8904131762

### SITE CUM CONSTRUCTION
30x60 ಅಳತೆಯ ಸೈಟಿನಲ್ಲಿ 18 ಚದರ ಸುಸಜ್ಜಿತ ಮನೆಯನ್ನು ನಿಮ್ಮ Plan ನಂತೆ ಕಟ್ಟಿಕೊಡಲಾಗುವುದು.
ಇಚ್ಛೆಯುಳ್ಳವರು ಸಂಪರ್ಕಿಸಿ.
9886191069
9242170927

### FARM FOR SALE
2 1/4 Acres of Developed Farm Land with Fruit Plants, Drip irrigated Servant Quarters and Inter link mesh, fancing, Just 7 km from Ring Road, Mahadevpura Road, Mysore. Opp. Ahad garden Layout. 89 Lakhs per Acre. Negotiable. Contact:
6364575459

### ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ ಡೆವಲಪರ್ ಕಂಪನಿಗೆ ಮಾರ್ಕೆಟಿಂಗ್ ಮ್ಯಾನೇಜರ್, ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಹಾಗೂ ಟೆಲಿಕಾಲರ್ಸ್ ಹಾಗೂ ಆಫೀಸ್ ಬಾಯ್ (7ನೇ ತರಗತಿ) ಬೇಕಾಗಿದ್ದಾರೆ. ಆಕರ್ಷಕ ವೇತನ, ಯಾವುದೇ ಡಿಗ್ರಿ
7483442527 / 8088546307

### S.M GOLD COMPANY
* ಗಿರವಿ ಚಿನ್ನಾಭರಣ ಖರೀದಿ
ಬೇರೆ ಕಂಪನಿಗಿಂತ ಅಧಿಕ ಹಣ ನೀಡುತ್ತೇವೆ.
* ನೀವು ಗಿರವಿ ಇಟ್ಟು ಬಿಡಿಸಿ ಕೊಳ್ಳಲಾಗದ ಚಿನ್ನ–ಆಭರಣಗಳನ್ನು ಇಂದಿನ ಆನ್–ಲೈನ್ ಬೆಲೆಗೆ ತೆಗೆದುಕೊಳ್ಳುತ್ತೇವೆ.
ಕೂಡಲೇ ಸಂಪರ್ಕಿಸಿ–(T&C)
9964522225

### ಬೋಳು ತಲೆಯ ಸಮಸ್ಯೆಯೇ?



ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
# 574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

### ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ, ವಿದ್ಯಾರ್ಹತೆ:– ಕನಿಷ್ಠ ಓದು / ಬರಹ ಗೊತ್ತಿರಬೇಕು. ವೇತನ:– 12,818 + ESI & PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502 / 9108100117

### ಮುಡಾ ಅನುಮೋದಿತ ಸೈಟ್ ಮಾರಾಟಕ್ಕೆ
20X30
30X40
30X50
ಪೋಲೀಸ್ ಲೇಔಟ್ ಮತ್ತು ಲಲಿತಾದ್ರಿಪುರ ನಡುವೆ ರಿಂಗ್ ರೋಡ್ ಒಳಗೆ
ತಕ್ಷಣದ ನೋಂದಣಿ ಮತ್ತು ಕೂಡಲೆ ಮನೆ ಕಟ್ಟಬಹುದು
ಬ್ಯಾಂಕ್ ಸಾಲ ಲಭ್ಯವಿದೆ
98800 65122 / 77956 09173

### (ಉಚಿತ ಭವಿಷ್ಯ)
ಶ್ರೀ ಮಂಜುನಾಥ ಸ್ವಾಮಿ ಜ್ಯೋತಿಷ್ಯಂ
ಪಂಡಿತ್ ವಿಷ್ಣುಕಾಂತ್ ಜೋಶಿ
8549998630
ನಿಮ್ಮ ಧ್ವನಿಯ ಮೂಲಕ ನಿಮ್ಮ ಸಮಸ್ಯೆಗಳಾದ ಸಾಲದ ಬಾಧೆ, ದಾಂಪತ್ಯ ಸಮಸ್ಯೆ, ಕೋರ್ಟ್ ಕೇಸ್ ಸಮಸ್ಯೆ, ಪ್ರೀತಿಯಲ್ಲಿ ನಂಬಿ ಮೋಸ ಇನ್ನು ಅನೇಕ ಸಮಸ್ಯೆಗಳಿಗೆ ಕೇವಲ 2 ದಿನಗಳಲ್ಲಿ ಪರಿಹಾರ ತಿಳಿಸುತ್ತಾರೆ. ಫೋನಿನ ಮುಖಾಂತರ ಅಥವಾ ನೇರವಾಗಿ ಚಾಮರಾಜನಗರಕ್ಕೆ ಬಂದು ಭೇಟಿ ಮಾಡಿ

### PART TIME WORK
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ
ಕೆಲಸ / JOB
ವಾರದ ಸಂಬಳ : 3000/– ರಿಂದ 5000/– ಮೇಲ್ಪಟ್ಟು
ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ:
9108418233
9743217566

### ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

### ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

### ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋಚರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

### ಸೋಲಾರ್ ವಾಟರ್ ಹೀಟರ್
Solar Water Heater



ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

### ಬೇಕಾಗಿದ್ದಾರೆ
ವೃದ್ಧಾಶ್ರಮದಲ್ಲಿ ಉಳಿದುಕೊಂಡು ವೃದ್ಧರನ್ನು ಆರೈಕೆ ಮಾಡಲು, ಅಡುಗೆ ಮತ್ತು ಮನೆ ಕೆಲಸಕ್ಕೆ ಅನುಭವವಿರುವ ಅಥವಾ ಇಲ್ಲದಿರುವ ಯುವತಿಯರು, ಮಹಿಳೆಯರು ಬೇಕಾಗಿದ್ದಾರೆ.
ಸಂಪರ್ಕಿಸಿ:
Mob: 99169 05188

### ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು, ಸಂಬಳ: 8000 – 10000 ರವರೆಗೆ, ಸ್ಥಳ: ಎನ್.ಆರ್.ಮೊಹಲ್ಲಾ, ಚಾಮುಂಡಿಪುರಂ, GTR Hotel ಹತ್ತಿರ, Field Work ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 15,000, (Life Insurance) ಕಂಪ್ಯೂಟರ್ ಜ್ಞಾನವುಳ್ಳ (ಕನ್ನಡ, ಇಂಗ್ಲೀಷ್, ಹಿಂದಿ)
8050912616

### WANTED
40x60 Site / Building East / North Facing in Aravindanagar / Kuvempunagar, Mysuru City - Immediate Registration
Brokers Excuse.
9916313243

### ಮಾಂತ್ರಿಕ ಕೇರಳ ಶ್ರೀ ಭಗವತಿ ಜೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿ ಚೇತನ್ ಮಾರ್ತಾಂಡ ದೇವಿ ಭಗವತಿ ಕಾಟೇರಿ ಪ್ರಯೋಗದಿಂದ, ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ದಾಂಪತ್ಯ ಸಮಸ್ಯೆ, ಶತ್ರು ಭಾಧೇ, ಪ್ರೇತಾ ಭಾದೇ, ಹಣದ ಸಮಸ್ಯೆ, ತನ್ನವರೇ ತನಗೆ ಶತ್ರು, ಕೌಟುಂಬಿಕ ಕಲಹ ನಿಮ್ಮ ಯಾವುದೇ ಸಮಸ್ಯೆಗಳಿಗೆ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ತಕ್ಷಣ ಪರಿಹಾರ ಶತಸಿದ್ಧ.
ಖಾಯಂ ಮನೆ ವಿಳಾಸ: ಮನೆ ನಂ 68, ಸತ್ಯ ಮಾರ್ಗ, ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ.ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

### ಸೈಟು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574

### ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

### MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ಖಿಲ್ಲೆ ವೆಂಕಟರಮಣಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆಆರ್.ಮೊಹಲ್ಲಾ ಮೈಸೂರು.
Mob.: 9986926101

### Permanent Job
A leading South India Group of Co. (Pest Control Company), looking permanent employees for Mysore - Pest Control Service (Labourer's / Technician) experienced and freshers also can apply. Attractive salary & other allowance. Walk-in interview on Monday & Saturday. Contact:
9886465745, 9341934146
Email: kashif@southindiagroup.com

### ಬೇಕಾಗಿದ್ದಾರೆ
ಅನುಭವವುಳ್ಳ ಅಡುಗೆ ಭಟ್ಟರು, ಹೋಟೆಲ್ ಬ್ರಾಂಚ್‌ಗಳನ್ನು ನೋಡಿಕೊಳ್ಳಲು ಮ್ಯಾನೇಜರ್ ಮತ್ತು ಹೆಲ್ಪರ್ಸ್ ಬೇಕಾಗಿದ್ದಾರೆ. ಊಟ, ವಸತಿ ಮತ್ತು ಉತ್ತಮ ಸಂಬಳ ನೀಡಲಾಗುವುದು.
9964644225

### ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಡೇ /ನೈಟ್ ಶಿಫ್ಟ್ ಕೆಲಸಕ್ಕಾಗಿ ಹುಡುಗ / ಹುಡುಗಿಯರು ಬೇಕಾಗಿದ್ದಾರೆ.
ಸಂಬಳ: 11,000/–
7829490009

### ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

### ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

### ವಿವಾಹ ಭಾಗ್ಯ
ಗ್ಲೋಬಲ್ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ:
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿಧುರರು
*FREE REGISTRATION*
0821-3501969

### Premium Residential Layout Vinyas Nandagokula
DTCP Approved.
Ready for Registration.
Attached to NH 275, Near Varuna, T.N. Pura Road, Mysore.
30x40 - Odd sites
9071902562, 9964441122

### ತಿರುಮಲ ಸೆಕ್ಯೂರಿಟಿ ಸರ್ವಿಸ್ ಏಜೆನ್ಸಿ, ಮೈಸೂರು
ಮಾಲೀಕರು: ಚಂದ್ರೇಗೌಡ (Rtd. ಎಎಸ್ಐ ಅಧಿಕಾರಿ)
ಬೇಕಾಗಿದ್ದಾರೆ: ಸೆಕ್ಯೂರಿಟಿ ಗಾರ್ಡ್ – ಭಾರತ್ ಕ್ಯಾನ್ಸರ್ ಆಸ್ಪತ್ರೆ ಹತ್ತಿರ, ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ, ಮೈಸೂರು ಓದಲು ಬರೆಯಲು ತಿಳಿದಿರಬೇಕು. ಸಂಪರ್ಕಿಸಿ:
7619622404, 6361439167

### KHB SITE FOR SALE
30x50 Only 35 Lakhs
Vedapurm ಹಳೇ ಕೆಸರೆ ರೋಡ್
1) Gated community
2) Ring Road 1 km
3) Mysore - Bangalore Road - 1.5 km
4) Good Location
8088006558

### ಕಳೆದಿದೆ
ಮೈಸೂರು ನಗರ, ಶ್ಯಾದನಹಳ್ಳಿ, ಸಾಧನ ಬಡಾವಣೆ, ಮನೆ ನಂ.14 ರಲ್ಲಿ ವಾಸವಾಗಿರುವ ಲೇಟ್ ತಿಮ್ಮೇಗೌಡ ರವರ ಮಗನಾದ ಶ್ರೀ ಟಿ.ಪ್ರಕಾಶ್ ಆದ ನಾನು ಈ ಮೂಲಕ ಪ್ರಮಾಣ ಮಾಡಿ ಹೇಳುವುದೇನೆಂದರೆ, ಆದಾಗಿ ನಾನು ದಿನಾಂಕ: 25.08.2022 ರಂದು ಸಂಜೆ 4.00 ರ ಸಮಯದಲ್ಲಿ ಮೇಟಗಳ್ಳಿ ಹತ್ತಿರ ವಾಹನದಲ್ಲಿ ಸಂಚರಿಸುತ್ತಿರುವಾಗ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಶ್ಯಾದನಹಳ್ಳಿ ಗ್ರಾಮದ ಸರ್ವೆ ನಂ.115 ರ ಜಮೀನಿನಲ್ಲಿ ನಿರ್ಮಿಸಿರುವ "ಸಾಧನ" ಬಡಾವಣೆಯ ನಿವೇಶನ ಸಂಖ್ಯೆ 14 ರ ಸ್ವತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ನನ್ನ ಹೆಸರಿಗೆ ಮಂಜೂರಾತಿಯಾಗಿರುವ ಸ್ವತ್ತಿನ ಕಂದಾಯ ನಿಗಧಿ ಪಡಿಸಿರುವ ರಶೀದಿಯು ಕಳೆದುಹೋಗಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ
7829485016

### WANTED PIGMY AGENTS (4% COM)
*SHARES ARE OPENED.*
For more details contact:
MOB: 9902729729
SAI MULTI STATE CREDIT CO-OPERATIVE SOCIETY
3rd MAIN, 5th CROSS, JAYANAGAR, MYSORE.
Attractive interest rate on FD 11.55% PA

### ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ /ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ). ಸಂಬಳ 12000 ದಿಂದ 18000. (ESI, PF, ಸೌಲಭ್ಯ ಇರುತ್ತದೆ)
8050699742, 7892480649

### LOST
Amrulla Shariff, No. 1011, Near 16th Cross, 2nd Stage, Rajivnagar, Mysuru-570 019, lost of property documents at Rajiv Nagar of property No. 105, LIG-1A, KHB Colony, K.M. Hally Extension, Kalyanagiri.
Finders please contact:
Mob: 9900396027

### WANTED
30X40 SITE
Sapthamathruka Layout, Mysore, Phase 1 or 2.
*Contact:*
Mob: 9900125239

### SITE FOR SALE
30x40 Police Layout, 3rd Stage, IPS Nagar, Mysore.
Mob: 9731204530

### ಎಲೆಕ್ಟ್ರಿಕ್ ವಾಹನ (E.V) ರಿಪೇರಿ ತರಬೇತಿ
Product Development Process ಯಾವುದೇ ವಿದ್ಯಾರ್ಹತೆ. ವಯೋಮಿತಿ ಅಗತ್ಯವಿಲ್ಲ.
100% Placement & Certification
9448355327 / 9242476485

### ಪ್ರಗತಿ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ.ಲಿ
ನಂ.ಸಿ.ಹೆಚ್.18, 6ನೇ ಮೇನ್, 3ನೇ ಕ್ರಾಸ್, ಸರಸ್ವತಿಪುರಂ, ಮೈಸೂರು–09
ನಮ್ಮ ಸಂಘದ 2021–22ನೇ ಸಾಲಿನ 7ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: 22.09.2022 ಗುರುವಾರ ಬೆಳಿಗ್ಗೆ 10.30 ಗಂಟೆಗೆ ಸಂಘದ ಆವರಣದಲ್ಲಿ ಅಧ್ಯಕ್ಷರಾದ ಶ್ರೀ ಎನ್.ಕುಮಾರ್ ಇವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಮಾನ್ಯ ಸದಸ್ಯರು ಸಭೆಯಲ್ಲಿ ಭಾಗವಹಿಸಲು ಕೋರಿದೆ.
ಸಹಿ/– ಶ್ರೀಮತಿ ಎಸ್.ಶೈಲಜಾ,
ಮುಖ್ಯ ಕಾರ್ಯನಿರ್ವಹಣಾಧಿಕಾರಿ

### ಮನೆ ಮಾರಾಟಕ್ಕಿದೆ
ಮೈಸೂರು ನಗರ, ಶ್ರೀರಾಂಪುರ, 2ನೇ ಹಂತ, ಕಂದಾಯನಗರ, ರಿಂಗ್ ರಸ್ತೆಯ ಪಕ್ಕದಲ್ಲಿ, ಉತ್ತರ ದಿಕ್ಕು, ಪೂರ್ವ ಬಾಗಿಲಿನ 3 ಅಂತಸ್ತಿನ 30x40 (G/F, F/F, S/F, T/F) ಮನೆ ಸುಮಾರು 42,000 ತಿಂಗಳಿಗೆ ಬಾಡಿಗೆ ಬರುವಂತಹ ಎಲ್ಲಾ ಸುಸಜ್ಜಿತ ಸೌಲಭ್ಯಗಳುಳ್ಳ ಮನೆ ಮಾರಾಟಕ್ಕಿದೆ. ಬೆಲೆ 1.75 Cr. (Slightly Negotiable). ಹೆಚ್ಚಿನ ವಿವರಗಳಿಗೆ ಮತ್ತು ವೀಕ್ಷಿಸಲು ಕರೆ ಮಾಡಿ
7996504996

### RES PVT LTD
An Edutech Company focusing School solutions
Excellent Salary & Incentives will be offered
Required Experienced Marketing Executives Male / Female with Good communication Skills, Age: Below 35 Years. Call & Whatsapp
9740935179 / 9972506281

### ಸೈಟು ಮಾರಾಟಕ್ಕಿದೆ / ಬಾಡಿಗೆಗೆ ಇದೆ
1) ಶ್ರೀರಾಂಪುರ 3ನೇ ಹಂತ ಕಬಿನಿ ಬಡಾವಣೆ Corner Site S/W Corner 1600 Sq Site.
2) DTS ರಾವ್‌ನಗರ ಸಾತಗಳ್ಳಿ A Block, W/F 40x60 Site.
3) ಶ್ರೀರಾಂಪುರ (Near ವಿವೇಕಾನಂದ ಸರ್ಕಲ್) 10 BHK, P.G ಗೆ ಬಾಡಿಗೆಗೆ ಇದೆ. Owner Sitting
9986540870

### WANTED
Well Experienced Security Guards required PUC Passed
Salary: 20,000/-.
Please Contact:
9035269781 / 9108100117
9916772043 / 0821-4852002

### ಬೇಕಾಗಿದ್ದಾರೆ
1) ನುರಿತ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್ಸ್‌ಗಳು ಮೈಸೂರಿನಲ್ಲಿ (ಬನ್ನಿಮಂಟಪ) ಕರ್ತವ್ಯ ನಿರ್ವಹಿಸಲು ಬೇಕಾಗಿದ್ದಾರೆ.
2) ಸ್ವಚ್ಛತಾ ಕೆಲಸಗಾರರು (ಹೌಸ್ ಕೀಪಿಂಗ್) ಬೇಕಾಗಿದ್ದಾರೆ. ಸ್ಥಳ: ಬನ್ನಿಮಂಟಪ, ರಾಘವೇಂದ್ರನಗರ, ಮಾನಸಗಂಗೋತ್ರಿ, ವೇತನ: 10,000–15,000 8 ಗಂಟೆ ಅವಧಿ, ಕೆಲಸ + ವಾರದ ರಜೆ. ವಯೋಮಿತಿ: 25 ರಿಂದ 45, SSLC Pass ಸಂಪರ್ಕಿಸಿ: ಕರ್ನಾಟಕ ಸೆಕ್ಯೂರಿಟಿ ಏಜೆನ್ಸಿ, ನಂ.513, ಲಕ್ಷ್ಮಿ ಚಿತ್ರಮಂದಿರ ಎದುರು ರಸ್ತೆ, ಬುಲೆಟ್ ಶೋರೂಂ ಹತ್ತಿರ, ಕೆ.ಆರ್.ಮೊಹಲ್ಲಾ, ಮೈಸೂರು.
0821-4247385 / 9480420666
(ಬೆಳಿಗ್ಗೆ 10 ರಿಂದ 5.30 ರವರೆಗೆ ಕರೆ ಮಾಡತಕ್ಕದ್ದು)

### ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ.
ಸಂಬಳ+ಓಟಿ, 15,200–86000.
9740733021 / 9535028750

### ಪಾರ್ಟ್‌ಟೈಮ್ ಕೆಲಸ
ರೆಡಿಮೆಡ್ ಅಂಗಡಿಗೆ ಹೆಲ್ಪರ್ 30 ವರ್ಷ ಒಳಗೆ ಲೇಡಿಸ್ ಮಾತ್ರ
3 pm to 8 pm 1 Post
4 pm to 8.30 pm 1 Post
ಅನುಭವ ಬೇಕಿಲ್ಲ. ಅಗ್ರಹಾರ 101 ಗಣಪತಿ ಹಿಂಭಾಗ, ಬಸವೇಶ್ವರ ರಸ್ತೆ, 5ನೇ ಕ್ರಾಸ್, ಮೈಸೂರು.
7975893679

### ಉದ್ಯೋಗ ಅವಕಾಶ ಬೇಕಾಗಿದ್ದಾರೆ
ಸಿಬಿ ನರಸಿಂಹಸ್ವಾಮಿ ಚಿಟ್ಸ್ (ಕ) ಪ್ರೈ.ಲಿ. 2001 ತುಮಕೂರು, ಬೆಂಗಳೂರು, ಮೈಸೂರು, ಹಾಸನ, ರಾಮನಗರ, ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ ಮೇಲ್ಪಟ್ಟು, ವಯಸ್ಸು 25 ವರ್ಷದಿಂದ 65 ವರ್ಷದವರೆಗೆ, ಅವಕಾಶ: ನಿರುದ್ಯೋಗಿಗಳು, ನಿವೃತ್ತರು, ಪಿಗ್ಮಿ ಏಜೆಂಟರುಗಳು, ವ್ಯಾಪಾರಿಗಳು, ಗೃಹಿಣಿಯರು, ಇನ್ಸೂರೆನ್ಸ್ ಪ್ರತಿನಿಧಿಗಳು, ಚೀಟಿ ಮತ್ತು ಫೈನಾನ್ಸ್ ವ್ಯವಹಾರದಲ್ಲಿ ಅನುಭವವಿರುವವರು ವೇತನ: 25,000 ರೂ. ಮತ್ತು ಇತರೆ ಭತ್ಯೆಗಳು ಸಂದರ್ಶನ ದಿನಾಂಕ: 16–09–2022, ಸಮಯ: 11.30ಕ್ಕೆ ಸಂಪರ್ಕಿಸಿ:
7892303484 / 9483247455

### ಗ್ರಾವೆಲ್ ಮಣ್ಣು
ಕೆಮ್ಮಣ್ಣು ದೊರೆಯುತ್ತದೆ.
ಹಳೇ ಮನೆಗಳನ್ನು ಡೆಮಾಲಿಶ್ ಮಾಡಿಕೊಡಲಾಗುತ್ತದೆ.
7259407518
8310220458

### WANTED ಬೇಕಾಗಿದ್ದಾರೆ
Waiter, Cook, Cleaner, Cashier
ಗಾರ್ಡನ್ ರೆಸ್ಟೋರೆಂಟ್
7795011124

### HOUSE FOR LEASE
308, 4th Main, Vasanthnagar Behind Vidya Vikas College, Mysore-570002. House for Lease for 6 Lakhs.
Contact Number
8310427773

### WANTED
Tally Experienced Candidate for Audit Firm in Siddartha Layout, Mysore.
Contact:
9972728085

### SITE FOR SALE
Site Dimension: 1408 Sq.ft. (40x35) "West Facing", Location: "Flamingo Royals Splendor" Near Mysuru, Srirangapatna.
Amount: 23,50,000/- (Negotiable). Contact:
7899169517
7760032945

### ಉದ್ಯೋಗಾವಕಾಶ
ಕೇಂದ್ರ / ರಾಜ್ಯ ನಿವೃತ್ತ, ಸಾರ್ವಜನಿಕ ಮತ್ತು ಉದ್ಯಮಿದಾರರಿಗೆ ಬ್ಯಾಂಕ್ ಸಮೂಹದಿಂದ ಸೆಮಿನಾರನ್ನು ಏರ್ಪಡಿಸಲಾಗಿದೆ. Fixed Salary + PF age 30 years & above ಸ್ಥಳ: ಮೌರ್ಯ ರೆಸಿಡೆನ್ಸಿ, ಹರ್ಷ ರಸ್ತೆ, ಮೈಸೂರು, ದಿನಾಂಕ: 17/09/22, ಸಮಯ ಬೆಳಿಗ್ಗೆ 11–00 ಗಂಟೆಯಿಂದ followed by Lunch
9449068132 / 9480055885

### ಬೇಕಾಗಿದ್ದಾರೆ
ಪಿರಿಯಾಪಟ್ಟಣದಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಅಡಿಗಾಸ್ ವೆಜ್ ರೆಸ್ಟೋರೆಂಟ್‌ಗೆ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ.
ಸೌತ್ ಅಡುಗೆ ಭಟ್ಟರು–2, ಅಡುಗೆ ಸಹಾಯಕರು–2, ದೋಸೆ ಭಟ್ಟರು –2, ಕಾಫಿ ಟೀ ಮೇಕರ್ಸ್–4.
ಕೂಡಲೇ ಸಂಪರ್ಕಿಸಿ.
9986039421

### ಬೇಕಾಗಿದ್ದಾರೆ
ಬಿಲ್ಲಿಂಗ್ ಕೆಲಸಕ್ಕೆ ಕಂಪ್ಯೂಟರ್ ಜ್ಞಾನ ಹೊಂದಿರುವ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ.
ಸ್ಥಳ: ನೀಲಕಂಠ ಇಂಡಸ್ಟ್ರೀಸ್, ಜಟ್ಟಿಹುಂಡಿ, ಮೈಸೂರು. ಬೋಗಾದಿ ಗದ್ದಿಗೆ ಮುಖ್ಯರಸ್ತೆ
9986768057

### ಬೇಕಾಗಿದ್ದಾರೆ
Firedrake Wealth Consultancy India Private Limited
ಕಂಪನಿಯಲ್ಲಿ ಫೀಲ್ಡ್ ವರ್ಕ್ ನೆಟ್‌ವರ್ಕ್ ಬ್ಯುಸಿನೆಸ್‌ನಲ್ಲಿ ಅನುಭವವುಳ್ಳ ಯುವತಿ / ಯುವಕರು ಕೆಲಸಕ್ಕಾಗಿ ಬೇಕಾಗಿದ್ದಾರೆ. 15,000 ರಿಂದ 25000 ದವರೆಗೆ ಸಂಬಳ, ಕಮಿಷನ್, ಇನ್‌ಸೆಂಟಿವ್ ಮತ್ತು ಪೆನ್ಷನ್ ಸೌಲಭ್ಯವಿರುತ್ತದೆ. ವಯೋಮಿತಿ 21 ರಿಂದ 55 ವರ್ಷ.
9911156284 / 8722492098

### ಮೈಸೂರು ಮಿತ್ರ — ಓದುಗರ ಗಮನಕ್ಕೆ
43
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 8 ರಲ್ಲಿ

# ರೋಗಿಗಳ ಮನೆ ಬಾಗಿಲಿಗೇ ವೈದ್ಯರು!

● ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಚಿಕಿತ್ಸೆ, ಸಲಹೆ ● ದೀರ್ಘಾವಧಿ ಖಾಯಿಲೆಗಳಿಂದ ಬಳಲುತ್ತಿರುವವರಿಗೆ ಜಿಲ್ಲಾ ಆಸ್ಪತ್ರೆಯಲ್ಲಿ ಪ್ರತ್ಯೇಕ ವಾರ್ಡ್ ● ಆರೋಗ್ಯ ಸಹಾಯವಾಣಿ 104ಕ್ಕೆ ಕರೆ ಮಾಡಿದರೆ ವೈದ್ಯರ ಸೇವೆ ಲಭ್ಯ ● 12 ಮಂದಿ ಪ್ರತ್ಯೇಕ ಸಿಬ್ಬಂದಿ, ವಾಹನ ಪೂರೈಕೆ

ಮೈಸೂರು, ಸೆ.14((ಆರ್‌ಕೆ)– ಸುದೀರ್ಘ ಖಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಚಿಕಿತ್ಸೆ, ಸಲಹೆ ನೀಡಲು ವೈದ್ಯರು ನಿಮ್ಮ ಮನೆಗೇ ಬರಲಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ರಾಷ್ಟ್ರೀಯ ಆರೋಗ್ಯ ಅಭಿಯಾನ (National Health Mission) ದಡಿ ಅಗತ್ಯವಿರುವ ರೋಗಿಗಳ ಮನೆಗೇ ತೆರಳಿ ವೈದ್ಯಕೀಯ ಸೇವೆ ಒದಗಿಸಲಾಗುತ್ತಿದೆ. ಪಾರ್ಶ್ವವಾಯು, ಮಂಡಿ ನೋವು, ಹಳೇ ಗಾಯದಂತಹ ಸುದೀರ್ಘ ಅವಧಿಯ ಖಾಯಿಲೆಗಳಿಂದ ಬಳಲುತ್ತಿರುವ ಹಾಗೂ ಆಸ್ಪತ್ರೆಗಳಿಗೆ ಹೋಗಲು ಸಾಧ್ಯವಾಗದ ರೋಗಿಗಳಿಗೆ ಅವರ ಮನೆಗೇ ಬರುವ ವೈದ್ಯರ ತಂಡವು ಸೂಕ್ತ ಸಲಹೆ ಹಾಗೂ ಚಿಕಿತ್ಸೆ ನೀಡಲಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ತಿಳಿಸಿದ್ದಾರೆ.

ಈ ಉದ್ದೇಶಕ್ಕಾಗಿ ವೈದ್ಯರ ತಂಡಕ್ಕೆ ಒಂದು ಪ್ರತ್ಯೇಕ ವಾಹನವನ್ನು ನಾಳೆ(ಗುರುವಾರ) ಹಸ್ತಾಂತರಿಸಲಿದ್ದು, ಚಾಲಕ, ವಾಹನ ನಿರ್ವಹಣೆಗೆ ಅನುದಾನ ನೀಡಲಾಗುವುದು ಎಂದ ಡಾ.ಪ್ರಸಾದ್, ಹಿರಿಯರು, ರೋಗಿಗಳು ಈ ಸೌಲಭ್ಯವನ್ನು ಬಳಸಿಕೊಳ್ಳುವಂತೆ ತಿಳಿಸಿದ್ದಾರೆ.



ಮೈಸೂರಿನ ಜಿಲ್ಲಾ ಆಸ್ಪತ್ರೆಯಲ್ಲಿನ ಪ್ರತ್ಯೇಕ ವಾರ್ಡ್‌ನಲ್ಲಿ ಮಾಡಿರುವ ಸೌಲಭ್ಯವನ್ನು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ಪರಿಶೀಲಿಸಿದರು. ಚಿತ್ರದಲ್ಲಿ ಸ್ಥಾನಿಕ ವೈದ್ಯಾಧಿಕಾರಿ ಡಾ.ನಯಾಜ್ ಅಹಮದ್ ಹಾಗೂ ಸಿಬ್ಬಂದಿಗಳಿದ್ದಾರೆ.

**ಉಪಶಮನ ಕೇಂದ್ರ:** ಕ್ಯಾನ್ಸರ್, ನರ ರೋಗ, ಪಾರ್ಶ್ವವಾಯು, ಕೀಲು ನೋವಿನಂತಹ ರೋಗಗಳಿಂದ ಬಳಲುತ್ತಿರುವ ಸುದೀರ್ಘ ಅವಧಿಯಲ್ಲಿ ನಿರಂತರವಾಗಿ ಚಿಕಿತ್ಸೆ ಅಗತ್ಯವಿರುವ ರೋಗಿಗಳಿಗೆ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಜಿಲ್ಲಾ ಆಸ್ಪತ್ರೆಯಲ್ಲಿ 20 ಹಾಸಿಗೆಯ ಪ್ರತ್ಯೇಕ ವಾರ್ಡ್ ಸಿದ್ಧಪಡಿಸಿದ್ದೇವೆ ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳು ತಿಳಿಸಿದರು.

> “ವೈದ್ಯರು ಸೇರಿ 12 ಸಿಬ್ಬಂದಿಯನ್ನು ಈ ಉದ್ದೇಶಕ್ಕಾಗಿ ನಿಯೋಜಿಸಲಾಗಿದ್ದು, ಒಂದು ಪಾಳಿಗೆ 6 ಮಂದಿಯಂತೆ 2 ಪಾಳಿಯಲ್ಲಿ ಅವರು ಕಾರ್ಯನಿರ್ವಹಿಸುವರು. ಆರೋಗ್ಯ ಸಹಾಯವಾಣಿ 104ಕ್ಕೆ ಕರೆ ಮಾಡಿದರೆ ರೋಗಿಗಳ ಮನೆಗೇ ಧಾವಿಸುವ ತಂಡವು, ಪರೀಕ್ಷಿಸಿ ಚಿಕಿತ್ಸೆ ನೀಡಲಿದ್ದು, ಚಿಕಿತ್ಸೆ ಪಡೆಯುವ ವಿಧಾನ, ವ್ಯಾಯಾಮ, ಗಾಯಗಳಿಗೆ ಡ್ರೆಸ್ಸಿಂಗ್ ಮಾಡುವ ವಿಧಾನದ ಬಗ್ಗೆ ಸಲಹೆ ನೀಡುವರಲ್ಲದೇ, ಮನೆಯಲ್ಲಿ ಟ್ರೀಟ್‌ಮೆಂಟ್ ಪಡೆಯಲು ಸಾಧ್ಯವಾಗದಿದ್ದಲ್ಲಿ ಜಿಲ್ಲಾಸ್ಪತ್ರೆಯ ಪ್ರತ್ಯೇಕ ವಾರ್ಡ್‌ಗೆ ಸ್ಥಳಾಂತರಿಸುವರು. –ಡಾ.ಪ್ರಸಾದ್, ಡಿಹೆಚ್‌ಓ

ಕಳೆದ ಒಂದು ವರ್ಷದ ಹಿಂದೆಯೇ ವಾರ್ಡ್ ಸಿದ್ಧವಾಗಿತ್ತಾದರೂ, ಕೋವಿಡ್–19 ಪರಿಸ್ಥಿತಿಯಿಂದಾಗಿ ರೋಗಿಗಳು ಅಲ್ಲಿ ದಾಖಲಾಗಿರಲಿಲ್ಲ. ಇದೀಗ ಮತ್ತೆ ಚಾಲನೆ ನೀಡಲಾಗುತ್ತಿದ್ದು, ಒಳ ರೋಗಿಗಳಾಗಿ ಚಿಕಿತ್ಸೆ ಪಡೆಯಲು ವೈದ್ಯರು, ನರ್ಸ್‌ಗಳು, ‘ಡಿ’ ಗ್ರೂಪ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಮನೆಯಲ್ಲಿ ನೋಡಿಕೊಳ್ಳಲಾಗದ ರೋಗಿಗಳನ್ನು ಜಿಲ್ಲಾಸ್ಪತ್ರೆಯ ಉಪಶಮನ ಕೇಂದ್ರದ ಪ್ರತ್ಯೇಕ ವಾರ್ಡ್‌ನಲ್ಲಿರಿಸಿ ಚಿಕಿತ್ಸೆ, ಪಾಲನೆ ಮಾಡಲಾಗುವುದು ಎಂದರು.

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ 20 ಲಕ್ಷ ರೂ.ಗಳನ್ನು ಖರ್ಚು ಮಾಡಿ ಸಿದ್ಧಪಡಿಸಿರುವ ಉಪಶಮನ ಕೇಂದ್ರಕ್ಕೆ ಈಗ ರೋಗಿಗಳನ್ನು ದಾಖಲಿಸಿಕೊಳ್ಳುತ್ತಿದ್ದೇವೆ. ಸೇವೆ ಅಗತ್ಯವಿರುವವರು 104ಕ್ಕೆ ಕರೆ ಮಾಡಿದರೆ ಅವರನ್ನು ಕರೆತಂದು ಚಿಕಿತ್ಸೆ ಮಾಡಲಾಗುವುದು ಎಂದು ತಿಳಿಸಿದರು.

ಈ ಉದ್ದೇಶಕ್ಕಾಗಿ ಆಂಬುಲೆನ್ಸ್ ವ್ಯವಸ್ಥೆ ಇದ್ದು, ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಜಿಲ್ಲಾ ಸರ್ಜನ್ ಡಾ.ಅಮರನಾಥ್ ಅವರ ನೇತೃತ್ವದಲ್ಲಿ ಜಿಲ್ಲಾಸ್ಪತ್ರೆ ಹಾಗೂ ಉಪಶಮನ ಕೇಂದ್ರ (ಪ್ರತ್ಯೇಕ ವಾರ್ಡ್)ವನ್ನು ನಿರ್ವಹಣೆ ಮಾಡಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

## ಮೈಸೂರು ವಿಭಾಗೀಯ ಪತ್ರಾಗಾರ ಕಚೇರಿಗೆ ಸುರಕ್ಷತೆ ಕಲ್ಪಿಸಲು ಲೋಕಾಯುಕ್ತರಿಗೆ ಮನವಿ

ವಿಶ್ವ ಮಾನವ ಹಕ್ಕುಗಳ ಸೇವಾ ಕೇಂದ್ರದ ಸಂಸ್ಥಾಪಕ ಅಧ್ಯಕ್ಷರಿಂದ ಪತ್ರ

ಮೈಸೂರು,ಸೆ.14(ಪಿಎಂ)–ಮೈಸೂರಿನ ಪತ್ರಾಗಾರ ಇಲಾಖೆಯ ಮೈಸೂರು ವಿಭಾಗೀಯ ಕಚೇರಿಗೆ (ಪತ್ರಾಗಾರ) ಹೆಚ್ಚಿನ ಸುರಕ್ಷತೆ ದೃಷ್ಟಿಯಿಂದ ಪೊಲೀಸ್ ಅಥವಾ ಸಿಐಎಸ್‌ಎಫ್ ನಿಯೋಜನೆ ಜೊತೆಗೆ ದಾಖಲೆಗಳ ಸಂಗ್ರಹಗಾರಕ್ಕೆ ಸ್ಟ್ರಾಂಗ್ ರೂಮ್ ಸುರಕ್ಷತೆ ಕಲ್ಪಿಸಲು ಕ್ರಮ ವಹಿಸುವಂತೆ ಕರ್ನಾಟಕ ಲೋಕಾಯುಕ್ತ ನ್ಯಾ.ಬಿ.ಎಸ್.ಪಾಟೀಲ್ ಅವರಿಗೆ ತುಮಕೂರು ಜಿಲ್ಲೆ ತುರುವೇಕೆರೆ ತಾಲೂಕಿನ ವಿಶ್ವ ಮಾನವ ಹಕ್ಕುಗಳ ಸೇವಾ ಕೇಂದ್ರದ ಸಂಸ್ಥಾಪಕ ಅಧ್ಯಕ್ಷ ಸಿದ್ದಲಿಂಗೇಗೌಡ ಪತ್ರ ಮುಖೇನ ಮನವಿ ಮಾಡಿದ್ದಾರೆ. ವಿಶ್ವೇಶ್ವರನಗರದಲ್ಲಿರುವ ಮೈಸೂರು ವಿಭಾಗೀಯ ಪತ್ರಾಗಾರ ಕಚೇರಿಗೆ ಭೇಟಿ ನೀಡಿ ಬೆಂಕಿ, ವಿದ್ಯುತ್ ಅವಘಡ ಸೇರಿದಂತೆ ಪ್ರಕೃತಿ ವಿಕೋಪದ ಅನಾಹುತದ ಹಿನ್ನೆಲೆಯಲ್ಲಿ ಅವಲೋಕಿಸಿದಾಗ, ಸುರಕ್ಷತೆಗೆ ಆದ್ಯತೆ ಇಲ್ಲದಿರುವುದು ಗೋಚರಿಸಿದೆ. ಮಹತ್ವದ ಇತಿಹಾಸದ ದಾಖಲೆಗಳು ಸುರಕ್ಷಿತವಾಗಿಲ್ಲದ ಆತಂಕ ಎದುರಾಗಿದೆ. ಮೈಸೂರು ಮಹಾಸಂಸ್ಥಾನದ ಚರಿತ್ರೆ, ಗೆಜೆಟ್‌ಗಳು ಸೇರಿದಂತೆ ಅಮೂಲ್ಯ ದಾಖಲೆಗಳ ಸಂಗ್ರಹಾಗಾರ ಇದಾಗಿದೆ.



ಮೈಸೂರು ವಿಭಾಗೀಯ ಪತ್ರಾಗಾರ ಕಚೇರಿಗೆ ವಿಶ್ವ ಮಾನವ ಹಕ್ಕುಗಳ ಸೇವಾ ಕೇಂದ್ರದ ಸಂಸ್ಥಾಪಕ ಅಧ್ಯಕ್ಷ ಸಿದ್ದಲಿಂಗೇಗೌಡ, ಇತರರು ಭೇಟಿ ನೀಡಿ ಅವಲೋಕಿಸಿದ ಸಂದರ್ಭ.

ಇದರ ಉಪಯುಕ್ತತೆ ಮಹತ್ವದ್ದಾಗಿದೆ. ಹಾಗಾಗಿ ಇದಕ್ಕೆ ಆರ್‌ಬಿಐ ಮಾದರಿ ಸುರಕ್ಷತೆ ಕಲ್ಪಿಸುವುದು ಸರ್ಕಾರದ ಆದ್ಯ ಕರ್ತವ್ಯ. ಆದರೆ ರಾಜ್ಯ ಸರ್ಕಾರ ಈ ಬಗ್ಗೆ ಗಂಭೀರ ಚಿಂತನೆ ಮಾಡಿದಂತಿಲ್ಲ. ಅನವಶ್ಯಕವಾಗಿ ರಾಜಕಾರಣಿಗಳು, ಜನಪ್ರತಿನಿಧಿಗಳು ಸೇರಿದಂತೆ ಮೊದಲಾದವರಿಗೆ ಪೊಲೀಸ್ ಭದ್ರತೆಯ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಇದರಿಂದ ನಾಗರಿಕ ಸಮಾಜಕ್ಕೆ ಯಾವ ಪ್ರಯೋಜನವೂ ಇಲ್ಲ. ಆದರೆ ಈ ಪತ್ರಾಗಾರಕ್ಕೆ ಪೊಲೀಸ್ ಭದ್ರತೆ ಕಲ್ಪಿಸಿ ಸುರಕ್ಷತೆಗೆ ಸೂಕ್ತ ಕ್ರಮ ವಹಿಸಬೇಕಿದೆ. ಜೊತೆಗೆ ದಾಖಲೆಗಳಿರುವ ಕೊಠಡಿಗೆ ಸ್ಟ್ರಾಂಗ್ ರೂಮ್ ವ್ಯವಸ್ಥೆ ಕಲ್ಪಿಸಬೇಕಿದೆ. ಅಲ್ಲದೆ, ಗ್ರಂಥಪಾಲಕ ಸೇರಿದಂತೆ ಮಂಜೂರಾದ ಎಲ್ಲಾ ಹುದ್ದೆಗಳನ್ನು ತುರ್ತು ಸೇವಾ ನಿಯಮದಡಿ ಭರ್ತಿಗೆ ಕ್ರಮ ಕೈಗೊಳ್ಳಬೇಕು. ಈಗಿರುವ ಹೊರಗುತ್ತಿಗೆದಾರರಿಗೆ ಕನಿಷ್ಠ 20 ಸಾವಿರ ರೂ. ವೇತನದೊಂದಿಗೆ ಇಎಸ್‌ಐ, ಪಿಎಫ್ ಸೇರಿದಂತೆ ಇತರೆ ಸೌಲಭ್ಯ ಕಲ್ಪಿಸಬೇಕು. ಅಲ್ಲದೆ, ಈ ಪತ್ರಾಗಾರದ ಪೂರ್ವದಲ್ಲಿ ಕಾಂಪೌಂಡ್ ಅನ್ನು ಪೂರ್ಣ ಪ್ರಮಾಣದಲ್ಲಿ ನಿರ್ಮಿಸಲು ಕ್ರಮ ವಹಿಸಬೇಕೆಂದು ಸಿದ್ದಲಿಂಗೇಗೌಡ ಪತ್ರದಲ್ಲಿ ಕೋರಿದ್ದಾರೆ.

## ಗಂಗಾ ಕಲ್ಯಾಣ ಯೋಜನೆ ಅವ್ಯವಹಾರದ ಸಮಗ್ರ ತನಿಖೆ

ಬೆಂಗಳೂರು, ಸೆ.14(ಕೆಎಂಶಿ)– ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಸಮಗ್ರ ತನಿಖೆ ನಡೆಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿ ಪ್ರಕಟಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ವರುಣಾ ಕ್ಷೇತ್ರದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಪ್ರಿಯಾಂಕ್ ಖರ್ಗೆ ಸೇರಿದಂತೆ ಮತ್ತಿತರ ಸದಸ್ಯರು ಮಾಡಿದ ಪ್ರಸ್ತಾವಕ್ಕೆ ಮಧ್ಯೆ ಪ್ರವೇಶಿಸಿ ಮಾತನಾಡಿದ ಮುಖ್ಯಮಂತ್ರಿಯವರು, ಕೊಳವೆ ಬಾವಿ ಹಂಚಿಕೆಯಲ್ಲಿ ನಡೆದಿರುವ ತಾರತಮ್ಯ, ಅರ್ಹರಲ್ಲದವರಿಗೆ ಗುತ್ತಿಗೆ ನೀಡಿರುವುದು ಹಾಗೂ ದರ ನಿಗದಿಯ ವ್ಯತ್ಯಾಸದ ಬಗ್ಗೆ ತನಿಖೆಗೆ ಒಳಪಡಿಸಲಾಗುವುದು. ಗಂಗಾಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳಿಗೆ ಅನುಮತಿ ನೀಡಿ, ಪೂರ್ಣಗೊಳ್ಳದಿರುವುದನ್ನು ಈ ವರ್ಷಾಂತ್ಯದೊಳಗೆ ಪೂರ್ಣಗೊಳಿಸಲಾಗುವುದು. ಅಷ್ಟೇ ಅಲ್ಲ, ಪ್ರಸಕ್ತ ವರ್ಷ ತೆಗೆದುಕೊಂಡಿರುವ ಯೋಜನೆಗಳಿಗೂ ಈ ವರ್ಷವೇ ಮುಕ್ತಿ ನೀಡಲು ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿಯವರು ತಿಳಿಸಿದ್ದಾರೆ.



## ಅಧಿಕಾರಿಗಳಿಂದ ರೈತರಿಗೆ ಆಗುತ್ತಿರುವ ಅನ್ಯಾಯ ಸರಿಪಡಿಸಿ

ಬೆಂಗಳೂರು, ಸೆ.14– ದೇಶದ ಬೆನ್ನೆಲುಬು ರೈತ ಎನ್ನುತ್ತಾರೆ. ಆದರೆ ರೈತರಿಗೆ ಆಗುತ್ತಿರುವ ಅನ್ಯಾಯ ಬೇರೆಯಾರಿಗೂ ಆಗಿಲ್ಲ. ರೈತರು ಆಸ್ತಿಹಕ್ಕಿಗೆ ಸಂಬಂಧಿಸಿದಂತೆ ತಹಸೀಲ್ದಾರ್, ಕೋರ್ಟ್, ಎಸಿ ಹಾಗೂ ಡಿಸಿ ಕೋರ್ಟ್‌ಗಳಲ್ಲಿ ವರ್ಷಗಳೇ ಕಳೆದರೂ ಅಧಿಕಾರಿಗಳ ಬೇಜವಾಬ್ದಾರಿತನದಿಂದ ಇತ್ಯರ್ಥವಾಗದೆ ಇರುವ ಕೇಸ್‌ಗಳನ್ನು ಇತ್ಯರ್ಥಪಡಿಸಿ, ರೈತರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸರ್ಕಾರವನ್ನು ಒತ್ತಾಯಿಸಿದರು.



ಸಿ.ಎನ್.ಮಂಜೇಗೌಡ

ವಿಧಾನಪರಿಷತ್‌ನಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಮೇಲೆ ಮಾತನಾಡಿದ ಅವರು, ಆಸ್ತಿಹಕ್ಕು, ಪಹಣಿ, ಆರ್‌ಟಿಸಿ ಹಾಗೂ ಮ್ಯುಟೇಷನ್ ಸಂಬಂಧಿಸಿದ ಅರ್ಜಿಗಳು 2ರಿಂದ 3 ವರ್ಷಗಳಾದರೂ ವಿಲೇವಾರಿಯಾಗದೆ ರೈತರು ಮತ್ತು ಸಾರ್ವಜನಿಕರಿಂದ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತವಾಗುತ್ತಿದೆ. ಸ್ವೀಕೃತಿಗೊಂಡ 3 ತಿಂಗಳಲ್ಲಿ ತಹಶೀಲ್ದಾರ್ ಇತ್ಯರ್ಥಪಡಿಸಬೇಕು. ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ಸಲ್ಲಿಸಲಾಗಿರುವ ದೂರುಗಳನ್ನು 6 ತಿಂಗಳಲ್ಲಿ ಇತ್ಯರ್ಥ ಪಡಿಸಬೇಕು ಎಂದು ಸರ್ಕಾರದ ಸುತ್ತೋಲೆಯಲ್ಲಿಯೇ ಇದೆ. ಹಾಗಿದ್ದಲ್ಲಿ ಸರ್ಕಾರ ಸುತ್ತೋಲೆ ಹೊರಡಿಸಿದ ನಂತರ ಇಲ್ಲಿಯತನಕ ಎಷ್ಟು ಪ್ರಕರಣಗಳನ್ನು 6 ತಿಂಗಳ ಒಳಗಾಗಿ ಬಗೆಹರಿಸಲಾಗಿದೆ ಎಂಬ ಕಂದಾಯ ಸಚಿವ ಆರ್.ಅಶೋಕ್ ನೀಡಿರುವ ಉತ್ತರ ಸಮರ್ಪಕವಾಗಿಲ್ಲ ಎಂದು ಆಕ್ಷೇಪಿಸಿದರು. ನಂತರ ರಾಜ್ಯದಲ್ಲಿ ರೈತರಿಗೆ ಸಂಬಂಧಿಸಿದ ಸಾವಿರಾರು ಪ್ರಕರಣಗಳು ತಹಸೀಲ್ದಾರ್, ಎಸಿ, ಡಿಸಿ ಕೋರ್ಟ್‌ಗಳಲ್ಲಿ ಇತ್ಯರ್ಥವಾಗಬೇಕಿದೆ. ಅದರ ಬಗ್ಗೆ ಸದ್ಯವೇ ಕ್ರಮ ಜರುಗಿಸುವುದಾಗಿ ಸಚಿವ ಆರ್.ಅಶೋಕ್ ಭರವಸೆ ನೀಡಿದರು.

## ಕೆ.ಆರ್., ಚೆಲುವಾಂಬ, ಪಿಕೆಟಿಬಿ ಆಸ್ಪತ್ರೆ ಕಟ್ಟಡಗಳ ನವೀಕರಣಕ್ಕೆ 89 ಕೋಟಿ ಬಿಡುಗಡೆ: ಸಿಎಂಗೆ ಶಾಸಕ ನಾಗೇಂದ್ರ ಕೃತಜ್ಞತೆ

ಮೈಸೂರು,ಸೆ.14–ಮೈಸೂರು ಹಾಗೂ ಸುತ್ತಮುತ್ತಲ ಜಿಲ್ಲೆಗಳ ಬಡವರು ಮತ್ತು ದೀನರ ಪಾಲಿನ ಆರೋಗ್ಯದ ಆಶಾಕಿರಣವಾಗಿರುವ ಕೆ.ಆರ್. ಆಸ್ಪತ್ರೆ ಸೇರಿದಂತೆ ಇದರ ವ್ಯಾಪ್ತಿಗೆ ಬರುವ ಆಸ್ಪತ್ರೆಗಳ 14 ಕಟ್ಟಡಗಳ ನವೀಕರಣಕ್ಕೆ 89 ಕೋಟಿ ಅನುದಾನ ಬಿಡುಗಡೆಗೆ ಕಾರಣಕರ್ತರಾದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅಭಿನಂದಿಸಿದ್ದಾರೆ ಹಾಗೂ ತಮ್ಮ ಮನವಿಗೆ ಮನ್ನಣೆ ನೀಡಿದ್ದಕ್ಕಾಗಿ ಕೃತಜ್ಞತೆ ಸಲ್ಲಿಸಿದ್ದಾರೆ. ಇಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಕೆ.ಆರ್. ಆಸ್ಪತ್ರೆ, ಚೆಲುವಾಂಬ, ಪಿಕೆಟಿಬಿ ಸೇರಿದಂತೆ 14 ಕಟ್ಟಡಗಳ ನವೀಕರಣಕ್ಕೆ ಅನುಮೋದನೆ ನೀಡಿದ್ದಲ್ಲದೆ, 89 ಕೋಟಿ ಅನುದಾನ ನೀಡಲು ಸಂಪುಟ ಒಪ್ಪಿಗೆ ನೀಡಿದೆ. ಈ ಹಿನ್ನೆಲೆಯಲ್ಲಿ 100 ವರ್ಷಗಳ ಕೆ.ಆರ್.ಆಸ್ಪತ್ರೆ ಕಟ್ಟಡ ಪುನರುಜ್ಜೀವನಗೊಳ್ಳಲಿದೆ. ಮೈಸೂರು ಜನತೆಗೆ ಅದರಲ್ಲೂ ಬಡವರಿಗೆ ಆರೋಗ್ಯ ಸೌಕರ್ಯಕ್ಕಾಗಿ ಮುಖ್ಯಮಂತ್ರಿಗಳು ಈ ಭಾರೀ ಪ್ರಮಾಣದ ಅನುದಾನವನ್ನು ಬಿಡುಗಡೆ ಮಾಡಿದ್ದಾರೆ. ಹಲವು ಬಾರಿ ನಾನು ಮಾಡಿದಂತ ಮನವಿಗೆ ಮನ್ನಣೆ ನೀಡಿದ್ದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ ಎಂದು ಶಾಸಕ ನಾಗೇಂದ್ರ ತಿಳಿಸಿದ್ದಾರೆ.



# ಕೆಆರ್ ಕ್ಷೇತ್ರದ ವಿವಿಧ ರಸ್ತೆಗೆ 9 ಕೋಟಿ ವೆಚ್ಚದಲ್ಲಿ ಡಾಂಬರೀಕರಣ

### ಶಾಸಕ ಎಸ್.ಎ.ರಾಮದಾಸ್‌ರಿಂದ ಚಾಲನೆ

ಮೈಸೂರು, ಸೆ.14 (ಪಿಎಂ)– ಮೈಸೂರಿನ ಕೆಆರ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ರಸ್ತೆಗಳ ಡಾಂಬರೀಕರಣ ಕಾಮಗಾರಿಗೆ ಕ್ಷೇತ್ರದ ಶಾಸಕರೂ ಆದ ಮಾಜಿ ಸಚಿವ ಎಸ್.ಎ.ರಾಮದಾಸ್ ಬುಧವಾರ ಚಾಲನೆ ನೀಡಿದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅನುದಾನ ಒಟ್ಟು 9 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ವಾರ್ಡ್ 62 ಮತ್ತು 63ರ ಜೆಪಿನಗರದ ವಿವಿಧ ರಸ್ತೆಗಳ ಡಾಂಬರೀಕರಣಕ್ಕೆ ಶಾಸಕರು ಗುದ್ದಲಿ ಪೂಜೆ ನೆರವೇರಿಸಿದರು. ಇಲ್ಲಿನ ಎಕ್ಸೆಲ್ ಪ್ಲಾಂಟ್ ಮುಖ್ಯರಸ್ತೆಯ ಡಾಂಬರೀಕರಣಕ್ಕೆ ಇಲ್ಲಿನ ತಪೋವನ ಅಪಾರ್ಟ್‌ಮೆಂಟ್ ಎದುರು ಶಾಸಕರು ಚಾಲನೆ ನೀಡಿದರು.



ಅಂತೆಯೇ ಜೆಪಿ ನಗರದ 26ನೇ ಮುಖ್ಯರಸ್ತೆಯ ಡಾಂಬರೀಕರಣಕ್ಕೆ ಅಕ್ಕಮಹಾದೇವಿ ಉದ್ಯಾನವನ ಬಳಿ, ಜೆಪಿ ನಗರದ 30ನೇ ಮೇನ್ ಹಾಗೂ ಓಂಕಾರ್ ಬಡಾವಣೆ ಸುತ್ತಮುತ್ತಲ ರಸ್ತೆಗಳ ಡಾಂಬರೀಕರಣಕ್ಕೆ ಇಲ್ಲಿನ ಓಂಕಾರ್ ಬಡಾವಣೆ ಸಮೀಪ, ಜೆಪಿ ನಗರದ 29ನೇ ಮೇನ್ ಮತ್ತು ಅಡ್ಡ ರಸ್ತೆಗಳ ಡಾಂಬರೀಕರಣಕ್ಕೆ ಇಲ್ಲಿನ ಉದ್ಯಾನವನ ಎದುರು, ಜೆಪಿ ನಗರದ ಸಿ ಜೋನ್ ಭಾಗದಲ್ಲಿರುವ ರಸ್ತೆ ಡಾಂಬರೀಕರಣಕ್ಕೆ ಇಲ್ಲಿನ 3ನೇ ಕ್ರಾಸ್ ಸಮೀಪ, ಜೆಪಿ ನಗರದ 20ನೇ ಮೇನ್ ಮುಖ್ಯರಸ್ತೆ ಡಾಂಬರೀಕರಣಕ್ಕೆ ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಎದುರು ಗುದ್ದಲಿ ಪೂಜೆ ನೆರವೇರಿಸಿದರು.

ಅದೇ ರೀತಿ ಜೆಪಿ ನಗರದ 4ರಿಂದ 6ನೇ ಅಡ್ಡರಸ್ತೆಗಳ ಡಾಂಬರೀಕರಣಕ್ಕೆ ಇಲ್ಲಿನ ಸಾಯಿಬಾಬಾ ದೇವಸ್ಥಾನ ಸಮೀಪ ಹಾಗೂ ಜೆಪಿ ನಗರದ ಹಳೇ ಹೊಸೂರು ಭಾಗದ ಮುಖ್ಯರಸ್ತೆ ಡಾಂಬರೀಕರಣಕ್ಕೆ ಇಲ್ಲಿನ ಹಳೇ ಹೊಸೂರು ಮುಂಭಾಗ ಶಾಸಕರು ಚಾಲನೆ ನೀಡಿದರು.

ಈ ವೇಳೆ ಶಾಸಕ ರಾಮದಾಸ್ ಮಾತನಾಡಿ, ಕೆಆರ್ ಕ್ಷೇತ್ರದಲ್ಲಿರುವ ಒಟ್ಟು 472 ಕಿ.ಮೀ. ರಸ್ತೆಯಲ್ಲಿ ಈಗಾಗಲೇ 200 ಕಿ.ಮೀ. ರಸ್ತೆ ಅಭಿವೃದ್ಧಿಪಡಿಸಲಾಗಿದೆ. ಉಳಿದ ಎಲ್ಲಾ ರಸ್ತೆಗಳ ಅಭಿವೃದ್ಧಿಗಾಗಿ ಸರ್ಕಾರ, ನಗರಪಾಲಿಕೆ, ಮುಡಾದ ವಿವಿಧ ಅನುದಾನಗಳಡಿ ಅಭಿವೃದ್ಧಿ ಕಾಮಗಾರಿ ಪ್ರಾರಂಭಿಸಲಾಗುತ್ತಿದೆ. ಈ ಎಲ್ಲಾ ರಸ್ತೆಗಳ ಅಭಿವೃದ್ಧಿ ಕಾಮಗಾರಿ ಇದೇ ಡಿಸೆಂಬರ್ ಒಳಗೆ ಬಹುತೇಕ ಪೂರ್ಣಗೊಳ್ಳಲಿದೆ ಎಂದರು.

ಇದಲ್ಲದೆ, ನನ್ನ ಕ್ಷೇತ್ರದಲ್ಲಿ ಸುಸಜ್ಜಿತವಾದ ರಸ್ತೆಗಳು, ಕುಡಿಯುವ ನೀರು ಸೇರಿದಂತೆ ಎಲ್ಲಾ ಮೂಲಸೌಕರ್ಯಗಳನ್ನು ಒದಗಿಸುವುದು ನನ್ನ ಕರ್ತವ್ಯ. ಈ ನಿಟ್ಟಿನಲ್ಲಿ ನಾನು ಬದ್ಧತೆಯಿಂದ ಮುಂದುವರೆಯುತ್ತೇನೆ ಎಂದರು. ಪಾಲಿಕೆ ಸದಸ್ಯರಾದ ಶಾಂತಮ್ಮ ವಡಿವೇಲು, ಶೋಭಾ ಸುನೀಲ್, ಶಾರದಮ್ಮ ಈಶ್ವರ್, ಮುಖಂಡರಾದ ವಡಿವೇಲು, ಈಶ್ವರ್, ದೇವರಾಜೇಗೌಡ, ಕೇಬಲ್ ನಾಗೇಂದ್ರ, ಓಂ ಶ್ರೀನಿವಾಸ, ಮುರುಳಿಧರ್, ಶಿವಪ್ರಸಾದ್, ಮಹದೇವ್, ರಾಘವೇಂದ್ರ, ಅಕ್ಷಯ್, ಯೋಗೇಂದ್ರ, ನಾಗರತ್ನ, ರೇಣುಕಾ, ಶ್ರೀವಾಣಿ, ಯೋಗೇಶ್ವರಿ, ನರೇಶ್, ರಮೇಶ್, ಡಿಪೋ ಮಹದೇವಣ್ಣ, ಭಾಗ್ಯ, ರುದ್ರೇಶ್, ಸೌಮ್ಯ, ಬಾಬುರಾವ್ ಶಿಂಧೆ, ರಾಜಣ್ಣ, ಕೇಬಲ್ ಉಮೇಶ್, ಭ್ರಮರಂಭಾ, ಲೋಕೇಶ್, ಮುಡಾ ಅಧೀಕ್ಷಕ ಅಭಿಯಂತರ ಚನ್ನಕೇಶವ, ಸಹಾಯಕ ಕಾರ್ಯಪಾಲಕ ಅಭಿಯಂತರ ಶ್ರೀನಿವಾಸ್, ಸಹಾಯಕ ಅಭಿಯಂತರರಾದ ಲೋಕೇಶ್, ಪ್ರಸಾದ್ ಮತ್ತಿತರರು ಹಾಜರಿದ್ದರು.


# ಮೈಸೂರಿನ ಆಯ್ದ ಪ್ರವಾಸಿ ತಾಣಗಳಿಗೆ ಒಂದೇ ಟಿಕೆಟ್‌ನಲ್ಲಿ ಪ್ರವೇಶಾವಕಾಶ


**ಮೊದಲು ನವರಾತ್ರಿಯಲ್ಲಿ ಪ್ರಯೋಗ, ಯಶಸ್ವಿಯಾದರೆ ವರ್ಷ ಪೂರ್ತಿ ಅನುಷ್ಠಾನ, ಸೆ.17ರಂದು ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್‌ರಿಂದ ಅಧಿಕೃತ ಘೋಷಣೆ**















ಮೈಸೂರು, ಸೆ. 14(ಆರ್‌ಕೆ)–ಒಂದೇ ಪ್ರವೇಶ ಟಿಕೆಟ್ ಖರೀದಿಸಿ ಆಯ್ದ ಹಲವು ಪ್ರವಾಸಿ ತಾಣ ವೀಕ್ಷಿಸಲು ಅವಕಾಶ ಕಲ್ಪಿಸಲು ಜಿಲ್ಲಾಡಳಿತ ಮುಂದಾಗಿದೆ.

ಮೈಸೂರಿನ ಪ್ರವಾಸಿ ತಾಣಗಳನ್ನು ವೀಕ್ಷಿಸಲು ಸಾಲುಗಟ್ಟಿ ನಿಂತು ಪ್ರವಾಸಿಗರು ಹೈರಾಣಾಗುವುದು, ಸಮಯ ವ್ಯಯ ಮತ್ತು ಇನ್ನಿತರೆ ತೊಂದರೆ ತಪ್ಪಿಸಿ ಅನುಕೂಲಕರ ವಾತಾವರಣ ಕಲ್ಪಿಸುವ ಸಲುವಾಗಿ ಮೈಸೂರಿನ ಡಿಸಿ ಕಚೇರಿ ಸಭಾಂಗಣದಲ್ಲಿ ಸಂಬಂಧಿಸಿದ ಇಲಾಖೆ ಅಧಿಕಾರಿಗಳು, ಸಂಘ–ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿದರು. ಏಕಗವಾಕ್ಷಿ ಟಿಕೆಟ್ ಸಂಬಂಧ ಅಭಿಪ್ರಾಯ, ಸಲಹೆ ಸಂಗ್ರಹಿಸಿದ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಅರಮನೆ, ಮೃಗಾಲಯ, ಕಾರಂಜಿ ಕೆರೆ, ಚಾಮುಂಡಿಬೆಟ್ಟ, ಕೆಆರ್‌ಎಸ್, ದಸರಾ ವಸ್ತುಪ್ರದರ್ಶನ, ಫಲಪುಷ್ಪ ಪ್ರದರ್ಶನಗಳಿಗೆ ಮೊದಲ ಹಂತದಲ್ಲಿ ಸೆ.26ರಿಂದ 9 ದಿನ ದಸರಾ ಮಹೋತ್ಸವ ಸಂದರ್ಭ ಪ್ರಾಯೋಗಿಕವಾಗಿ ಒಂದೇ ಟಿಕೆಟ್ ಮೂಲಕ ಪ್ರವೇಶಾವಕಾಶ ಕಲ್ಪಿಸಿ, ಅದು ಯಶಸ್ವಿಯಾದಲ್ಲಿ ವರ್ಷ ಪೂರ್ತಿ ಖಾಯಂ ಆಗಿ ಈ ಯೋಜನೆಯನ್ನು ಜಾರಿಗೊಳಿಸಬಹುದು ಎಂಬ ತೀರ್ಮಾನ ಕೈಗೊಳ್ಳಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸೆ.17ರಂದು ಒಂದೇ ಟಿಕೆಟ್ ವ್ಯವಸ್ಥೆ ಮೂಲಕ ಪ್ರವೇಶ ಪ್ರಕಟಿಸಲಿದ್ದು, ಯಾವ ಯಾವ ಪ್ರವಾಸಿ ತಾಣಗಳಲ್ಲಿ ಪ್ರವೇಶ, ಶುಲ್ಕ ಎಷ್ಟು, ಎಷ್ಟು ದಿನಗಳವರೆಗೆ ಚಾಲ್ತಿ ಎಂಬುದರ ಮಾಹಿತಿ ನೀಡಲಿದ್ದಾರೆ. ಟಿಕೆಟ್ ಹಿಂಭಾಗ ಯಾವ ಯಾವ ಸ್ಥಳ, ಸಮಯ, ದರ ಇತ್ಯಾದಿ ಮಾಹಿತಿ ಮುದ್ರಣವಾಗಲಿದ್ದು, ಬಸ್ ನಿಲ್ದಾಣ, ರೈಲ್ವೇ ಸ್ಟೇಷನ್, ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಹೋಟೆಲ್‌ಗಳಲ್ಲಿ ಏಕಗವಾಕ್ಷಿ ಎಂಟ್ರಿ ಟಿಕೆಟ್ ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಬೇಕೆಂದು ಸಭೆಯಲ್ಲಿ ಸಲಹೆ ಕೇಳಿಬಂದವು. ಪ್ರವಾಸಿ ತಾಣಗಳಿಗನುಗುಣವಾಗಿ ಎರಡು ಬಗೆಯ ಟಿಕೆಟ್‌ಗಳನ್ನೂ ಮುದ್ರಿಸಿ ಮಾರಾಟ ಮಾಡಲು ಜಿಲ್ಲಾಡಳಿತ ಮುಂದಾಗಿದೆ. ಟಿಕೆಟ್ ಮಾರಾಟವಾಗುತ್ತಿದ್ದಂತೆಯೇ ಆಯಾ ಇಲಾಖೆಗಳ ಬ್ಯಾಂಕ್ ಖಾತೆಗಳಿಗೆ ನಿಗದಿತ ಹಣ ನೆಫ್ಟ್ ಮೂಲಕ ಜಮಾ ಆಗಲಿದೆ. ಸಿಂಗಲ್ ಎಂಟ್ರಿ ಟಿಕೆಟ್ ವ್ಯವಸ್ಥೆಗಾಗಿ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲು ಏಜೆನ್ಸಿಯನ್ನೂ ನಿಗದಿ ಮಾಡಲಾಗಿದೆ. ಇದರಿಂದ ಹೊರಗಡೆಯಿಂದ ಬರುವ ಪ್ರವಾಸಿಗರಿಗೆ ಅನುಕೂಲವಾಗಲಿದ್ದು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮವು ಈ ಯೋಜನೆಯನ್ನು ನಿರ್ವಹಣೆ ಮಾಡಲಿದೆ.



ಡಾ.ಬಗಾದಿ ಗೌತಮ್

ಸಿಂಗಲ್ ಎಂಟ್ರಿ ಟಿಕೆಟ್ ಸಿಸ್ಟಂ, ಪ್ರಯೋಜನಗಳು, ಕಾರ್ಯನಿರ್ವಹಣೆ ವಿಧಾನದ ಬಗ್ಗೆ ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್.ಮಂಜುನಾಥಸ್ವಾಮಿ ಸಭೆಗೆ ಮಾಹಿತಿ ನೀಡಿದರು. ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಸಿ.ಎ.ಜಯಕುಮಾರ್ ಈ ಕುರಿತು ‘ಮೈಸೂರು ಮಿತ್ರ’ನಿಗೆ ಪ್ರತಿಕ್ರಿಯೆ ನೀಡಿದ್ದು, ಏಕಗವಾಕ್ಷಿ ಟಿಕೆಟ್ ಪದ್ಧತಿ ಉತ್ತಮ ವ್ಯವಸ್ಥೆಯಾಗಿದ್ದು, ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದರು.

ಕಳೆದ ನಾಲ್ಕು ವರ್ಷಗಳ ಹಿಂದೆಯೇ ಈ ಪದ್ಧತಿ ಜಾರಿಗೊಳಿಸುವಂತೆ ಸಲಹೆ ನೀಡಲಾಗಿತ್ತು. ಹೋಟೆಲ್‌ಗಳಿಗೆ ಬರುವ ಪ್ರವಾಸಿಗರಿಗೆ ಅಲ್ಲೇ ಟಿಕೆಟ್ ನೀಡುವುದರಿಂದ ಪ್ರವಾಸಿಗರಿಗೆ ಅನುಕೂಲ ಕಲ್ಪಿಸಿದಂತಾಗುತ್ತದೆ ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅಭಿಪ್ರಾಯಪಟ್ಟಿದ್ದಾರೆ.

ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಪ್ರವಾಸೋದ್ಯಮ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಎಂ.ಕುಲಕರ್ಣಿ, ಮೈಸೂರು ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಕಾರ್ಯದರ್ಶಿ ಶಿವಾಜಿರಾವ್, ಪ್ರವಾಸಿ ಗೈಡ್ಸ್ ಅಸೋಸಿಯೇಷನ್ ಅಧ್ಯಕ್ಷ ಎಸ್.ಜೆ. ಅಶೋಕ, ರೈಲ್ವೇ, ಕೆಎಸ್‌ಆರ್‌ಟಿಸಿ, ತೋಟಗಾರಿಕೆ, ಮುಜರಾಯಿ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ಸರ್ಕಾರದಲ್ಲಿ ಭ್ರಷ್ಟಾಚಾರ ಕಂಡುಬಂದರೆ ಡಯಲ್ ಮಾಡಿ: ಕಾಂಗ್ರೆಸ್‌ನಿಂದ ಸಹಾಯವಾಣಿ ಆರಂಭ

ಬೆಂಗಳೂರು, ಸೆ.14– ಸರ್ಕಾರದಲ್ಲಿ ನ್ಯೂನತೆ, ಭ್ರಷ್ಟಾಚಾರ ಕಂಡುಬಂದರೆ ಮಾಹಿತಿ ನೀಡಬಹುದು ಎಂದು ಕಾಂಗ್ರೆಸ್ ಹೇಳಿದೆ. ಈ ಬಗ್ಗೆ ಕಾಂಗ್ರೆಸ್ ಭ್ರಷ್ಟಾಚಾರ ಸಹಾಯವಾಣಿ ಮತ್ತು ವೆಬ್‌ಸೈಟ್ ಅನ್ನು ಆರಂಭಿಸಿದೆ. ಸರ್ಕಾರದ ಇಲಾಖೆಗಳಲ್ಲಿ, ಸಚಿವರು, ಶಾಸಕರು ಭ್ರಷ್ಟಾಚಾರದಲ್ಲಿ ತೊಡಗಿರುವ ಬಗ್ಗೆ ಮಾಹಿತಿ ನೀಡಿದವರ ಹೆಸರನ್ನು ಗೌಪ್ಯವಾಗಿಡಲಾಗುವುದು ಎಂದು ಭರವಸೆ ನೀಡಿದೆ.

ನೀವು ಭ್ರಷ್ಟಾಚಾರದ ಸುಳಿಗೆ ಸಿಲುಕಿದರೆ 8447704040ಗೆ ಕರೆ ಮಾಡಿ ಇಲ್ಲವೇ www.40 percentsarkara.comಗೆ ಸಂದೇಶ ಕಳುಹಿಸಿ ಎಂದು ಕಾಂಗ್ರೆಸ್ ನಡೆಸಿದ ಜಂಟಿ ಸುದ್ದಿಗೋಷ್ಠಿಯಲ್ಲಿ ನಾಯಕರಾದ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಬಿ.ಕೆ.ಹರಿಪ್ರಸಾದ್ ಹೇಳಿದ್ದಾರೆ. ಸರ್ಕಾರದಲ್ಲಿನ ಭ್ರಷ್ಟಾಚಾರ ರಾಜ್ಯಕ್ಕೆ ಕಳಂಕವನ್ನುಂಟು ಮಾಡುತ್ತಿದ್ದು, ಅದರಲ್ಲೂ ಶೇಕಡಾ 40 ಕಮಿಷನ್ ಧಕ್ಕೆಯನ್ನುಂಟು ಮಾಡಿದೆ ಎಂದರು.

ಪಿಡಬ್ಲ್ಯೂಡಿ ಗುತ್ತಿಗೆದಾರರಿಂದ, ಮಠಮಾನ್ಯಗಳಿಗೆ ನೀಡುವ ಅನುದಾನ, ಉಪಕರಣಗಳ ಖರೀದಿ ಮೊದಲಾದವುಗಳಿಂದ ಸರ್ಕಾರಕ್ಕೆ, ಜನಪ್ರತಿನಿಧಿಗಳಿಗೆ ಕಮಿಷನ್ ಹೋಗುತ್ತದೆ. ಸಾರ್ವಜನಿಕರು ಸಾಕಷ್ಟು ತೊಂದರೆಗೆ ಸಿಲುಕಿದ್ದಾರೆ. ನಾವು ಸಾರ್ವಜನಿಕರಿಗೆ ಸಹಾಯವಾಣಿ ನೀಡುತ್ತಿದ್ದೇವೆ, ಅವರ ಪರವಾಗಿ ದೂರು ನೀಡುತ್ತೇವೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು. "ನಾವು ಭ್ರಷ್ಟಾಚಾರದ ಸಮಸ್ಯೆಯನ್ನು ಜನರ ಬಳಿಗೆ ಕೊಂಡೊಯ್ಯಬೇಕು. ನಾವೆಲ್ಲರೂ ಜನರಿಗೆ ಜವಾಬ್ದಾರರಾಗಿರಬೇಕು... ಭ್ರಷ್ಟಾಚಾರಕ್ಕೆ ಮೆನು ಕಾರ್ಡ್ ಇದೆ, ವಿವಿಧ ಭ್ರಷ್ಟಾಚಾರಗಳಿಗೆ ನಿಗದಿತ ದರಗಳಿವೆ ಎಂದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 7ರಲ್ಲಿ

## ಮಕ್ಕಳು ಕಳ್ಳರ ವದಂತಿ ಬಗ್ಗೆ ಯಾರೂ ಕಿವಿಗೊಡಬೇಡಿ

ಮೈಸೂರು,ಸೆ.14– ಮಕ್ಕಳ ಕಳ್ಳರು ಬಂದಿದ್ದಾರೆ ಎನ್ನುವುದು ವದಂತಿಯಷ್ಟೇ. ಅನುಮಾನಾಸ್ಪದ ವ್ಯಕ್ತಿಗಳನ್ನು ಕಂಡರೆ ಪೊಲೀಸರಿಗೆ ಮಾಹಿತಿ ನೀಡಿ, ಅವರ ಮೇಲೆ ಏಕಾಏಕಿ ಹಲ್ಲೆ ನಡೆಸಬೇಡಿ ಎಂದು ಎಸ್ಪಿ ಆರ್.ಚೇತನ್ ಮತ್ತೆ ಮನವಿ ಮಾಡಿದ್ದಾರೆ. 'ಯುವ ಸಂಭ್ರಮ' ಸಂಬಂಧಿತ ಸುದ್ದಿಗೋಷ್ಠಿಯಲ್ಲಿ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿ, ಹುಲ್ಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಕುರಿತುಂಡಿ ಗ್ರಾಮದವರು ಮಕ್ಕಳ ಕಳ್ಳರೆಂದು ಅನುಮಾನಿಸಿ, ಇಬ್ಬರು ಅಪರಿಚಿತರನ್ನು ಹಿಡಿದು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕೂಡಲೇ ನಮ್ಮ ಸಿಬ್ಬಂದಿ ಸ್ಥಳಕ್ಕೆ ತೆರಳಿ ಅವರಿಬ್ಬರನ್ನು ಕರೆತಂದು ವಿಚಾರಣೆ ನಡೆಸಿದಾಗ ಅವರು ಕಳ್ಳರಲ್ಲ, ಊರೂರು ತಿರುಗಿ ಚಿಂದಿ ಆಯುವ ಕೆಲಸ ಮಾಡುವವರು ಎನ್ನುವುದು ಸ್ಪಷ್ಟವಾಯಿತು. ಒಬ್ಬ ಮಂಡ್ಯ ಜಿಲ್ಲೆ ಮತ್ತೊರ್ವ ಕೋಲಾರ ಜಿಲ್ಲೆಯವನೆಂದು ತಿಳಿದುಬಂದಿದೆ ಎಂದು ಸ್ಪಷ್ಟನೆ ನೀಡಿದರು. ಮಕ್ಕಳ ಕಳ್ಳರು ಬಂದಿದ್ದಾರೆ ಎಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುವ ವದಂತಿಗಳನ್ನು ನಂಬಬೇಡಿ. ಹಾಗೆಂದ ಮಾತ್ರಕ್ಕೆ ಅನುಮಾನಾಸ್ಪದ ವ್ಯಕ್ತಿಗಳ ಬಗ್ಗೆ ನಿರ್ಲಕ್ಷ್ಯ ವಹಿಸುವುದೂ ಸರಿಯಲ್ಲ. ಅಪರಿಚಿತರು ಅನುಮಾನಾಸ್ಪದವಾಗಿ ಕಂಡು ಬಂದರೆ ಕೂಡಲೇ '112' ಕರೆ ಮಾಡಿ, ಇಲ್ಲವೇ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಿ. ಸಿಕ್ಕವರ ಮೇಲೆ ಏಕಾಏಕಿ ಹಲ್ಲೆ ನಡೆಸಬೇಡಿ. ಹೀಗೆ ಹಲ್ಲೆ ನಡೆಸಿದವರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಮಕ್ಕಳ ಅಪಹರಣ ಪ್ರಕರಣಗಳು ಜಿಲ್ಲೆಯಲ್ಲೆಲ್ಲೂ ವರದಿಯಾಗಿಲ್ಲ. ಇಂತಹ ವದಂತಿಗಳ ಬಗ್ಗೆ ಜಾಗರೂಕರಾಗಿರಿ ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಮೂರನೇ ಪುಟದಿಂದ

## 89.50 ಕೋಟಿ ಅನುದಾನ

ಅಂದಾಜು ಪಟ್ಟಿಯನ್ನು ತಯಾರಿಸಿ, ಎಎಂಸಿಯಿಂದ ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆಗೆ ರವಾನಿಸಲಾಗಿತ್ತು. 2021ರ ಸೆಪ್ಟೆಂಬರ್ 6ರಂದು ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮುಖ್ಯ ಇಂಜಿನಿಯರ್‌ಗಳು ಈ ಕುರಿತು ಪತ್ರ ಬರೆದಿದ್ದರು.

2021ರ ಆಗಸ್ಟ್ 9ರಂದು ಮೈಸೂರಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕರು ಮತ್ತು ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಎಲ್. ನಾಗೇಂದ್ರ ಅವರ ಕೋರಿಕೆಯ ಮೇರೆಗೆ ಸದರಿ ಕಟ್ಟಡಗಳ ನವೀಕರಣಕ್ಕೆ ಕ್ರಮ ವಹಿಸುವಂತೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಮುಖ್ಯಮಂತ್ರಿಗಳು ಸೂಚಿಸಿದ್ದರು. ಅಲ್ಲದೇ, 2022ರ ಫೆಬ್ರವರಿ 7ರಂದು ಮುಖ್ಯಮಂತ್ರಿಗಳು ದೆಹಲಿಗೆ ಭೇಟಿ ನೀಡಿದ್ದಾಗ ಅವರನ್ನು ಅಲ್ಲಿ ಸಂಪರ್ಕಿಸಿದ್ದ ಸಂಸದ ಪ್ರತಾಪ್ ಸಿಂಹ, ಈ ಆಸ್ಪತ್ರೆಗಳ ಕಟ್ಟಡಗಳ ನವೀಕರಣಕ್ಕಾಗಿ ಮನವಿ ಸಲ್ಲಿಸಿದ್ದರು. ಆ ವೇಳೆ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ 85.98 ಕೋಟಿ ರೂ. ಅನುದಾನವನ್ನು ಮೈಸೂರಿನ ಕೆಆರ್, ಚೆಲುವಾಂಬ ಮತ್ತು ಪಿಕೆಟಿಬಿ ಆಸ್ಪತ್ರೆ ಕಟ್ಟಡಗಳ ನವೀಕರಣಕ್ಕೆ ಮೀಸಲಿಡುವುದಾಗಿ ಭರವಸೆ ನೀಡಿದ್ದರು. ಅದರಂತೆ ಕಳೆದ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಈ ಸಂಬಂಧ ಘೋಷಣೆಯನ್ನೂ ಮಾಡಿದ್ದರು. ಇಂದು ನಡೆದ ಸಂಪುಟ ಸಭೆಯು ಕೆಆರ್, ಚೆಲುವಾಂಬ ಮತ್ತು ಪಿಕೆಟಿಬಿ ಆಸ್ಪತ್ರೆಗಳ ಒಟ್ಟು 14 ಕಟ್ಟಡಗಳ ನವೀಕರಣಕ್ಕೆ 89.50 ಕೋಟಿ ರೂ. ಬಿಡುಗಡೆ ಮಾಡಲು ಅನುಮೋದನೆ ನೀಡಿದೆ.

## ಕುರುಬ ಜನಾಂಗ ಪರಿಶಿಷ್ಟ ಪಂಗಡಕ್ಕೆ

ಈ ಜನಾಂಗದವರು ಕಳೆದ 30 ವರ್ಷಗಳಿಂದ ಹೋರಾಡುತ್ತಿದ್ದರು ಎಂದು ಹೇಳಿದ್ದಾರೆ. ಚಾ.ನಗರ, ಕೊಡಗು, ಮೈಸೂರು ಜಿಲ್ಲೆಗಳ ಅಂಚಿನಲ್ಲಿ ಬೆಟ್ಟ ಕುರುಬ ಜನಾಂಗ ನೆಲೆಸಿತ್ತು. ಕಾರಣಾಂತರಗಳಿಂದ ಈ ಜನಾಂಗದವರನ್ನು ಒಕ್ಕಲೆಬ್ಬಿಸಲಾಗಿತ್ತು. ಪರಿಶಿಷ್ಟ ವರ್ಗಕ್ಕೆ ಸೇರ್ಪಡೆಗೊಳಿಸುವಂತೆ ಈ ಜನಾಂಗದವರು ಕಳೆದ 30 ವರ್ಷಗಳಿಂದ ಹೋರಾಡುತ್ತಿದ್ದರು.

**ಪ್ರಧಾನಿಗೆ ಬಿಎಸ್‌ವೈ ಅಭಿನಂದನೆ:** ಮಾಜಿ ಸಿಎಂ ಯಡಿಯೂರಪ್ಪ ಟ್ವೀಟ್ ಮಾಡಿ ಈ ಮಹತ್ವದ ನಿರ್ಧಾರವನ್ನು ತೆಗೆದುಕೊಂಡ ಪ್ರಧಾನಿ ನರೇಂದ್ರ ಮೋದಿ ಸರ್ಕಾರವನ್ನು ಅಭಿನಂದಿಸಿದ್ದಾರೆ. ತಮ್ಮ ಟ್ವೀಟ್‌ನಲ್ಲಿ, ಇಂದು ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಸಂಪುಟ ಸಭೆಯಲ್ಲಿ ನಮ್ಮ ರಾಜ್ಯದ ಬೆಟ್ಟಕುರುಬ ಸೇರಿದಂತೆ ಒಟ್ಟು 12 ಜಾತಿಗಳನ್ನು ಪರಿಶಿಷ್ಟ ಪಂಗಡಗಳ ವರ್ಗಕ್ಕೆ ಸೇರ್ಪಡೆಗೊಳಿಸುವ ನಿರ್ಧಾರ ಕೈಗೊಳ್ಳಲಾಗಿರುವುದು ಸ್ವಾಗತಾರ್ಹ. ಆ ಮೂಲಕ ಸಮುದಾಯಗಳ ಬಹುದಿನಗಳ ಬೇಡಿಕೆ ಈಡೇರಿಸಿದಂತಾಗಿದ್ದು ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.

## ಆಡಳಿತದಲ್ಲಿ ಕನ್ನಡ ಕಡ್ಡಾಯ

ನಿರ್ಲಕ್ಷಿಸುವ ಪ್ರಶ್ನೆಯೇ ಇಲ್ಲ ಎಂದು ಹೇಳಿದ ಅವರು,ಎಲ್ಲ ಪ್ರಾದೇಶಿಕ ಭಾಷೆಗಳೂ ರಾಷ್ಟ್ರ ಭಾಷೆಗಳೇ ಎಂದರಲ್ಲದೆ, ಆ ಭಾಷೆಯನ್ನು ಉಳಿಸುವುದು, ಬೆಳೆಸುವುದು ತಮ್ಮ ಬದ್ಧತೆ ಎಂದರು. ಭಾರತ ಒಂದು ಒಕ್ಕೂಟ ರಾಷ್ಟ್ರ, ವಿವಿಧ ಭಾಷೆ, ಸಂಸ್ಕೃತಿಗಳನ್ನು ಹೊಂದಿರುವ ರಾಷ್ಟ್ರ, ಇಲ್ಲಿ ಯಾವುದೇ ಒಂದು ಭಾಷೆಯನ್ನು ಹೇರಲು ಸಾಧ್ಯವಿಲ್ಲ ಎಂದರು. ಕನ್ನಡವನ್ನು ಉಳಿಸುವ, ಬೆಳೆಸುವ ವಿಷಯದಲ್ಲಿ ಯಾವ ರಾಜಿಯೂ ಇಲ್ಲ. ನೆಲ, ಜಲ, ಭಾಷೆಯ ವಿಷಯದಲ್ಲಿ ರಾಜಕೀಯ ಮಾಡುವ ಪ್ರಶ್ನೆಯೂ ಇಲ್ಲ ಎಂದು ಸ್ಪಷ್ಟಪಡಿಸಿದರು. ಅಂತಹ ಯಾವುದೇ ಪ್ರಯತ್ನ ನಡೆದರೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಲು ತಾವು ಸಜ್ಜಾಗಿರುವುದಾಗಿ ಅವರು ಸ್ಪಷ್ಟಪಡಿಸಿದರು. ಇದೇ ರೀತಿ ಹೊಸ ಕಾನೂನು ನೀತಿಯಡಿ ರಾಜ್ಯದಲ್ಲಿ ಮೊದಲ ಬಾರಿ ಕನ್ನಡದಲ್ಲೇ ಎಂಜಿನಿಯರಿಂಗ್ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿದ್ದು ಹಿಂದೆಂದೂ ಕೂಡಾ ಈ ಕೆಲಸ ನಡೆದಿರಲಿಲ್ಲ ಎಂದರು. ಎಂಜಿನಿಯರಿಂಗ್ ಕೋರ್ಸ್‌ಗಳ ಪಠ್ಯಕ್ರಮವನ್ನು ಕನ್ನಡದಲ್ಲೇ ರೂಪಿಸಲಾಗಿದ್ದು, ಇದರಡಿ ವಿದ್ಯಾರ್ಥಿಗಳು ಮೊದಲ ಸೆಮಿಸ್ಟರ್ ತನಕ ಓದಿದ್ದಾರೆ ಎಂದರು.

## ಡಾಲಿ ಧನಂಜಯ ತಾರಾ ಮೆರಗು

ನಡೆಯುತ್ತಿದ್ದು ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ಸೆ.16ರ ಸಂಜೆ 5.30ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದು, ಸ್ಥಳೀಯ ಶಾಸಕರು, ಸಂಸದರು ಇನ್ನಿತರ ಜನಪ್ರತಿನಿಧಿಗಳು ಭಾಗಿಯಾಗಲಿದ್ದಾರೆ. ಆ ವೇಳೆ ಡಾಲಿ ಧನಂಜಯ ವಿಶೇಷ ಆಹ್ವಾನಿತರಾಗಿ ಪಾಲ್ಗೊಂಡು 'ಯುವ ಸಂಭ್ರಮ'ದ ಕಿಚ್ಚು ಹೆಚ್ಚಿಸಲಿದ್ದಾರೆ. ಸೆ.24ರವರೆಗೆ ಒಟ್ಟು 9 ದಿನ ಜರುಗಲಿರುವ 'ಯುವ ಸಂಭ್ರಮ'ದಲ್ಲಿ ಸಾವಿರಾರು ವಿದ್ಯಾರ್ಥಿಗಳ ಪ್ರತಿಭೆ ಅನಾವರಣವಾಗಲಿದೆ.

**253 ಕಾಲೇಜು ತಂಡ:** ದಸರಾ ಹಿನ್ನೆಲೆಯಲ್ಲಿ ಕಾಲೇಜು ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸುವುದರ ಜೊತೆಗೆ ನವರಾತ್ರಿ ಹೊಸ್ತಿಲಲ್ಲಿ ಸಂಭ್ರಮ ಮೂಡಿಸುವ ಉದ್ದೇಶದಿಂದ 'ಯುವ ಸಂಭ್ರಮ' ಆಯೋಜಿಸಿಕೊಂಡು ಬರಲಾಗಿದೆ. ಅದರಂತೆ ಈ ಬಾರಿಯೂ ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ಮಂಡ್ಯ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ಸುಮಾರು 253 ಕಾಲೇಜು ತಂಡಗಳು 'ಯುವ ಸಂಭ್ರಮ'ದಲ್ಲಿ ತಮ್ಮ ಕಲಾ ಪ್ರದರ್ಶನ ನೀಡಲಿವೆ. ಮೈಸೂರು ವಿವಿ ಜೊತೆಗೆ ರಾಜ್ಯದ ಬೇರೆ ಬೇರೆ ವಿವಿಗಳಿಂದಲೂ ತಂಡಗಳು ಭಾಗವಹಿಸಲಿವೆ. ಜೊತೆಗೆ ವಿಶೇಷಚೇತನ ಮಕ್ಕಳ 10 ತಂಡಗಳು 'ಯುವ ಸಂಭ್ರಮ'ದಲ್ಲಿ ಕಲಾವರಣ ಮಾಡಲಿವೆ. ತಂಡವೊಂದರಲ್ಲಿ 30–40 ಜನರಂತೆ ಒಟ್ಟು 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿ–ವಿದ್ಯಾರ್ಥಿನಿಯರು ನೀಡಲಿದ್ದಾರೆ.

ಪ್ರತಿದಿನ ಸಂಜೆ 5.30ರಿಂದ ರಾತ್ರಿ 10 ಗಂಟೆವರೆಗೆ ಕಾರ್ಯಕ್ರಮ ನಡೆಯಲಿರುವ ಕಾರ್ಯಕ್ರಮ ವೀಕ್ಷಣೆಗೆ ಮುಕ್ತ ಅವಕಾಶವಿದ್ದು, ಎಲ್ಲರೂ ಪಾಲ್ಗೊಂಡು ಅದ್ಧೂರಿ 'ಯುವ ಸಂಭ್ರಮ'ವನ್ನು ಯಶಸ್ವಿಗೊಳಿಸಬೇಕು ಎಂದು ಯುವ ಸಂಭ್ರಮ ಹಾಗೂ ಯುವ ದಸರಾ ಉಪಸಮಿತಿ ವಿಶೇಷಾಧಿಕಾರಿಯಾದ ಜಿಲ್ಲಾ ಪೊಲೀಸ್ ಅಧೀಕ್ಷಕ(ಎಸ್ಪಿ) ಆರ್.ಚೇತನ್ ಬುಧವಾರ ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದರು.

**ವಿಭಿನ್ನ 9 ವಿಷಯವಸ್ತು:** 'ಯುವ ಸಂಭ್ರಮ'ದಲ್ಲಿ ಕಾರ್ಯಕ್ರಮ ನೀಡುವ ತಂಡಗಳಿಗೆ ವಿಭಿನ್ನ 9 ವಿಷಯವಸ್ತು ನೀಡಲಾಗಿದೆ. 'ಸ್ವಾತಂತ್ರ್ಯ ಅಮೃತಮಹೋತ್ಸವ', 'ಭಾರತ ಸ್ವಾತಂತ್ರ್ಯ ಚಳವಳಿಗೆ ಕರ್ನಾಟಕದ ಕೊಡುಗೆ', 'ಭಾರತ ಸ್ವಾತಂತ್ರ್ಯ ಚಳವಳಿ', 'ರಾಷ್ಟ್ರೀಯ ಭಾವೈಕ್ಯತೆ ಮತ್ತು ಪಾರಂಪರಿಕ ಆಸ್ತಿಗಳ ಸಂರಕ್ಷಣೆ', 'ಮಹಿಳಾ ಸಬಲೀಕರಣ ಮತ್ತು ಸಮಾನತೆ', 'ಕನ್ನಡ ಮತ್ತು ಸಂಸ್ಕೃತಿ, ಜಾನಪದ ಕಲೆ', 'ಪರಿಸರ ಸಂರಕ್ಷಣೆ ಮತ್ತು ಮಾನವ ನಿರ್ಮಿತ ಆಪತ್ತುಗಳು', 'ಸ್ವಚ್ಛ ಭಾರತ–ಸ್ವಚ್ಛ ಕರ್ನಾಟಕ, ಆರೋಗ್ಯ ಮತ್ತು ನೈರ್ಮಲ್ಯ' ಹಾಗೂ 'ಮಾದರಿ ಮೈಸೂರು ನಿರ್ಮಾಣದಲ್ಲಿ ಮೈಸೂರು ಮಹಾರಾಜರುಗಳ ಕೊಡುಗೆ'. ಇದರಲ್ಲಿ ಯಾವುದಾದರೊಂದು ವಿಷಯ ವಸ್ತುವನ್ನು ಆಯ್ಕೆ ಮಾಡಿಕೊಂಡು ಆಕರ್ಷಕವಾಗಿ ಕಾರ್ಯಕ್ರಮ ರೂಪಿಸುವಂತೆ ಸೂಚನೆ ನೀಡಲಾಗಿದೆ. ವಿಶೇಷ ಮಕ್ಕಳಿಗೆ ತೊಂದರೆಯಾಗದಂತೆ ಕಾರ್ಯಕ್ರಮದಲ್ಲಿ ಸೂಕ್ತ ವೇಳೆ ನಿಗದಿಪಡಿಸಲಾಗುವುದು. ಸಾಧ್ಯವಾದರೆ ನಿತ್ಯವೂ ಸಿನಿಮಾ, ಕಿರುತೆರೆ, ರಿಯಾಲಿಟಿ ಶೋ ಕಲಾವಿದರನ್ನು ಆಹ್ವಾನಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

**'ಯುವ ದಸರಾ'ಗೆ 18 ತಂಡ:** 'ಯುವ ಸಂಭ್ರಮ'ದಲ್ಲಿ ಅತ್ಯಾಕರ್ಷಕ ಕಾರ್ಯಕ್ರಮ ನೀಡುವ ಆಯ್ದ 18 ತಂಡಗಳಿಗೆ 'ಯುವ ದಸರಾ' ವೇದಿಕೆಯಲ್ಲಿ ಅವಕಾಶ ನೀಡಲಾಗುವುದು. ಪ್ರತಿನಿತ್ಯ ಮೊದಲ ಅವಧಿಯಲ್ಲಿ ಕಾಲೇಜು ವಿದ್ಯಾರ್ಥಿಗಳ ನೃತ್ಯ ರೂಪಕದ ಬಳಿಕ ಅಂದಿನ ವಿಶೇಷ ಕಲಾವಿದರ ಕಾರ್ಯಕ್ರಮ ನಡೆಯಲಿದೆ. ಇನ್ನೂ ಕಲಾವಿದರು ಹಾಗೂ ಕಾರ್ಯಕ್ರಮ ಪಟ್ಟಿ ಸಿದ್ಧವಾಗಬೇಕಿದ್ದು, ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ವಿವರಣೆ ನೀಡಲಿದ್ದಾರೆ ಎಂದು ಎಸ್ಪಿ ಚೇತನ್ ಹೇಳಿದರು. ಉಪಸಮಿತಿ ಕಾರ್ಯಾಧ್ಯಕ್ಷರಾದ ಮುಡಾ ಕಾರ್ಯದರ್ಶಿ ಎನ್.ಸಿ.ವೆಂಕಟರಾಜು, ಕಾರ್ಯದರ್ಶಿಗಳಾದ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಅಸದ್ ರೆಹಮಾನ್ ಷರೀಫ್ ಹಾಗೂ ಕಲಾವಿದ ನಿಂಗರಾಜು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

**ಯುವ ಸಮೂಹ ಕಾತುರ:** ಕಳೆದ ಎರಡು ವರ್ಷ ಕೊರೊನಾ ಪರಿಣಾಮ ಅರಮನೆ ವೇದಿಕೆ ಹೊರತುಪಡಿಸಿ ಮತ್ಯಾವ ಸ್ಥಳದಲ್ಲೂ ದಸರಾ ಸಾಂಸ್ಕೃತಿಕ ಕಾರ್ಯಕ್ರಮ ನಡೆದಿರಲಿಲ್ಲ. ಹಾಗಾಗಿ ಈ ಬಾರಿಯ 'ಯುವ ಸಂಭ್ರಮ'ವನ್ನು ಎದುರು ನೋಡುತ್ತಿದ್ದ ಯುವ ಸಮೂಹ ಕುಣಿದು ಕುಪ್ಪಳಿಸಿ ಸಂಭ್ರಮಿಸಲು ಸಜ್ಜಾಗಿದೆ. ಬಯಲು ರಂಗಮಂದಿರದಲ್ಲಿ ಕಿಕ್ಕಿರಿದು ಶಿಳ್ಳೆ, ಕೇಕೆ ಮೂಲಕ ಕಲಾ ಪ್ರದರ್ಶನ ನೀಡುವವರನ್ನು ಹುರಿದುಂಬಿಸಲು ಅಣಿಯಾಗಿದ್ದಾರೆ. ನಿರೀಕ್ಷೆ ಮೀರಿ ಜನ ಸೇರುವ ಸಾಧ್ಯತೆ ಇರುವುದರಿಂದ ವಾಹನ ನಿಲುಗಡೆ, ಜನ ಸಂಚಾರಕ್ಕೆ ಅಗತ್ಯ ವ್ಯವಸ್ಥೆ ಜೊತೆಗೆ ಹೆಚ್ಚಿನ ಪೊಲೀಸ್ ಬಂದೋಬಸ್ತ್‌ಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

### ಸಶಕ್ತ ಲೋಕಾಯುಕ್ತದಿಂದ ಪ್ರಥಮ ಹೈ ಪ್ರೊಫೈಲ್ ಪ್ರಕರಣದ ವಿಚಾರಣೆ

### ಯಡಿಯೂರಪ್ಪ ಕುಟುಂಬ, ಸಚಿವ ಸೋಮಶೇಖರ್ ವಂಚನೆ ಪ್ರಕರಣದ ವಿಚಾರಣೆಗೆ

# ಲೋಕಾಯುಕ್ತಕ್ಕೆ ವಿಶೇಷ ಕೋರ್ಟ್ ಆದೇಶ




ಬೆಂಗಳೂರು, ಸೆ.14–ಮತ್ತೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪಗೆ ಸಂಕಷ್ಟ ಎದುರಾಗಿದೆ. ಬಿಎಸ್‌ವೈ ಪುತ್ರ ಬಿ.ವೈ ವಿಜಯೇಂದ್ರ ಹಾಗೂ ಇತರರಿಗೆ ಮತ್ತೆ ಕಂಟಕ ಎದುರಾಗಿದೆ. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ನಡೆಸಿದ್ದಾರೆ ಎಂಬ ಭ್ರಷ್ಟಾಚಾರ ಆರೋಪ ಪ್ರಕರಣಕ್ಕೆ ಈಗ ನ್ಯಾಯಾಲಯ ಮರುಜೀವ ನೀಡಿದೆ.





**ಅಧಿಕಾರ ದುರ್ಬಳಕೆ ಆರೋಪ:** ಯಡಿಯೂರಪ್ಪ ಸಿಎಂ ಆಗಿದ್ದಾಗ ಅಧಿಕಾರ ದುರ್ಬಳಕೆ ಮಾಡಿಕೊಂಡು ಬಿಡಿಎ ಅರ್ಥಾತ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಸತಿ ಯೋಜನೆಗಳನ್ನು ಗುತ್ತಿಗೆ ನೀಡುವ ಸಲುವಾಗಿ ರಾಮಲಿಂಗಂ ಕನ್‌ಸ್ಟ್ರಕ್ಷನ್ ಕಂಪನಿಯಿಂದ ಕೋಟ್ಯಾಂತರ ರೂಪಾಯಿ ನಗದು ಪಡೆದಿದ್ದಾರೆ. ಜೊತೆಗೆ ಶೆಲ್ ಕಂಪನಿಗಳ ಮೂಲಕ ಲಂಚ ಪಡೆದಿದ್ದಾರೆ ಎಂದು ಆರ್‌ಟಿಐ ಕಾರ್ಯಕರ್ತ ಟಿ.ಜೆ ಅಬ್ರಹಾಂ ಅವರು ಖಾಸಗಿ ದೂರು ದಾಖಲಿಸಿದ್ದರು.


**ತನಿಖೆಗೆ ಆಗ್ರಹ, ವರದಿ ನೀಡಲು ಡೆಡ್‌ಲೈನ್:** ಈ ದೂರಿನ ಬಗ್ಗೆ ವಿಚಾರಣೆ ನಡೆಸಿರುವ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಬಿ.ಜಯಂತ್ ಕುಮಾರ್ ಅವರು ಯಡಿಯೂರಪ್ಪ ಮತ್ತು ಆರೋಪ ಹೊತ್ತ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಿ ಹಾಗೂ ನವೆಂಬರ್ 2ರ ಒಳಗೆ ವರದಿ ನೀಡುವಂತೆ ಲೋಕಾಯುಕ್ತ ಪೊಲೀಸರಿಗೆ ಕಟ್ಟುನಿಟ್ಟಿನ ಆದೇಶ ನೀಡಿದ್ದಾರೆ.

**ಹಳೆಯ ಭ್ರಷ್ಟಾಚಾರ ಕೇಸ್‌ಗೆ ಮರುಜೀವ:** ಇದರಿಂದ ಯಡಿಯೂರಪ್ಪ, ಬಿ.ವೈ.ವಿಜಯೇಂದ್ರ, ಸಂಜಯ್ ಶ್ರೀ, ಚಂದ್ರಕಾಂತ ರಾಮಲಿಂಗಂ, ಶಶಿಧರ ಮರಡಿ, ಸಚಿವ ಎಸ್.ಟಿ.ಸೋಮಶೇಖರ್, ಡಾ.ಜಿ.ಸಿ.ಪ್ರಕಾಶ್, ವಿರುಪಾಕ್ಷಪ್ಪ, ಕೆ.ರವಿ ಅವರ ವಿರುದ್ಧ ಎಫ್‌ಐಆರ್ ದಾಖಲಾಗಲಿದ್ದು, ಇವರಿಗೆಲ್ಲಾ ಸಂಕಷ್ಟ ಎದುರಾಗಲಿದೆ. ಈ ಮೂಲಕ ಹಳೆಯ ಭ್ರಷ್ಟಾಚಾರ ಕೇಸ್‌ಗೆ ಈಗ ಮರುಜೀವ ಬಂದಿದೆ. ಇದು ಯಡಿಯೂರಪ್ಪ ಮತ್ತು ಇತರರ ಕೊರಳಿಗೆ ಯಾವ ರೀತಿ ಸುತ್ತಿಕೊಳ್ಳುತ್ತದೆ ಎಂದು ಕಾದು ನೋಡಬೇಕಿದೆ.

**ದೂರಿನಲ್ಲಿರುವುದೇನು:** ಎಂ.ಎಸ್.ರಾಮಲಿಂಗಂ ಕನ್‌ಸ್ಟ್ರಕ್ಷನ್ ಕಂಪನಿ ಪ್ರೈವೇಟ್ ಲಿಮಿಟೆಡ್ ಪರವಾಗಿ ಬಿಡಿಎಯಿಂದ ವರ್ಕ್ ಆರ್ಡರ್ ನೀಡಲಾಗಿದೆ ಎಂದು ದೂರುದಾರರು ಆರೋಪಿಸಿದ್ದಾರೆ. ಯಡಿಯೂರಪ್ಪ ಪರವಾಗಿ ಐಎಎಸ್ ಅಧಿಕಾರಿ ಜೆ.ಸಿ. ಪ್ರಕಾಶ್ 12 ಕೋಟಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಪ್ರಕಾಶ್ ವಸೂಲಿ ಮಾಡಿ ಮಗನ ಮೂಲಕ ಯಡಿಯೂರಪ್ಪಗೆ ಪಾವತಿಸಿದ್ದಾರೆ ಎನ್ನಲಾಗಿದೆ. ಯಡಿಯೂರಪ್ಪ, ವಿಜಯೇಂದ್ರ, ಶಶಿಧರ್ ಮರಡಿ ಮತ್ತು ಸಂಜಯ್ ಶ್ರೀಗಳು ಶೆಲ್ ಕಂಪನಿಗಳನ್ನು ಬಳಸಿಕೊಂಡು ಅಕ್ರಮ ಹಣ ವರ್ಗಾವಣೆ ಮಾಡಿದ್ದಾರೆ ಎಂದು ಅರ್ಜಿದಾರರು ದೂರಿನಲ್ಲಿ ಆರೋಪಿಸಿದ್ದಾರೆ.

**ಏನಿದು ಪ್ರಕರಣ:** ಯಡಿಯೂರಪ್ಪ ಹಾಗೂ ಪುತ್ರ ಬಿ.ವೈ.ವಿಜಯೇಂದ್ರ, ಮೊಮ್ಮಗ ಶಶಿಧರ್ ಮರಡಿ, ಅಳಿಯ ಸಂಜಯ್‌ಶ್ರೀ, ಚಂದ್ರಕಾಂತ್ ರಾಮಲಿಂಗಂ, ಹಾಲಿ ಬಿಡಿಎ ಅಧ್ಯಕ್ಷ ಹಾಗೂ ಈ ಸಚಿವರಾಗಿರುವ ಎಸ್.ಟಿ. ಸೋಮಶೇಖರ್, ಐಎಎಸ್ ಅಧಿಕಾರಿ ಜಿ ಸಿ ಪ್ರಕಾಶ್, ಕೆ ರವಿ ಮತ್ತು ವಿರೂಪಾಕ್ಷಪ್ಪ ವಿರುದ್ಧ ಕೋರ್ಟ್‌ಗೆ ದೂರು ನೀಡಲಾಗಿತ್ತು. ಈ ಸಂಬಂಧದ ಅರ್ಜಿಯನ್ನು ಜುಲೈ 8, 2021ರಂದು ವಿಚಾರಣೆ ನಡೆಸಿದ್ದ ಸೆಷನ್ಸ್ ನ್ಯಾಯಾಲಯವು ದೂರು ವಜಾಗೊಳಿಸಿತ್ತು. ಕೆಳ ನ್ಯಾಯಾಲಯದ ತೀರ್ಪಿನ ವಿರುದ್ಧ ಅರ್ಜಿದಾರರು ಹೈಕೋರ್ಟ್ ಮೊರೆ ಹೋಗಿದ್ದರು. ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ವಿಚಾರಣೆ ನಡೆಸಿ ಆದೇಶವನ್ನು ಕಾಯ್ದಿರಿಸಿದ್ದರು. ಇಂದು ಈ ಬಗ್ಗೆ ತೀರ್ಪು ಪ್ರಕಟಿಸಿದ್ದಾರೆ.

## ನ್ಯಾಯಾಂಗದ ಮೇಲೆ ವಿಶ್ವಾಸ ಇದೆ



ಬೆಂಗಳೂರು, ಸೆ.14– ನನಗೆ ನ್ಯಾಯಾಂಗದ ಮೇಲೆ ವಿಶ್ವಾಸ ಇದೆ. ಇದರಲ್ಲಿ ಯಾವುದೇ ಸತ್ಯಾಂಶ ಇಲ್ಲ. ಇದರಿಂದ ನಾನು ಹೊರಬರುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

ವಿಧಾನಸೌಧದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಇದೆಲ್ಲವೂ ಸಾಮಾನ್ಯವಾಗಿ ಇರುವುದೇ. ಇದಕ್ಕೆ ನಾನು ತಲೆ ಕೆಡಿಸಿಕೊಳ್ಳೋದಕ್ಕೆ ಹೋಗಲ್ಲ. ಇದರಲ್ಲಿ ಸತ್ಯಾಂಶ ಏನೂ ಇಲ್ಲ ಎಂದರು. ನಿಮ್ಮ ವಿರುದ್ಧ ರಾಜಕೀಯ ಷಡ್ಯಂತ್ರ ಇದೆಯೇ ಎಂಬ ಪ್ರಶ್ನೆಗೆ ಖಂಡಿತಾ ಇದೆ ಎಂದರು.

ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಯಡಿಯೂರಪ್ಪ ಮತ್ತು ಅವರ ಕುಟುಂಬಸ್ಥರು ಅಧಿಕಾರ ದುರ್ಬಳಕೆ ಮಾಡಿಕೊಂಡು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ(ಬಿಡಿಎ) ವಸತಿ ಯೋಜನೆ ಗುತ್ತಿಗೆ ನೀಡುವ ಸಲುವಾಗಿ ರಾಮಲಿಂಗಂ ಕನ್‌ಸ್ಟ್ರಕ್ಷನ್ ಕಂಪನಿಯಿಂದ ಕೋಟ್ಯಾಂತರ ರೂಪಾಯಿ ನಗದು ಮತ್ತು ಶೆಲ್ ಕಂಪನಿಗಳ ಮೂಲಕ ಲಂಚ ಪಡೆದಿದ್ದಾರೆ ಎಂಬ ಆರೋಪವಿದೆ. ಈ ಸಂಬಂಧ ತನಿಖೆ ನಡೆಸಲು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಲೋಕಾಯುಕ್ತ ಪೊಲೀಸರಿಗೆ ಆದೇಶಿಸಿದೆ.


ಸಾಮಾಜಿಕ ಕಾರ್ಯಕರ್ತ ಟಿ.ಜೆ.ಅಬ್ರಹಾಂ ಅವರು 2021ರ ಜೂನ್‌ನಲ್ಲಿ ದಾಖಲಿಸಿದ್ದ ಖಾಸಗಿ ದೂರಿನ ಸಂಬಂಧ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರು ತನಿಖೆ ನಡೆಸಿ, ನವೆಂಬರ್ 2ರ ಅಂತ್ಯದ ವೇಳೆಗೆ ಅಂತಿಮ ವರದಿ ಸಲ್ಲಿಸಲು ಸೂಚಿಸಿದ್ದಾರೆ. ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆ, ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿ ತನಿಖೆ ನಡೆಸಬೇಕು ಎಂದು ನ್ಯಾಯಾಧೀಶರು ಸೂಚನೆ ನೀಡಿ ವಿಚಾರಣೆಯನ್ನು ನವೆಂಬರ್ 2ಕ್ಕೆ ಮುಂದೂಡಿದ್ದಾರೆ.

## ಲೋಕಾಯುಕ್ತಕ್ಕೆ ಬಲ ತುಂಬಲು ಸಂಪುಟ ಒಪ್ಪಿಗೆ; ಹೆಚ್ಚುವರಿ ರಿಜಿಸ್ಟ್ರಾರ್ ನೇಮಕ, ವೇತನ ಹೆಚ್ಚಳ

ಬೆಂಗಳೂರು,ಸೆ.14–ಕರ್ನಾಟಕ ಲೋಕಾಯುಕ್ತ ತಿದ್ದುಪಡಿ (2022) ಕಾಯ್ದೆಗೆ ಕರ್ನಾಟಕ ಸಚಿವ ಸಂಪುಟವು ಒಪ್ಪಿಗೆ ನೀಡಿದೆ. ಪ್ರಕರಣಗಳು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಲೋಕಾಯುಕ್ತಕ್ಕೆ ಹೆಚ್ಚುವರಿ (ಅಡಿಷನಲ್) ರಿಜಿಸ್ಟ್ರಾರ್ ನೇಮಕಕ್ಕೂ ಸಚಿವ ಸಂಪುಟ ನಿರ್ಧರಿಸಿದೆ. ಲೋಕಾಯುಕ್ತ ನ್ಯಾಯಮೂರ್ತಿಗಳ ವೇತನ ಹೆಚ್ಚಿಸಿ, ಹೈಕೋರ್ಟ್ ನ್ಯಾಯಮೂರ್ತಿಗಳ ವೇತನಕ್ಕೆ ಸರಿಸಮಾನವಾದ ವೇತನ ನೀಡಲು ಸಂಪುಟ ಒಪ್ಪಿಗೆ ಸೂಚಿಸಿದೆ. ಸರ್ಕಾರವು ಹೊಸದಾಗಿ ಜಾರಿಗೆ ತಂದಿದ್ದ ಭ್ರಷ್ಟಾಚಾರ ನಿಗ್ರಹ ದಳ ರಚನೆಯನ್ನು ರದ್ದುಪಡಿಸಿ, ಹಿಂದಿನಿಂದಲೂ ಅಸ್ತಿತ್ವದಲ್ಲಿದ್ದ ಲೋಕಾಯುಕ್ತ ಸಂಸ್ಥೆಗೆ ಬಲ ತುಂಬಲು ಸರ್ಕಾರ ನಿರ್ಧರಿಸಿದೆ. ಈ ಬೆಳವಣಿಗೆಗೆ ಹೈಕೋರ್ಟ್ ತೀರ್ಪು ಮುಖ್ಯ ಕಾರಣ. ಎಸಿಬಿ ರದ್ದುಪಡಿಸಿ, ಲೋಕಾಯುಕ್ತ ಬಲವರ್ಧನೆಗೆ ಆದೇಶ ಹೊರಬಿದ್ದ ಬೆನ್ನಲ್ಲೇ ಎಡಿಜಿಪಿ ಸೀಮಂತ್‌ಕುಮಾರ್ ಸಿಂಗ್ ಮತ್ತೊಂದು ಆದೇಶ ಹೊರಡಿಸಿ, ಸಂಬಂಧಿಸಿದ ಕಡತಗಳನ್ನು ಲೋಕಾಯುಕ್ತಕ್ಕೆ ವರ್ಗಾವಣೆ ಮಾಡಲು ಸೂಚಿಸಿದ್ದರು.

ಹೈಕೋರ್ಟ್ ಇತ್ತೀಚೆಗೆ ನೀಡಿದ್ದ ತೀರ್ಪಿನ ಪ್ರಮುಖ ಅಂಶಗಳನ್ನು ಕರ್ನಾಟಕ ಸರ್ಕಾರ ಪಾಲಿಸಿದೆ. ಅದರಂತೆ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರ ರದ್ದುಪಡಿಸಲಾಗಿದೆ. ಲೋಕಾಯುಕ್ತ ಪೊಲೀಸರಿಗೆ ಭ್ರಷ್ಟಾಚಾರ ನಿಗ್ರಹದ ಅಧಿಕಾರ ನೀಡಲಾಗಿದೆ. ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಪೊಲೀಸ್ ಠಾಣೆಗಳಿಗೆ ಇರುವ ಅಧಿಕಾರವನ್ನು ಕೊಡಲಾಗಿದೆ. ಭ್ರಷ್ಟಾಚಾರ ನಿಗ್ರಹ ದಳದಲ್ಲಿ ತನಿಖೆ ಬಾಕಿಯಿರುವ ಎಲ್ಲ ಪ್ರಕರಣಗಳು ಹಾಗೂ ಖಾಸಗಿ ದೂರುಗಳನ್ನು ಲೋಕಾಯುಕ್ತಕ್ಕೆ ವರ್ಗಾವಣೆ ಮಾಡಲು ಸೂಚಿಸಿದೆ.


## ನಾಳೆ ಹಿನಕಲ್ ಸೆಸ್ಕ್ ಕಚೇರಿ ಎದುರು ಪ್ರತಿಭಟನೆ



ಮೈಸೂರು,ಸೆ.14(ಆರ್‌ಕೆಬಿ)–ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸೆ.16ರ ಬೆಳಗ್ಗೆ 11 ಗಂಟೆಗೆ ಮೈಸೂರಿನ ಹಿನಕಲ್‌ನ ಸೆಸ್ಕ್ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಂಡಿರುವುದಾಗಿ ರಾಜ್ಯ ರೈತಸಂಘದ ಪದಾಧಿಕಾರಿ ಮನು ಸೋಮಯ್ಯ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದ ಎಲ್ಲ ಗ್ರಾಮಗಳ ಕರ ನಿರಾಕರಣೆ ವಿದ್ಯುತ್ ಬಾಕಿ ಮನ್ನಾ ಆಗಬೇಕು, ಕೃಷಿ ಪಂಪ್‌ಸೆಟ್‌ಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಕೆ ಕೈಬಿಡಬೇಕು, ಕಾಫಿ ಬೆಳೆಗಾರರಿಗೆ ರೈತ ಹೋರಾಟದ ಹಿನ್ನೆಲೆಯಲ್ಲಿ ಉಚಿತ ವಿದ್ಯುತ್ ಕೊಡಲು ಒಪ್ಪಿದ ಸರ್ಕಾರ ಈಗ ಮೀಟರ್ ಹಾಕುತ್ತಿರುವುದನ್ನು ಕೈಬಿಡಬೇಕು. ರೈತರ ಮತ್ತು ಕಾಫಿ ಬೆಳೆಗಾರರ ಕುಟುಂಬದ ಎಲ್ಲ ಸದಸ್ಯರಿಗೆ ಉಚಿತ ವಿದ್ಯುತ್ ನೀಡಬೇಕು, ಕನಿಷ್ಠ 12 ಗಂಟೆ ಹಗಲು ತ್ರೀಫೇಸ್ ವಿದ್ಯುತ್ ನೀಡಬೇಕು. ಕೃಷಿ ಲಾಭದಾಯಕವಾಗುವವರೆಗೂ ರೈತರು ಮತ್ತು ಕಾರ್ಮಿಕರಿಗೆ ಶುಲ್ಕ ರಹಿತ ವಿದ್ಯುತ್ ಸರಬರಾಜು ಮಾಡಬೇಕು ಇತ್ಯಾದಿ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಹೊಸಕೋಟೆ ಬಸವರಾಜು, ಶ್ರೀಕಾಂತರಾಜೇ ಅರಸ್, ಶಿರಮಳ್ಳಿ ಸಿದ್ದಯ್ಯ, ಮಂಡಕಳ್ಳಿ ಮಹೇಶ್, ಪಿ.ಮರಂಕಯ್ಯ ಉಪಸ್ಥಿತರಿದ್ದರು

## ಇಂದು ವಿದ್ಯುತ್ ವ್ಯತ್ಯಯ



ಮೈಸೂರು, ಸೆ.14–ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಸೆ.15ರ ಗುರುವಾರ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದ್ದು, ಈ ಹಿನ್ನೆಲೆಯಲ್ಲಿ ಮಾದವಗೆರೆ, ಮೇಗಳಾಪುರ, ಪುಟ್ಟೇಗೌಡನಹುಂಡಿ, ಚಟ್ಟನಹಳ್ಳಿ, ಚಟ್ಟನಹಳ್ಳಿ ಪಾಳ್ಯ, ಕೀಳನಪುರ, ದುದ್ದಗೆರೆ, ಲಕ್ಷ್ಮೀಪುರ, ಮಹಾದೇವಿ ಕಾಲೋನಿ, ಗುರುಕಾರಪುರ, ಕೊಪ್ಪಲೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ

## ಕರ್ನಾಟಕ ಭೂ ಕಬಳಿಕೆ ನಿಷೇಧ ತಿದ್ದುಪಡಿ ವಿಧೇಯಕ ಮಂಡನೆ

ಬೆಂಗಳೂರು,ಸೆ.14–ಕರ್ನಾಟಕ ಭೂ ಕಬಳಿಕೆ ನಿಷೇಧ ತಿದ್ದುಪಡಿ ವಿಧೇಯಕವನ್ನು ವಿಧಾನಸಭೆಯಲ್ಲಿ ಇಂದು ಮಂಡಿಸಲಾಯಿತು. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಈ ವಿಧೇಯಕ ಮಂಡಿಸಿದ್ದು, ಸದನ ಚರ್ಚೆಗೆ ಅಂಗೀಕರಿಸಿದೆ. ಭೂ ಕಬಳಿಕೆ ಕಾಯಿದೆ–2011ರ ಹಾಗೂ 22ರ ಅಧಿಸೂಚನೆಗೆ ತಿದ್ದುಪಡಿ ತರಲಾಗಿದ್ದು, ನಗರಪಾಲಿಕೆ ಪರಿಮಿತಿ ಒಳಗಿನ ಸರ್ಕಾರ, ವಕ್ಫ್ ಅಥವಾ ಹಿಂದು ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳು, ಸ್ಥಳೀಯ ಪ್ರಾಧಿಕಾರಗಳು, ಸರ್ಕಾರದ ಒಡೆತನದ, ನಿಯಂತ್ರಣ, ವ್ಯವಸ್ಥಾಪನೆಗೆ ಒಳಪಟ್ಟ ಭೂಮಿಯ ವಿವಾದಗಳು ತಕ್ಷಣದಿಂದ ಕೊನೆಗೊಳಿಸುವುದಕ್ಕಾಗಿ ಈ ವಿಧೇಯಕ ಜಾರಿಗೆ ತರಲಾಗುತ್ತಿದೆ. ಆದರೆ,ಬಿಬಿಎಂಪಿ ಹಾಗೂ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿರುವ ಸ್ವತ್ತುಗಳನ್ನು ಈ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಈ ವಿಧೇಯಕದ ಪರ್ಯಾಲೋಚನೆ ಮುಂದಿನ ವಾರ ಉಭಯ ಸದನಗಳಲ್ಲಿ ಪ್ರಾರಂಭವಾಗುವ ಸಾಧ್ಯತೆ ಇದೆ.





## ರೇಬೀಸ್ ಲಸಿಕಾ ಅಭಿಯಾನ

ಮೈಸೂರು, ಸೆ.14– ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ವತಿಯಿಂದ ಸೆ.28ರಂದು ವಿಶ್ವ ರೇಬೀಸ್ ದಿನದ ಅಂಗವಾಗಿ ಸೆ.15ರಿಂದ ಸೆ.30ರವರೆಗೆ ಜಿಲ್ಲೆಯ ಎಲ್ಲಾ ಪಶು ಚಿಕಿತ್ಸಾಲಯ ಹಾಗೂ ಪಶು ಆಸ್ಪತ್ರೆಗಳಲ್ಲಿ ನಾಯಿಗಳಿಗೆ (ಸಾಕುನಾಯಿ ಹಾಗೂ ಬೀದಿನಾಯಿ) ರೇಬೀಸ್ ಲಸಿಕಾ ಅಭಿಯಾನ ಹಮ್ಮಿಕೊಂಡಿದ್ದು, ಈ ಹಿನ್ನೆಲೆಯಲ್ಲಿ ರೇಬಿಸ್ ಲಸಿಕೆ ಉಚಿತವಾಗಿ ಹಾಕಲಾಗುತ್ತಿದೆ ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳಬೇಕೆಂದು ಪಶುಪಾಲನಾ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.




# ಅರಮನೆ ಅಂಗಳದಲ್ಲಿ ಕಂದನೊಂದಿಗೆ ಲಕ್ಷ್ಮಿಗೆ ಆರೈಕೆ

## ಆನೆ ಮರಿಗೆ ಮೂರು ಹೆಸರು ಸೂಚಿಸುವುದಾಗಿ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಭರವಸೆ

## ಮೈಸೂರು ನಗರದಲ್ಲಿ ದಸರಾ ದೀಪಾಲಂಕಾರಕ್ಕೆ ಸಿದ್ಧತೆ



ಮೈಸೂರು, ಸೆ.14(ಎಸ್‌ಪಿಎನ್)– ಮೈಸೂರು ದಸರಾ ಮಹೋತ್ಸವ–2022 ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಈ ಬಾರಿ ಮೈಸೂರಿನ ಪ್ರಮುಖ ರಸ್ತೆ ವೃತ್ತಗಳಲ್ಲಿ ದೀಪಾಲಂಕಾರಕ್ಕೆ ಸಿದ್ಧತೆ ನಡೆಯುತ್ತಿದೆ.

ದೇವರಾಜ ಅರಸು ರಸ್ತೆ, ಸಯ್ಯಾಜಿ ರಾವ್ ರಸ್ತೆ, ಜೆಎಲ್‌ಬಿ ರಸ್ತೆ, ಅರಮನೆ ಸುತ್ತ ಮುತ್ತಲಿನ ರಸ್ತೆಗಳು, ಕೃಷ್ಣರಾಜ ಬುಲೇವಾರ್ಡ್ ರಸ್ತೆ, ಅಶೋಕ ರಸ್ತೆ, ಮಹಾರಾಜ ಕಾಲೇಜು ಮುಂಭಾಗ, ಜಿಲ್ಲಾಧಿಕಾರಿ ಕಚೇರಿ ರಸ್ತೆ, ಇರ್ವಿನ್ ರಸ್ತೆ, ಚಾಮರಾಜ ಜೋಡಿರಸ್ತೆ, ನ್ಯೂ ಕಾಂತರಾಜ ಅರಸ್ ರಸ್ತೆ ಸೇರಿದಂತೆ ನಗರದ ಇತರೆ ಬಡಾವಣೆ ಸಮೀಪ ವಿದ್ಯುತ್ ದೀಪಗಳ ಸಿದ್ಧತೆ ನಡೆಯುತ್ತಿದೆ.

ಇದಲ್ಲದೆ ಕೆ.ಆರ್.ವೃತ್ತ, ಚಾಮರಾಜ ವೃತ್ತ, ಹಾರ್ಡಿಂಜ್ ವೃತ್ತ, ಗನ್ ಹೌಸ್ ಬಳಿ, ಅರಮನೆಯ ಸುತ್ತಮುತ್ತಲಿನ ರಸ್ತೆಗಳು, ಮೈಸೂರು ರೈಲ್ವೆ ನಿಲ್ದಾಣದ ಜಗಜೀವನ್ ರಾಂ ವೃತ್ತ, ರಾಮಸ್ವಾಮಿ ವೃತ್ತ, ಬಸವೇಶ್ವರ ವೃತ್ತ ಸೇರಿದಂತೆ ಪ್ರಮುಖ ವೃತ್ತಗಳಲ್ಲಿ ದೀಪಗಳಿಂದ ಅಲಂಕಾರ ಮಾಡಲಾಗುತ್ತಿದೆ. ಇದರಿಂದ ಹಲವೆಡೆ ಯುವಕ, ಯುವತಿಯರು ದೀಪಗಳನ್ನು ಸ್ಪರ್ಶಿಸಿ ಸೆಲ್ಫಿಗಾಗಿ ಹಾತೊರೆಯುತ್ತಿದ್ದಾರೆ. ದೀಪಾಲಂಕಾರ ಮಾಡಿರುವ ಮರ, ಗಿಡ, ವೃತ್ತಗಳ ಬಳಿ ಹಲವರು ಸೆಲ್ಫಿ ತೆಗೆದುಕೊಳ್ಳುತ್ತಿದ್ದರೆ, ಇನ್ನೊಂದಿಷ್ಟು ಮಂದಿ ಬಲ್ಬ್‌ಗಳತ್ತ ಮುಖ ಮಾಡಿ, ವೈರ್‌ಗಳನ್ನು ಎತ್ತಿ ಹಿಡಿದು ಫೋಟೋಗೆ ಪೋಸ್ ನೀಡಿ ಇವರೊಂದಿಗೆ ಮಕ್ಕಳನ್ನೂ ಅದೇ ಭಾವ, ಭಂಗಿಯಲ್ಲಿ ನಿಲ್ಲಿಸಿ ಕ್ಲಿಕ್ಕಿಸುತ್ತಿರುವುದು ಆತಂಕದ ವಿಚಾರ. ಇದರ ಬಗ್ಗೆ ಜಿಲ್ಲಾಡಳಿತ ಮುಂಜಾಗ್ರತ ಕ್ರಮವಹಿಸಬೇಕು ಎಂದು ಮಹಾರಾಜ ಕಾಲೇಜು ವಿದ್ಯಾರ್ಥಿ ಅಖಿಲೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗುತ್ತಿದ್ದಂತೆ ಮೈಸೂರು ವಿವಿಯಿಂದ ಕುಕ್ಕರಹಳ್ಳಿ ಕೆರೆಯಲ್ಲಿ ಹೂಕುಂಡ ಜೋಡಣೆ ಹಾಗೂ ದೀಪಾಲಂಕಾರ ಮಾಡಲಾಗುತ್ತಿದೆ.

> **“ ಈ ಬಾರಿ ದಸರಾ ಮಹೋತ್ಸವದ ದೀಪಾಲಂಕಾರಕ್ಕೆ ಎರಡು ಬಾರಿ ಟೆಂಡರ್ ಕರೆದಿದ್ದರೂ ರಾಜ್ಯ ಮತ್ತು ರಾಷ್ಟ್ರಮಟ್ಟದ ಗುತ್ತಿಗೆದಾರರು ಯಾರೊ ಬ್ಬರು ಟೆಂಡರ್‌ನಲ್ಲಿ ಭಾಗವಹಿಸಿರಲಿಲ್ಲ. ಕೊನೆಗೆ ಸ್ಥಳೀಯ ಗುತ್ತಿಗೆದಾರರಿಂದಲೇ 124 ಕಿ.ಮೀ ದೀಪಾಲಂಕಾರಕ್ಕೆ ಅನುಮತಿ ನೀಡಲಾಗಿದ್ದು, ಅವರೆಲ್ಲಾ ಮಂಗಳವಾರದಿಂದ ಕೆಲಸ ಆರಂಭಿಸಿದ್ದಾರೆ. ಇನ್ನು 3–4 ದಿನಗಳ ನಂತರ ದೀಪಾಲಂಕಾರ ಕುರಿತು ಸ್ಪಷ್ಟ ಚಿತ್ರಣ ಬರಲಿದೆ.**
> – ನಾಗೇಶ್, ಕಾರ್ಯದರ್ಶಿ, ದಸರಾ ದೀಪಾಲಂಕಾರ ಉಪಸಮಿತಿ

ಮೈಸೂರು, ಸೆ.14(ಎಂಟಿವೈ)– ದಸರಾದಲ್ಲಿ ಪಾಲ್ಗೊಳ್ಳಲು ಆಗಮಿಸಿ, ಅರಮನೆ ಆವರಣದಲ್ಲಿ ಕಳೆದ ರಾತ್ರಿ ಗಂಡು ಮರಿಗೆ ಲಕ್ಷ್ಮಿ ಹೆಣ್ಣಾನೆ ಜನ್ಮ ನೀಡಿರುವುದು ರಾಜವಂಶಸ್ಥರು ಮಾತ್ರವಲ್ಲದೇ, ಅರಣ್ಯ ಸಿಬ್ಬಂದಿ ಹಾಗೂ ದಸರಾ ಗಜಪಡೆಯ ಮಾವುತರು, ಕಾವಾಡಿಗಳಲ್ಲಿ ಸಂಭ್ರಮ ಮನೆ ಮಾಡಿದೆ.

ಅರಮನೆ ಆವರಣದಲ್ಲಿ ರಾಜಮನೆತನದವರ ಹಸುಗಳ ಕಟ್ಟಿ ಹಾಕುವ ಕೊಟ್ಟಿಗೆ ಆವರಣದಲ್ಲಿ ಲಕ್ಷ್ಮೀ ಹಾಗೂ ಅದರ ಮರಿಗೆ ಆಶ್ರಯ ನೀಡಲಾಗಿದೆ. ತಾಯಿ–ಮರಿಗೆ ಧೈರ್ಯ ತುಂಬುವ ಸಲುವಾಗಿ 63 ವರ್ಷದ ಹಿರಿಯ ಹೆಣ್ಣಾನೆಯನ್ನು ಕಟ್ಟಿಹಾಕಲಾಗಿದ್ದು, ಮರಿ ಜನನವಾಗಿ 12 ಗಂಟೆಯಲ್ಲೇ ಲವಲವಿಕೆಯಿಂದಿದೆ. ತಾನೇ ತಾಯಿಯ ಹಾಲು ಕುಡಿಯುತ್ತಿದೆ. ಲಕ್ಷ್ಮಿ ತಾಯ್ತನದ ಸಂಭ್ರಮದಲ್ಲಿದೆ.

**ರಾಜವಂಶಸ್ಥರ ಭೇಟಿ:** ಇಂದು ಬೆಳಗ್ಗೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಲಕ್ಷ್ಮೀ ಹಾಗೂ ಅದರ ಮರಿ ಇರುವ ಸ್ಥಳಕ್ಕೆ ಭೇಟಿ ನೀಡಿ, ಅರಣ್ಯ ಅಧಿಕಾರಿಗಳು, ಮಾವುತರು ಹಾಗೂ ಕಾವಾಡಿಗಳಿಂದ ಮಾಹಿತಿ ಪಡೆದರು. ನಂತರ ಲಕ್ಷ್ಮೀಗೆ ಕಬ್ಬು ನೀಡಿ ಪ್ರೀತಿ ತೋರಿಸಿದರು.

**ಮಹಾರಾಜ ಬಂದರು:** ಅರಮನೆಯಲ್ಲಿ ಲಕ್ಷ್ಮೀ ಗಂಡು ಮರಿಗೆ ಜನ್ಮ ನೀಡಿರುವ ವಿಷಯ ತಿಳಿದು ಅರಮನೆಯ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುವ ಸಿಬ್ಬಂದಿ ತಂಡೋಪತಂಡವಾಗಿ ಬಂದು ಮರಿಯನ್ನು ನೋಡಿ ಮಹಾರಾಜರೇ ಹುಟ್ಟಿ ಬಂದಿದ್ದಾರೆ ಎಂದು ಸಂಭ್ರಮಿಸಿದರು.

**ಹೆಸರು ಸೂಚಿಸಲು ಸಮ್ಮತಿ:** ಗಜಪಡೆಯ ಲಕ್ಷ್ಮಿ ಅರಮನೆ ಆವರಣದಲ್ಲೇ ಜನ್ಮ ನೀಡಿರುವ ಮರಿಗೆ ಯದುವಂಶದ ಅರಸರ ಹೆಸರನ್ನೊಳಗೊಂಡಂತೆ ಮೂರು ಹೆಸರು ಸೂಚಿಸುತ್ತೇನೆ. ಯಾವುದಾದರು ಒಂದನ್ನು ಆಯ್ಕೆ ಮಾಡಿಕೊಳ್ಳುವಂತೆ ಅರಣ್ಯಾಧಿಕಾರಿಗಳಿಗೆ ಪ್ರಮೋದಾದೇವಿ ಒಡೆಯರ್ ತಿಳಿಸಿದ್ದಾರೆ ಎಂದು ಹೇಳಲಾಗಿದೆ.



ಮರಿಯೊಂದಿಗೆ ವಿರಮಿಸುತ್ತಿರುವ ದಸರಾ ಗಜಪಡೆಯ ಲಕ್ಷ್ಮೀ. ಚಿತ್ರ: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್

**ಸಾಮಾಜಿಕ ಜಾಲತಾಣದಲ್ಲಿ ಟೀಕೆ:** ಗರ್ಭಿಣಿ ಆನೆಯನ್ನು ದಸರಾಗೆ ಕರೆತಂದಿರುವುದು ಅವೈಜ್ಞಾನಿಕ. ಅರಮನೆಯಿಂದ ಬನ್ನಿಮಂಟಪದವರೆಗೆ ತಾಲೀಮಿಗೆ ಕರೆದೊಯ್ದಿರುವುದು ಗರ್ಭಿಣಿ ಆನೆಗೆ ತೊಡಕಾಗಿದೆ ಎಂದು ಕೆಲವರು ಸಾಮಾಜಿಕ ಜಾಲತಾಣದಲ್ಲಿ ಟೀಕಿಸಿದ್ದಾರೆ.

## ರಂಗಾಯಣದ ದಸರಾ ರಂಗೋತ್ಸವದ ಮುನ್ನುಡಿಯಾಗಿ ಸೆ.19ರಿಂದ 24ರವರೆಗೆ ಭಾರತೀಯ ರಂಗ ಸಂಗೀತೋತ್ಸವ

# ಸೆ.25ರಿಂದಲೇ ನವರಾತ್ರಿ ರಂಗ ಉತ್ಸವದ ರಂಗು




ಮೈಸೂರು ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಭಾರತೀಯ ರಂಗ ಸಂಗೀತೋತ್ಸವದ ಪೋಸ್ಟರ್ ಅನ್ನು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಬಿಡುಗಡೆಗೊಳಿಸಿದರು. ರಂಗಾಯಣದ ಉಪನಿರ್ದೇಶಕಿ ನಿರ್ಮಲಾ ಮಠಪತಿ ಚಿತ್ರದಲ್ಲಿದ್ದಾರೆ.

ಮೈಸೂರು,ಸೆ.14(ಪಿಎಂ)– ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ಮೈಸೂರು ರಂಗಾಯಣದ ದಸರಾ ರಂಗೋತ್ಸವ–2022ರ ಮುನ್ನುಡಿಯಾಗಿ ಸೆ.19ರಿಂದ 24ರವರೆಗೆ ಭಾರತೀಯ ರಂಗ ಸಂಗೀತೋತ್ಸವ ನಡೆದರೆ, ಸೆ.25ರಿಂದಲೇ ದಸರಾ ರಂಗೋತ್ಸವದ ರಂಗು ಚಾಲನೆ ಪಡೆದುಕೊಳ್ಳಲಿದೆ.

ರಂಗಾಯಣದ ಸಂಸ್ಥಾಪಕ ನಿರ್ದೇಶಕ ಬಿ.ವಿ.ಕಾರಂತ ಅವರ ಜನ್ಮದಿನ 'ಸೆ.19' ಅನ್ನು 'ಭಾರತೀಯ ರಂಗಸಂಗೀತ ದಿನ' ಎಂದು 2020ರಲ್ಲಿ ಮೈಸೂರು ರಂಗಾಯಣ ಘೋಷಣೆ ಮಾಡಿತ್ತು. ಇದಕ್ಕೆ ಪೂರಕವಾಗಿ ಅದೇ ವರ್ಷದಿಂದ ರಂಗಾಯಣದ ಅಂಗಳದಲ್ಲಿ ರಂಗಸಂಗೀತೋತ್ಸವದ ಸಂಭ್ರಮ ಆರಂಭಗೊಂಡಿತು. ಇದೀಗ 3ನೇ ವರ್ಷದ ಭಾರತೀಯ ರಂಗ ಸಂಗೀತೋತ್ಸವಕ್ಕೆ ರಂಗಾಯಣ ಕಾಲಿಡುತ್ತಿದೆ.

ಮೈಸೂರು ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ರಂಗಾಯಣದ ಬೆಳವಣಿಗೆಗೆ ಮತ್ತು ಭಾರತೀಯ ರಂಗಭೂಮಿಗೆ ಬಿ.ವಿ.ಕಾರಂತರ ಕೊಡುಗೆ ಅಪಾರ. ಅವರದು ಭಾರತೀಯ ರಂಗಭೂಮಿಯ ದೊಡ್ಡ ಹೆಸರು. ಇವರನ್ನು ಹೊರತುಪಡಿಸಿ ಭಾರತೀಯ ರಂಗಭೂಮಿ ನೋಡಲಾಗದು. ಅವರು ಮೈಸೂರಿಗೆ ಕಾಲಿಡುತ್ತಿದ್ದಂತೆ ಇಲ್ಲಿನ ರಂಗಭೂಮಿಯ ಚಿತ್ರಣ ಉತ್ತುಂಗಕ್ಕೇರಿತು ಎಂದು ಸ್ಮರಿಸಿದರು.

ಸೆ.19ರಂದು ಸಂಜೆ 6ಕ್ಕೆ ರಂಗಾಯಣದ ಭೂಮಿಗೀತ ಸಭಾಂಗಣದಲ್ಲಿ ಮುಂಬೈನ ರಂಗ ಸಂಗೀತ ನಿರ್ದೇಶಕ ಅಮೋದ್ ಭಟ್ ರಂಗಸಂಗೀತೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಕಾರಂತರ ಒಡನಾಟದಲ್ಲಿ ರಂಗಸಂಗೀತದ ಪ್ರಾವೀಣ್ಯತೆ ಪಡೆದ ಹಿರಿಮೆಯನ್ನು ಇವರು ಹೊಂದಿದ್ದಾರೆ. ಮುಖ್ಯಅತಿಥಿಯಾಗಿ ರಂಗಭೂಮಿ ಹಾಗೂ ಚಲನಚಿತ್ರ ಕಲಾವಿದ ಅರುಣ್ ಸಾಗರ್ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

**ರಂಗಸಂಗೀತೋತ್ಸವ:** ಭೂಮಿಗೀತ ಸಭಾಂಗಣದಲ್ಲಿ ಪ್ರತಿದಿನ ಸಂಜೆ 6.30ಕ್ಕೆ ರಂಗಸಂಗೀತೋತ್ಸವ ನಡೆಯಲಿದ್ದು, ಸೆ.19ರಂದು ಅಮೋದ್ ಭಟ್ ಅವರೇ ರಂಗಸಂಗೀತ ಕಾರ್ಯಕ್ರಮ ನೀಡಲಿದ್ದಾರೆ. ಅಂತೆಯೇ ಸೆ.20ರಂದು ಸಂಗೀತ ನಿರ್ದೇಶಕ ಶ್ರೀನಿವಾಸಭಟ್ (ಚೀನಿ), ಸೆ.21ರಂದು ಸಂಗೀತ ನಿರ್ದೇಶಕ ವೈ.ಎಂ.ಪುಟ್ಟಣ್ಣಯ್ಯ, ಸೆ.22ರಂದು ಕೇರಳದ ಸಂಗೀತ ನಿರ್ದೇಶಕಿ ಕಲ್ಯಾಣಿ ಹಾಗೂ ಸೆ.23ರಂದು ಸಂಗೀತ ನಿರ್ದೇಶಕ ಆರ್.ಶ್ರೀನಾಥ್ ಕಾರ್ಯಕ್ರಮ ನೀಡಲಿದ್ದಾರೆ. ಸೆ.24ರಂದು ಸಂಜೆ 6.30ಕ್ಕೆ ಬಿ.ವಿ.ಕಾರಂತರು ನಿರ್ದೇಶಿಸಿರುವ 'ಮೂಕನ ಮಕ್ಕಳು' ನಾಟಕ ಪ್ರದರ್ಶನ ಇರಲಿದೆ ಎಂದು ಹೇಳಿದರು.

**ವಿಚಾರ ಸಂಕಿರಣ:** ಸೆ.23ರಂದು ಮಧ್ಯಾಹ್ನ 3.30ಕ್ಕೆ ಭೂಮಿಗೀತದಲ್ಲಿ 'ಕಾರಂತರ ನೆನಪಿನಲ್ಲಿ...' ಶೀರ್ಷಿಕೆಯಡಿ ವಿಚಾರ ಸಂಕಿರಣ ಆಯೋಜಿಸಲಾಗಿದೆ. 'ರಂಗಭೂಮಿಯ ಆಸ್ತಿ; ಬಿ.ವಿ.ಕಾರಂತ' ಕುರಿತು ರಂಗಚಿಂತಕ ನಾರಾಯಣ ರಾಯಚೂರ್, 'ಗಡಿಯಾಚೆ ಕಾರಂತ; ರಂಗಚಳುವಳಿ' ಕುರಿತು ರಂಗ ನಿರ್ದೇಶಕ ಕಾಸರಗೋಡು ಚಿನ್ನಾ ವಿಷಯ ಮಂಡಿಸಲಿದ್ದಾರೆ. ಎಲ್ಲಾ ಕಾರ್ಯಕ್ರಮಕ್ಕೂ ಉಚಿತ ಪ್ರವೇಶ ಇದೆ ಎಂದು ತಿಳಿಸಿದರು.

**ಆರಂಭದಲ್ಲಿ ಅಪಸ್ವರ:** ಬಿ.ವಿ.ಕಾರಂತರ ಕೊಡುಗೆ ಅಪಾರ. ಅವರನ್ನು ಸ್ಮರಿಸುವಂತಹ ಯಾವುದೂ ರಂಗಾಯಣದಲ್ಲಿ ಇಲ್ಲವಲ್ಲ ಎಂಬ ನೋವು ನನ್ನನ್ನು ಕಾಡುತ್ತಿತ್ತು. ನಾನು 2020ರಲ್ಲಿ ರಂಗಾಯಣದ ನಿರ್ದೇಶಕ ಸ್ಥಾನ ಅಲಂಕರಿಸಿದಾಗ ಇದು ತೀವ್ರವಾಗಿ ಕಾಡತೊಡಗಿತು. ಹಾಗಾಗಿ ಬಿ.ವಿ.ಕಾರಂತರ ಜನ್ಮದಿನದಲ್ಲಿ ಕಾರ್ಯಕ್ರಮ ಆಯೋಜಿಸುವ ನನ್ನ ಅಭಿಪ್ರಾಯ ಮಂಡಿಸಿದಾಗ, ಅಪಸ್ವರವೂ ಬಂತು ಎಂದರು.

ಕಾರಂತರು ತಮ್ಮ ಜನ್ಮದಿನ ಆಚರಿಸದಂತೆ ಹೇಳಿದ್ದಾರೆ ಎಂಬ ಅಪಸ್ವರ ಇದಾಗಿತ್ತು. ಏನೂ ಮಾಡಲಾಗದವರಿಗೆ ಇದೊಂದು ನೆಪವಷ್ಟೇ. ಇದಕ್ಕೆಲ್ಲಾ ಮಾನ್ಯತೆ ನೀಡದೇ ಮುಂದುವರೆದು ಅಂದು ಭಾರತೀಯ ರಂಗಸಂಗೀತೋತ್ಸವಕ್ಕೆ ಚಾಲನೆ ನೀಡಲಾಯಿತು. ಅಲ್ಲದೆ, 'ಸೆ.19' ಅನ್ನು 'ಭಾರತೀಯ ರಂಗಸಂಗೀತ ದಿನ' ಎಂದು ಘೋಷಣೆ ಮಾಡಲಾಯಿತು. ಈ ಘೋಷಣೆಯನ್ನು ಎನ್‌ಎಸ್‌ಡಿ ಸೇರಿದಂತೆ ಇಡೀ ಭಾರತದ ರಂಗಭೂಮಿಗೆ ಪಸರಿಸಿದೆವು ಎಂದು ತಿಳಿಸಿದರು.

ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ರಂಗಾಯಣದಂತಹ ರಂಗಕೇಂದ್ರಗಳನ್ನು ತಮ್ಮ ಶಿಷ್ಯರ ಮೂಲಕ ಸ್ಥಾಪಿಸಬೇಕೆಂಬ ಕನಸನ್ನು ಕಾರಂತರು ಹೊಂದಿದ್ದರು. ಆದರೆ ಅವರ ಕನಸು ನನಸಾಗಲಿಲ್ಲ. ಬಿ.ವಿ.ಕಾರಂತರು ತಯಾರು ಮಾಡಿದವರು ಅವರ ಕನಸ್ಸಿಗೆ ಪೂರಕ ನಡೆದುಕೊಳ್ಳಲಿಲ್ಲ. ಕಾರಂತರ ಪರಿಶ್ರಮ ಮತ್ತು ಕೊಡುಗೆಯನ್ನು ಸಮಾಜಕ್ಕೆ ತಿಳಿಸುವಲ್ಲಿ ವಿಫಲತೆ ಇದೆ. ಇದನ್ನು ನೀಗಿಸುವ ನಿಟ್ಟಿನಲ್ಲಿ ನಾವು ಹೆಜ್ಜೆ ಹಾಕುತ್ತಿದ್ದೇವೆ ಎಂದು ಹೇಳಿದರು. ಇಸಂನತ್ತ ವಾಲಿಕೊಂಡವರ ನಡುವೆ ಕಾರಂತರು ಇಸಂ ಇರಬಾರದು ಎಂದು ಪ್ರತಿಪಾದಿಸಿದರು. ಬುದ್ಧಿಜೀವಿ ಎಂದು ಕರೆಯಬೇಕಿದ್ದ ಕಾರಂತರನ್ನು ಆಗೆಂದು ಕರೆಯಲೇ ಇಲ್ಲ. ಅವರು ಅದಕ್ಕಿಂತ ಮೀರಿದವರು. ಅವರೊಬ್ಬ ಶ್ರೇಷ್ಠ ವ್ಯಕ್ತಿ ಎಂದು ಸ್ಮರಿಸಿದರು. ರಂಗಾಯಣದ ಉಪನಿರ್ದೇಶಕಿ ನಿರ್ಮಲಾ ಮಠಪತಿ ಗೋಷ್ಠಿಯಲ್ಲಿದ್ದರು.

## ಅ.4ರವರೆಗೆ 'ನಾಲ್ವಡಿ ನೆನಪಿನಲ್ಲಿ' ನಡೆಯುವ ದಸರಾ ರಂಗೋತ್ಸವದಲ್ಲಿ ಹತ್ತು ನಾಟಕಗಳ ಪ್ರದರ್ಶನ



ಡಾ.ನ.ರತ್ನ

ಮೈಸೂರು,ಸೆ.14(ಪಿಎಂ)–ಮೈಸೂರು ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ನೆನಪಿನಲ್ಲಿ ಈ ಬಾರಿಯ ರಂಗಾಯಣದ ದಸರಾ ರಂಗೋತ್ಸವ ನಡೆಯಲಿದ್ದು, ಸೆ.25ರಿಂದ ಅ.4ರವರೆಗೆ ನಡೆಯುವ ಈ ರಂಗೋತ್ಸವದಲ್ಲಿ 10 ನಾಟಕಗಳು ಪ್ರದರ್ಶನಗೊಳ್ಳುತ್ತಿವೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಸರಾ ಉದ್ಘಾಟನೆಗೆ ಭಾರತದ ರಾಷ್ಟ್ರಪತಿಯವರೇ ಬರುವ ಹಿನ್ನೆಲೆಯಲ್ಲಿ ಎಲ್ಲರ ಉತ್ಸಾಹ ಇಮ್ಮಡಿಸಿದೆ. ಅಂತೆಯೇ ರಂಗಾಯಣ ಕೂಡ ದಸರಾ ಉದ್ಘಾಟನೆಯ ಮುನ್ನದಿನವಾದ ಸೆ.25ರಂದು ದಸರಾ ರಂಗೋತ್ಸವಕ್ಕೆ ಚಾಲನೆ ಕೊಡಲು ಸಿದ್ಧವಾಗಿದೆ. ರಾಷ್ಟ್ರಪತಿಗಳ ಆಗಮನದ ಹಿನ್ನೆಲೆಯಲ್ಲಿ ಬಹುತೇಕ ಎಲ್ಲರೂ ಕಾರ್ಯದೊತ್ತಡದಲ್ಲಿ ಇರುತ್ತಾರೆಂಬ ಕಾರಣಕ್ಕೆ ಉದ್ಘಾಟನಾ ಸಮಾರಂಭ ಆಯೋಜಿಸಿಲ್ಲ ಎಂದು ಹೇಳಿದರು.

ನಾಟಕಗಳು ಪ್ರತಿದಿನ ಸಂಜೆ 6.30ಕ್ಕೆ ಭೂಮಿಗೀತದಲ್ಲಿ ಪ್ರದರ್ಶನಗೊಳ್ಳಲಿದ್ದು, ಪ್ರವೇಶ ಉಚಿತವಿದೆ. ಸೆ.25ರಂದು ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಕಥೆ 'ಕೃಷ್ಣೇಗೌಡನ ಆನೆ' ನಾಟಕ ಪ್ರದರ್ಶನವನ್ನು ಮೈಸೂರು ರಂಗಾಯಣ ರೆಪರ್ಟರಿ ನೀಡಲಿದೆ. ಅಂತೆಯೇ ಸೆ.26ರಂದು ಮೈಸೂರು ರಂಗಾಯಣದ ಭಾರತೀಯ ರಂಗವಿದ್ಯಾಲಯದಿಂದ 'ಸಮರಕಥಾ', ಸೆ.27 ರಂದು ಮೈಸೂರು ಅಂತಾಮ ರಂಗತಂಡದಿಂದ 'ಪೊಲೀಸರಿದ್ದಾರೆ ಎಚ್ಚರಿಕೆ', ಸೆ.28ರಂದು ಕೈವಲ್ಯ ಕಲಾ ಕೇಂದ್ರದಿಂದ 'ಮಾಧವಿ', ಸೆ.29ರಂದು ಮಂಗಳೂರಿನ ರಂಗಸಂಗಾತಿ ಸಾಂಸ್ಕೃತಿಕ ಪ್ರತಿಷ್ಠಾನದಿಂದ 'ದಟ್ಸ್ ಆಲ್ ಯುವರ್ ಆನರ್', ಸೆ.30ರಂದು ಬೆಂಗಳೂರು ಎನ್‌ಎಸ್‌ಡಿಯಿಂದ 'ಈ ಕೆಳಗಿನವರು' ನಾಟಕಗಳು ಪ್ರದರ್ಶನಗೊಳ್ಳಲಿವೆ ಎಂದು ವಿವರಿಸಿದರು.

ಅಂತೆಯೇ ಅ.1ರಂದು ಬೆಂಗಳೂರಿನ ಸ್ನೇಹ ರಂಗದಿಂದ 'ಮಾರೀಚನ ಬಂಧುಗಳು', ಅ.2ರಂದು ಮೈಸೂರು ರಂಗಾಯಣ ರೆಪರ್ಟರಿಯಿಂದ 'ಹಲಗಲಿ ಸಮರ', ಅ.3ರಂದು ಉಡುಪಿಯ ರಂಗಭೂಮಿ ತಂಡದಿಂದ 'ವಿಶಾಂಕೇ', ಅ.4ರಂದು ಮಂಗಳೂರಿನ ಕಲಾಭಿ ಥಿಯೇಟರ್‌ನಿಂದ 'ಮಮತೆಯ ಸುಳಿ' ನಾಟಕಗಳ ಪ್ರದರ್ಶನ ಇರಲಿದೆ ಎಂದರು.

### ಹಿರಿಯ ರಂಗಕರ್ಮಿ ಡಾ.ನ.ರತ್ನರಿಗೆ ರಂಗಗೌರವ ಪುರಸ್ಕಾರ



ಮೈಸೂರು ರಂಗಾಯಣದಲ್ಲಿ ನಡೆದ ನಾಟಕವೊಂದರ ದೃಶ್ಯ (ಸಂಗ್ರಹ ಚಿತ್ರ).

**ಡಾ.ನ. ರತ್ನರಿಗೆ ರಂಗಗೌರವ:** ಅ.4ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಹಿರಿಯ ರಂಗಕರ್ಮಿ ಡಾ.ನ.ರತ್ನ ಅವರಿಗೆ ಈ ಬಾರಿಯ ದಸರಾ ರಂಗಗೌರವ ಪುರಸ್ಕಾರ ಪ್ರದಾನ ಮಾಡಲಾಗುವುದು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನೀಲ್‌ಕುಮಾರ್ ಭಾಗವಹಿಸಲಿದ್ದಾರೆ. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

**15 ಲಕ್ಷ ಅನುದಾನ ಕೋರಿಕೆ:** ನ.ರತ್ನ ಎಂತಲೇ ಪರಿಚಿತರಾಗಿರುವ ನಾಟಕಕಾರ ನಟೇಶ ರತ್ನ ಅವರು ಹುಟ್ಟಿದ್ದು ತಮಿಳುನಾಡಿನ ಚಿದಂಬರಂನಲ್ಲಿಯಾದರೂ, ವಿದ್ಯಾಭ್ಯಾಸ ನಡೆಸಿದ್ದು ಮಾತ್ರ ಮೈಸೂರಿನಲ್ಲಿ. ವೃತ್ತಿಯಲ್ಲಿ ವಾಕ್‌ಶ್ರವಣ ಚಿಕಿತ್ಸಾ ತಜ್ಞರಾಗಿದ್ದ ಇವರು ನಟರು, ನಾಟಕಕಾರರು ಆಗಿದ್ದಾರೆ ಎಂದರಲ್ಲದೆ, ದಸರಾ ರಂಗೋತ್ಸವಕ್ಕೆ 15 ಲಕ್ಷ ರೂ. ಅನುದಾನ ಕೋರಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

**ಅ.5ರಿಂದ ರಂಗತರಬೇತಿ ಶಿಬಿರ:** ಸುಬ್ಬಯ್ಯನಾಯ್ಡು ಹಾಗೂ ಪದ್ಮಶ್ರೀ ನಾಗರತ್ನಮ್ಮ ಹೆಸರಿನ ರಂಗಾಯಣದ ಅಲ್ಪಾವಧಿಯ ಅಭಿನಯ ರಂಗತರಬೇತಿ ಶಿಬಿರವು ಅ.5ರಿಂದ ಪ್ರಾರಂಭವಾಗಲಿದೆ.

18ರಿಂದ 40 ವರ್ಷ ವಯೋಮಿತಿಯೊಳಗಿನ ಆಸಕ್ತರಿಗೆ 45 ದಿನಗಳ ರಂಗಶಿಕ್ಷಣ ತರಬೇತಿ ನೀಡಲಾಗುವುದು. ತರಗತಿಗಳು ಪ್ರತಿದಿನ ಸಂಜೆ 5ರಿಂದ 8ರವರೆಗೆ ನಡೆಯಲಿವೆ. ಈ ಅವಧಿಯಲ್ಲಿ ನಾಟಕವನ್ನು ಸಿದ್ಧಪಡಿಸಿ ಪ್ರದರ್ಶಿಸಲಾಗುವುದು. ತರಬೇತಿಯ ನಂತರ ಅಧಿಕೃತ ಪ್ರಮಾಣ ಪತ್ರ ನೀಡಲಾಗುವುದು ಎಂದು ಕಾರ್ಯಪ್ಪ ತಿಳಿಸಿದರು.

ಮೈಸೂರು ಮಿತ್ರ



# ನಗರೋತ್ಥಾನ ಯೋಜನೆ ಅನುದಾನದಲ್ಲಿ
# ತಿ.ನರಸೀಪುರ ಪಟ್ಟಣದ ರಸ್ತೆಗಳ ಅಭಿವೃದ್ಧಿ

ತಿ.ನರಸೀಪುರ, ಸೆ.14– ನಗರೋತ್ಥಾನ ಯೋಜನೆಯಡಿ 3 ನೇ ಹಂತದಲ್ಲಿ ಪುರಸಭೆಗೆ ಬಿಡುಗಡೆಯಾಗಿರುವ ಅನುದಾನದಲ್ಲಿ ರಸ್ತೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಪುರಸಭೆ ಅಧ್ಯಕ್ಷ ಎಸ್.ಮದನ್ ರಾಜ್ ತಿಳಿಸಿದರು.

ನಗರೋತ್ಥಾನ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನದಲ್ಲಿ ಪುರಸಭೆ ವ್ಯಾಪ್ತಿಗೊಳಪಡುವ 20, 22 ಮತ್ತು 23 ನೇ ವಾರ್ಡಿನಲ್ಲಿ ರಸ್ತೆಗಳ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ವಾರ್ಡಿನ ಸದಸ್ಯ ವಿ. ಮೋಹನ್ ಹಾಗೂ ಎಸ್.ಕೆ.ಕಿರಣ್ ಅವರೊಟ್ಟಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

2019ರಲ್ಲಿಯೇ ನಗರೋತ್ಥಾನ ಯೋಜನೆಯ ಮೂರನೇ ಹಂತದ ಅನುದಾನ ಬಿಡುಗಡೆಯಾಗಿದ್ದು, ಸರ್ವ ಸದಸ್ಯರ ಒಪ್ಪಿಗೆ ಮೇರೆಗೆ ಪಟ್ಟಣದ ಎಲ್ಲ ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ರಸ್ತೆ ಕಾಮಗಾರಿಗೆ ಸಿಂಗಲ್ ಟೆಂಡರ್ ಆಗಿರುವ ಹಿನ್ನೆಲೆಯಲ್ಲಿ ಕಾಮಗಾರಿ 15 ದಿನಕ್ಕೆ ಮುಂದೂಡಲ್ಪಟ್ಟಿದೆ.ಈ ಸಂಬಂಧ ಶಾಸಕರು ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ ಅತಿ ಶೀಘ್ರದಲ್ಲಿ ಟೆಂಡರ್ ಮಾಡುವಂತೆ ಮನವಿ ಮಾಡಲಾಗುತ್ತದೆ. ಇಲ್ಲದಿದ್ದಲ್ಲಿ ಒಂದು ತಿಂಗಳೊಳಗಾಗಿ ಪುರಸಭೆ ವ್ಯಾಪ್ತಿಯೊಳಗಿನ ಎಲ್ಲ ಪ್ರಮುಖ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತದೆ ಎಂದರು.



**ಹೆಚ್ಚಿನ ಅನುದಾನದೊಂದಿಗೆ ಸಮಗ್ರ ಅಭಿವೃದ್ಧಿ:** ಸದಸ್ಯ ವಿ.ಮೋಹನ್ ಮಾತನಾಡಿ, 20ನೇ ವಾರ್ಡಿನಲ್ಲಿ 9 ಲಕ್ಷ ರೂ.ಗಳ ವೆಚ್ಚದಲ್ಲಿ ಷಫೀ ಗ್ಯಾರೇಜ್‌ನಿಂದ ವಾಲ್ಮೀಕಿ ಶಾಲೆಯವರೆಗೆ 100 ಮೀಟರ್ ಕಾಂಕ್ರೀಟ್ ರಸ್ತೆ ಹಾಗೂ 23 ಲಕ್ಷ ರೂ.ಗಳ ವೆಚ್ಚದಲ್ಲಿ ಷಫಿ ಗ್ಯಾರೇಜ್ ನಿಂದ ಕಾರ್ಪೊರೇಷನ್ ಬ್ಯಾಂಕ್ ವರೆಗಿನ ಹದಗೆಟ್ಟ 195 ಮೀಟರ್ ರಸ್ತೆಯನ್ನು ಡಾಂಬರೀಕರಣಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

20 ನೇ ವಾರ್ಡಿನಲ್ಲಿ ರಸ್ತೆ, ಚರಂಡಿ, ಕುಡಿಯುವ ನೀರು ಸೇರಿದಂತೆ ವಿವಿಧ ಮೂಲಭೂತ ಸೌಕರ್ಯಗಳಿಗೆ ಮೊದಲ ಆದ್ಯತೆ ನೀಡಿ ವಾರ್ಡಿನ ಜನತೆಯ ಹಿತ ಕಾಪಾಡಲು ಬದ್ಧವಾಗಿದ್ದೇನೆ. ಪುರಸಭೆಯಲ್ಲಿ ಹೆಚ್ಚಿನ ಅನುದಾನ ತರುವ ಮೂಲಕ ವಾರ್ಡಿನ ಸಮಗ್ರ ಅಭಿವೃದ್ಧಿ ಮಾಡಲಾಗುತ್ತದೆ ಎಂದು ತಿಳಿಸಿದರು.

ಮುಖ್ಯಾಧಿಕಾರಿ ಬಸವರಾಜು, ಸದಸ್ಯ ಬಾದಾಮಿ ಮಂಜು, ಎನ್.ಲೋಕೇಶ್, ಅಕ್ಕಿ ನಂಜುಂಡಸ್ವಾಮಿ, ಕಾಂಗ್ರೆಸ್ ಮುಖಂಡ ಮಾದೇಶ್, ಶ್ರೀಕಂಠ, ರಾಚಯ್ಯ, ನಾಗರಾಜು, ಮಟನ್ ಸ್ವಾಮಿ, ಶಶಿ, ಗುತ್ತಿಗೆದಾರ ರಂಗಸ್ವಾಮಿ ರೆಡ್ಡಿ, ಸಿ.ಮಹದೇವ, ಚೌಹಳ್ಳಿ ಸಿದ್ದರಾಜು, ಆರ್.ಐ.ಪುಟ್ಟಸ್ವಾಮಿ ಮತ್ತಿತರರಿದ್ದರು.

**6 ನನ್ನ ವಾರ್ಡ್ ನನ್ನ ಜವಾಬ್ದಾರಿ**

'ನನ್ನ ವಾರ್ಡ್ ನನ್ನ ಜವಾಬ್ದಾರಿ'ಎಂಬ ವಿಭಿನ್ನ ಕಾರ್ಯಕ್ರಮದ ಮೂಲಕ ಕುಟುಂಬದ ಸಮೀಕ್ಷೆ ಮಾಡಿಸಲಾಗುತ್ತಿದೆ. ಸಮೀಕ್ಷೆಯಲ್ಲಿ ಮೂಲಭೂತ ಸೌಕರ್ಯದಿಂದ ವಂಚಿತರಾಗಿರುವವರನ್ನು ಗುರುತಿಸಿ ಜಾಬ್ ಕಾರ್ಡ್, ಆಧಾರ್ ಕಾರ್ಡ್, ರೇಷನ್ ಕಾರ್ಡ್, ರೈತರ ಕಾರ್ಡ್, ಆರೋಗ್ಯ ಕಾರ್ಡ್, ಹಿರಿಯ ನಾಗರೀಕರ ಗುರುತಿನ ಕಾರ್ಡ್, ಕಾರ್ಮಿಕರ ಕಾರ್ಡ್, ವಿಧವಾ ವೇತನ, ವೃದ್ಯಾಪ್ಯ ವೇತನ, ಜನ್ ಧನ್ ಖಾತೆ ಹಾಗೂ ಅಂಗವಿಕಲ ವೇತನ ಕೊಡಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು, ಈಗಾಗಲೇ ವಾರ್ಡಿನಲ್ಲಿ 24×7 ನಿರಂತರ ಕುಡಿಯುವ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡಲು ಕ್ರಮ ಕೈಗೊಳ್ಳುವ ಜೊತೆಗೆ, ಶುದ್ಧ ಕುಡಿಯುವ ನೀರಿನ ಘಟಕಗಳನ್ನು ತೆರೆದು ಜನತೆಗೆ ಅನುಕೂಲ ಕಲ್ಪಿಸಿಕೊಡಲಾಗಿದೆ.

–ಎಸ್.ಕೆ.ಕಿರಣ್, 23ನೇ ವಾರ್ಡ್ ಸದಸ್ಯ

## ಪಿರಿಯಾಪಟ್ಟಣ ತಾಲೂಕು 303 ಗ್ರಾಮಗಳಿಗೆ ಕುಡಿಯುವ ನೀರು ಯೋಜನೆ





ಪ್ರತಾಪ್‌ಸಿಂಹ ಕೆ. ಮಹದೇವ್

ಬೆಂಗಳೂರು, ಸೆ. 14– ಪಿರಿಯಾಪಟ್ಟಣ ತಾಲೂಕಿನ 303 ಗ್ರಾಮಗಳಿಗೆ ಕುಡಿಯುವ ನೀರು ಪೂರೈಸಲು 293 ಕೋಟಿ ರೂ. ವೆಚ್ಚದ ಕಾಮಗಾರಿಗೆ ಇಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಕೇಂದ್ರ ಸರ್ಕಾರದ ಜಲಜೀವನ್ ಮಿಷನ್ ಅಡಿ ಈ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

**ಸಂಸದರ ಧನ್ಯವಾದ:** ನರೇಂದ್ರ ಮೋದಿಜೀ ಎಂದರೆ ಹೆದ್ದಾರಿ, ರೈಲು, ಉಡಾನ್ ಯೋಜನೆ ಮಾತ್ರವಲ್ಲ, ಜಲ ಜೀವನ್ ಮಿಷನ್ ಅಡಿ ಹಳ್ಳಿ ಹಳ್ಳಿಗೂ, ಮನೆ ಮನೆಗೂ ನೀರು ಕೊಡಲು ಹೊರಟಿದ್ದಾರೆ. ಪಿರಿಯಾಪಟ್ಟಣ ತಾಲೂಕಿನ 303 ಗ್ರಾಮಗಳಿಗೆ ಕುಡಿಯುವ ನೀರು ಪೂರೈಸುವ 239 ಕೋಟಿ ವೆಚ್ಚದ ಕಾಮಗಾರಿಗೆ ಇಂದು ನಡೆದ ಸಂಪುಟ ಸಭೆಯಲ್ಲಿ ಜಲಜೀವನ್‌ನಡಿ ಅನುಮೋದನೆ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಮತ್ತು ನನ್ನ ಜೊತೆ ಶ್ರಮಿಸಿದ ಶಾಸಕರಾದ ಕೆ. ಮಹದೇವಣ್ಣ ಅವರಿಗೆ ಧನ್ಯವಾದಗಳನ್ನು ಸಂಸದ ಪ್ರತಾಪ್ ಸಿಂಹ ಹೇಳಿದ್ದಾರೆ.

## ಆಸ್ಪತ್ರೆ ಕಾವಲ್ ಗ್ರಾಪಂ ಅಧ್ಯಕ್ಷರಾಗಿ ಮಕ್ಸೂದ್ ಬಾನು ಆಯ್ಕೆ

ಹುಣಸೂರು, ಸೆ.14(ಕೆಕೆ)– ತಾಲೂಕಿನ ಆಸ್ಪತ್ರೆ ಕಾವಲ್ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಮಕ್ಸೂದ್ ಬಾನು ಆಯ್ಕೆಯಾಗಿದ್ದಾರೆ.

ಚುನಾವಣಾಧಿಕಾರಿ ಎಇಇ ಪ್ರಭಾಕರ್ ಸುದ್ದಿಗಾರರೊಂದಿಗೆ ಮಾತನಾಡುತ್ತ ಈ ವಿಷಯ ತಿಳಿಸಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷರ ಚುನಾವಣೆಗೆ ಇಬ್ಬರು ಅಭ್ಯರ್ಥಿ ನಾಮಪತ್ರ ಸಲ್ಲಿಸಿದ್ದು, ಒಟ್ಟು 24 ಸದಸ್ಯರಲ್ಲಿ ಜೆಡಿಎಸ್ ಬೆಂಬಲಿತ ಮಕ್ಸೂದ್ ಬಾನು 15 ಮತ ಪಡೆದು ಚುನಾಯಿತರಾದರೆ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ರಫಿಯಾ ಬಾನು 9 ಮತ ಗಳಿಸಿ ಪರಾಜಿತರಾದರು ಎಂದು ತಿಳಿಸಿದರು.

ವಿಜೇತರನ್ನು ಅಭಿನಂದಿಸಿ ಮಾತನಾಡಿದ ಎಂಸಿಡಿಸಿಸಿ ಬ್ಯಾಂಕ್‌ನ ಅಧ್ಯಕ್ಷ ಹರೀಶ್ ಗೌಡ, ನಮ್ಮ ಪಕ್ಷದ ಕಾರ್ಯಕರ್ತರು ನನ್ನ ಮೇಲೆ ಬಹಳ ಆಸೆ ಇಟ್ಟುಕೊಂಡಿದ್ದಾರೆ. ನಾನು ಮತ್ತು ನಮ್ಮ ತಂದೆ ಚರ್ಚೆ ಮಾಡಿ ನಮ್ಮ ಕಾರ್ಯಕರ್ತರ ಅಭಿಲಾಷೆ ತಕ್ಕಂತೆ ತೀರ್ಮಾನ ಕೈಗೊಳ್ಳುತ್ತೇವೆ. ಎಲ್ಲೂ ಕೂಡ ಅಭ್ಯರ್ಥಿ ಎಂದು ತೀರ್ಮಾನ ಕೈಗೊಂಡಿಲ್ಲ ಹಾಗೂ ಈ ಪಂಚಾಯಿತಿ ಕಾಂಗ್ರೆಸ್ ಬಿಗಿ ಹಿಡಿತದಲ್ಲಿದ್ದಂತಹ ಗ್ರಾಮ ಪಂಚಾಯಿತಿ, ಎಲ್ಲಾ ಸದಸ್ಯರು ಸೇರಿ ಬದಲಾವಣೆ ಮಾಡಬೇಕೆಂಬ ತೀರ್ಮಾನ ಮಾಡಿದ್ದಾರೆ ಎಂದು ತಿಳಿಸಿದರು.



ಈ ಸಂದರ್ಭದಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಎಸ್.ಟಿ.ಸೋಮಶೇಖರ್, ಉಪಾಧ್ಯಕ್ಷ ದೇವರಾಜ ಒಡೆಯರ್, ಕೆಎಂಎಫ್ ನಿರ್ದೇಶಕರಾದ ಕುಮಾರ್, ಟಿಎಪಿಎಂಎಸ್ ಅಧ್ಯಕ್ಷ ಕೆಂಪೇಗೌಡ, ಸದಸ್ಯರಾದ ಬಸವಲಿಂಗಯ್ಯ, ಮಾಜಿ ಜಿ.ಪಂ. ಸದಸ್ಯ ಸುರೇಂದ್ರ, ನಗರಸಭೆ ಸದಸ್ಯರಾದ ಸತೀಶ್ ಕುಮಾರ್, ಕೃಷ್ಣರಾಜ ಗುಪ್ತ ಶರವಣ, ಶ್ರೀನಿವಾಸ್, ಜೆಡಿಎಸ್ ಯುವ ಮುಖಂಡರಾದ ಸೈಯದ್ ಸಮೀವುಲ್ಲಾ, ಸತೀಶ್ ಪಾಪಣ್ಣ, ಸಿರಾಜ್ ಪಾಷ, ಮಧು ಆಚಾರ್ ಹಾಗೂ ಪ್ರಭಾಕರ್ ಹಾಜರಿದ್ದರು.

## ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಸಂಸ್ಕಾರ ಕಲಿಯಿರಿ



ಹನಗೋಡು, ಸೆ.14– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ ದೊರೆಯುತ್ತಿದ್ದು, ಇದರ ಯಶಸ್ವಿ ಅನುಷ್ಠಾನಕ್ಕೆ ವ್ಯಾಪಕ ಪ್ರಚಾರ ಮತ್ತು ಅನುಸರಣಾ ಕಾರ್ಯ ರೂಢಿಸಲಾಗುತ್ತಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಯೋಜನಾಧಿಕಾರಿ ಕೆ.ಪಿ. ರಮೇಶ್ ತಿಳಿಸಿದರು.

ಇಲ್ಲಿನ ಲಕ್ಷ್ಮಣತೀರ್ಥ ವಿದ್ಯಾಸಂಸ್ಥೆ ಪ್ರೌಢಶಾಲಾವರಣದಲ್ಲಿ ನಡೆದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಕುಟುಂಬದ ಕಣ್ಮಣಿಗಳಾಗಿದ್ದು, ಪೋಷಕರ ಅಭಿಲಾಷೆಯಂತೆ ವಿದ್ಯಾಭ್ಯಾಸದಲ್ಲಿ ತೊಡಗಿ ಪ್ರಗತಿ ಸಾಧಿಸಬೇಕು. ವಿದ್ಯಾರ್ಥಿಗಳು ತಮ್ಮ ಆರೋಗ್ಯ ಪಾಲನೆಗೆ ಹಲವು ಮೂಲ ತಿಳುವಳಿಕೆ ಗಳಿಸುವ ಅಗತ್ಯವಿದೆ. ಶಿಕ್ಷಣಕ್ಕೆ ಒತ್ತು ನೀಡದೆ ಉತ್ತಮ ಸಂಸ್ಕಾರ ಕಲಿತಲ್ಲಿ ಅಭಿವೃದ್ಧಿ ಹೊಂದಲು ಸಾಧ್ಯ ಎಂದರು.

ಮುಖ್ಯ ಶಿಕ್ಷಕ ನಟರಾಜ್ ಮಾತನಾಡಿ, ಮದ್ಯವ್ಯಸನ, ಗುಟ್ಕಾ, ಧೂಮಪಾನಗಳಿಂದ ಯುವ ಜನತೆ ಜೀವನ ಹಾಳಾಗುತ್ತಿದೆ. ಸಹವಾಸ ದೋಷ, ಆಕಸ್ಮಿಕ ಆಕರ್ಷಣೆಗಳ ಕಾರಣ ದುಶ್ಚಟ ಒಮ್ಮೆ ಆರಂಭವಾದರೆ ಬದುಕು ವಿನಾಶದ ಹಾದಿಯಲ್ಲಿ ಸಾಗುತ್ತದೆ. ಇದರಿಂದ ವೈಯಕ್ತಿಕ ಜೀವನದ ಜೊತೆ ಜೊತೆಗೆ ಸಮಾಜದ ಸ್ವಾಸ್ಥ್ಯ ಸಹ ಹಾಳಾಗುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಉತ್ತಮ ಕ್ರಿಯಾಶೀಲ ಹವ್ಯಾಸ ರೂಢಿಸಿಕೊಂಡು ಉತ್ತಮ ಸಮಾಜ ಕಟ್ಟಲು ದೃಢ ಸಂಕಲ್ಪ ಕೈಗೊಳ್ಳಬೇಕು ಎಂದರು.

ಸ್ವಾಸ್ಥ್ಯ ಸಂಕಲ್ಪದ ಸಂಪನ್ಮೂಲ ವ್ಯಕ್ತಿ ಸೋಮಶೇಖರ್ ಮಕ್ಕಳಿಗೆ ದುಶ್ಚಟಗಳಿಂದ ಆಗುವ ಅನಾಹುತಗಳ ಬಗ್ಗೆ ತಿಳಿಸಿದರು. ಈ ವೇಳೆ ಜಿಲ್ಲಾ ಜನಜಾಗೃತಿ ಸಮಿತಿ ಸದಸ್ಯ ದಾರಾ ಮಹೇಶ್, ಮೇಲ್ವಿಚಾರಕಿ ಪುಷ್ಪಲತಾ, ಮಹಿಳಾ ಸಂಘಗಳ ಒಕ್ಕೂಟದ ಅಧ್ಯಕ್ಷೆ ನಾಗಮ್ಮ, ಸೇವಾ ಪ್ರತಿನಿಧಿಗಳಾದ ರವಿ, ಗಣೇಶ ಹಾಗೂ ಮಹಿಳಾ ಸಂಘಗಳ ಪ್ರತಿನಿಧಿಗಳು ಹಾಜರಿದ್ದರು.



ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹೆಚ್.ಡಿ.ಕೋಟೆ ತಾಲೂಕಿನ ಸವ್ವೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ದುಶ್ಚಟಗಳ ಬಗ್ಗೆ ಅರಿವು ಮೂಡಿಸುವ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಚಾ.ನಂಜುಂಡ ಮೂರ್ತಿ, ಉಪನ್ಯಾಸಕಿ ಬೋರಮ್ಮ ಅಂಗಡಿ, ಶಿಕ್ಷಕ ಮಂಜುನಾಥ್, ಯೋಜನಾ ಮೇಲ್ವಿಚಾರಕಿ ಪವಿತ್ರ, ಸೇನಾ ಪ್ರತಿನಿಧಿ ಗೌರಮ್ಮ ಇನ್ನೂ ಮುಂತಾದವರು ಹಾಜರಿದ್ದರು.

## ನಂಜನಗೂಡು ತಾಲೂಕಲ್ಲಿ ಇಂದು ವಿದ್ಯುತ್ ವ್ಯತ್ಯಯ

ನಂಜನಗೂಡು, ಸೆ.14– ತಾಲ್ಲೂಕಿನ ಕಳಲೆ ಶಾಖಾ ವ್ಯಾಪ್ತಿಯ ಸಿಂಧುವಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಎರಡನೇ ತ್ರೈಮಾಸಿಕ ನಿರ್ವಹಣಾ ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ ಗುರುವಾರ (ಸೆ.15) ಬೆಳಗ್ಗೆ 8.30 ರಿಂದ ಸಂಜೆ 5 ಗಂಟೆಯವರೆಗೆ ತಾಲೂಕಿನ ಕೆಲವು ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ತಾಲೂಕಿನ ಪಾಳ್ಯ, ದೇವೀರಮ್ಮನಹಳ್ಳಿಹುಂಡಿ, ಕರಳಪುರ, ನಂಜುಂಡೇಶ್ವರ ಲೇಔಟ್, ಮಸಗೆ, ಕಳಲೆ ಗೇಟ್, ಕಳಲೆ, ಮುದ್ದಹಳ್ಳಿ, ಎಚಗುಂಡ್ಲ, ಕೆರೆ ಹುಂಡಿ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕಾರ ನೀಡುವಂತೆ ಸೆಸ್ಕಾಂನ ಕಾರ್ಯಪಾಲಕ ಎಂಜಿನಿಯರ್ ದೇವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಿ.ಟಿ. ರವಿ. ಸಿದ್ದರಾಮಯ್ಯನವರ ಕ್ಷಮೆಯಾಚಿಸಲು ತಾಲೂಕು ಕುರುಬ ಸಮಾಜದ ಅಧ್ಯಕ್ಷ ಆಗ್ರಹ

ಪಿರಿಯಾಪಟ್ಟಣ, ಸೆ.14– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಗ್ಗೆ ಹಗುರವಾಗಿ ಮಾತನಾಡಿರುವ ಬಿಜೆಪಿ ಶಾಸಕ ಸಿ.ಟಿ.ರವಿ ಅವರು ಕ್ಷಮೆಯಾಚಿಸುವಂತೆ ತಾಲೂಕು ಕುರುಬರ ಸಂಘದ ಅಧ್ಯಕ್ಷ ಹೆಚ್.ಡಿ. ಗಣೇಶ್ ಆಗ್ರಹಿಸಿದ್ದಾರೆ.



ಸಿದ್ದರಾಮಯ್ಯ ಕೇವಲ ಒಂದು ವರ್ಗಕ್ಕೆ ಮಾತ್ರ ಸೀಮಿತವಾಗದೆ ಸಮಾಜದ ಎಲ್ಲ ವರ್ಗಗಳ ಅಭಿವೃದ್ಧಿಗೆ ಶ್ರಮಿಸುತ್ತಿರುವ ಏಕೈಕ ರಾಜಕಾರಣಿ. ಅಂಥವರ ವಿರುದ್ಧ ಮಾಧ್ಯಮಗಳ ಮುಂದೆ ಬಿಟ್ಟಿ ಪ್ರಚಾರ ಗಿಟ್ಟಿಸಲು ಬಿಜೆಪಿ ಶಾಸಕ ಸಿ.ಟಿ. ರವಿ ಬಾಯಿ ಚಪಲಕ್ಕಾಗಿ ಬಳಸಿರುವ ಪದ ಕೇವಲ ಕಾಂಗ್ರೆಸ್ ಪಕ್ಷ ಮತ್ತು ಕುರುಬ ಜನಾಂಗಕ್ಕೆ ಮಾತ್ರವಲ್ಲದೆ ಪಕ್ಷಾತೀತವಾಗಿ ಹಾಗೂ ಜಾತ್ಯತೀತವಾಗಿ ಇಡೀ ರಾಜ್ಯದ ಜನತೆಯನ್ನು ಕೆರಳಿಸುವಂತಿದೆ ಎಂದು ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ತಿಳಿಸಿದರು.

ಇದು ನಿಜಕ್ಕೂ ಖಂಡನೀಯ. ಯಾರೇ ಆಗಲಿ ಒಬ್ಬರ ವಿರುದ್ಧ ಹೇಳಿಕೆಗಳನ್ನು ನೀಡುವಾಗ ಸಮಾಜದಲ್ಲಿ ಅವರ ಸ್ಥಾನ ಮಾನ ಅರಿತು ಮಾತನಾಡಬೇಕು. ಜಾತಿ ಹಾಗೂ ಪಕ್ಷಾಧಾರಿತ ಹೇಳಿಕೆಗಳನ್ನು ನೀಡಿ ಸಮಾಜದಲ್ಲಿ ಅಶಾಂತಿ ಸೃಷ್ಟಿಗೆ ಕಾರಣವಾಗಬಾರದು. ಸಿ.ಟಿ. ರವಿ ಹೇಳಿಕೆಯಿಂದ ಸಿದ್ದರಾಮಯ್ಯ ಅವರ ಅಸಂಖ್ಯಾತ ಅಭಿಮಾನಿಗಳಿಗೆ ನೋವಾಗಿದ್ದು ಈ ಕೂಡಲೇ ಅವರು ಬಹಿರಂಗವಾಗಿ ಸಿದ್ದರಾಮಯ್ಯನವರ ಕ್ಷಮೆಯಾಚಿಸಬೇಕೆಂದು ಅವರು ಆಗ್ರಹಿಸಿದ್ದಾರೆ.

## ಸ್ವಚ್ಛತೆ, ಸಮಾಜ ಸೇವಾ ಕಾರ್ಯಗಳ ಮೂಲಕ ಸೆ.17ರಂದು ಪ್ರಧಾನಿ ಮೋದಿ ಜನ್ಮದಿನ ಆಚರಣೆ

ನಂಜನಗೂಡು, ಸೆ.14– ಶನಿವಾರ (ಸೆ.17) ಸ್ವಚ್ಛತೆ ಹಾಗೂ ಸಮಾಜ ಸೇವಾ ಕಾರ್ಯಕ್ರಮಗಳ ಮೂಲಕ ಪ್ರಧಾನಿ ಮೋದಿ ಅವರ ಹುಟ್ಟುಹಬ್ಬವನ್ನು ಆಚರಿಸಲು ನಿರ್ಧರಿಸಲಾಗಿದೆ ಎಂದು ಬಿಜೆಪಿ ತಾಲ್ಲೂಕು ಅಧ್ಯಕ್ಷ ಪಿ.ಹೊರಳವಾಡಿ ಮಹೇಶ್ ಹೇಳಿದರು.

ನಗರದ ಆರ್.ಪಿ.ರಸ್ತೆಯ ಬಿಜೆಪಿ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸೆ.17 ರಂದು ಪ್ರಧಾನಿ ನರೇಂದ್ರ ಮೋದಿಯವರ ಹುಟ್ಟುಹಬ್ಬ, ಸೆ.25 ರಂದು ಪಂಡಿತ್ ದೀನ್ ದಯಾಳ್ ಉಪಾಧ್ಯಾಯರವರ ಹುಟ್ಟುಹಬ್ಬ, ಅ.2 ರಂದು ಗಾಂಧಿಜಯಂತಿ ಕಾರ್ಯಕ್ರಮವಿರುವುದರಿಂದ ಸೆ.17ರಿಂದ ಅ.2ರವರೆಗೆ ಸ್ವಚ್ಛತೆ ಹಾಗೂ ಸೇವಾ ಕಾರ್ಯಕ್ರಮಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸುವಂತೆ ಪಕ್ಷದ ವರಿಷ್ಠರ ಸೂಚನೆ ಇರುವುದರಿಂದ ಅಂದು ಕಾರ್ಯಕರ್ತರು ತಾಲೂಕಿನ ಎಲ್ಲಾ ಬೂತ್ ಮಟ್ಟದಲ್ಲಿ ಸಮುದಾಯ, ಆಸ್ಪತ್ರೆ, ಕಲ್ಯಾಣಿ, ನದಿ, ಸ್ವಚ್ಛತೆ, ದೇವಾಲಯಗಳ ಮುಂಭಾಗ ಸ್ವಚ್ಚತಾ ಕಾರ್ಯಗಳನ್ನು ನಡೆಸಬೇಕು ಎಂದರು.



ಕಿಸಾನ್ ಸಮ್ಮಾನ್ , ಉಜ್ವಲಾ ಯೋಜನೆಯಂತಹ ಕೇಂದ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳನ್ನು ಭೇಟಿ ಮಾಡಿ ಅವರಿಂದ ಪ್ರಧಾನಿ ಮೋದಿರವರಿಗೆ ಪ್ರಶಂಸನಾ ಪತ್ರಗಳನ್ನು ಕಳುಹಿಸಿ ಕೊಡುವ ಕಾರ್ಯಕ್ರಮವನ್ನು ನಡೆಸಬೇಕು, ಮಹಿಳಾ ಮೋರ್ಚಾದ ಪದಾಧಿಕಾರಿಗಳು ಅಂಗನವಾಡಿ ಕಾರ್ಯಕರ್ತರಿಗೆ ಸನ್ಮಾನ ಕಾರ್ಯಕ್ರಮ ರೂಪಿಸಿ ಮಕ್ಕಳಿಗೆ ಅಡುಗೆ ಬಡಿಸುವ ಮೂಲಕ ಸೇವಾ ಕಾರ್ಯವನ್ನು ನಡೆಸಬೇಕು ಎಂದು ಕರೆ ನೀಡಿದರು. ಅ.2 ರ ಗಾಂಧಿ ಜಯಂತಿ ದಿನದಂದು ಖಾದಿ ಬಟ್ಟೆಗೆ ಉತ್ತೇಜನ ನೀಡುವ ಸಲುವಾಗಿ ಎಲ್ಲ ಕಾರ್ಯಕರ್ತರು ಕಡ್ಡಾಯವಾಗಿ ಖಾದಿ ಬಟ್ಟೆಯನ್ನು ಖರೀದಿಸಿ ಖಾದಿ ಬಟ್ಟೆಯನ್ನು ಧರಿಸುವಂತೆ ವರಿಷ್ಠರು ಸೂಚಿಸಿರುವುದರಿಂದ ಪಕ್ಷದ ಎಲ್ಲ ಕಾರ್ಯಕರ್ತರು ಖಾದಿ ಭಂಡಾರಕ್ಕೆ ಭೇಟಿ ನೀಡಿ ಖಾದಿ ಬಟ್ಟೆ ಖರೀದಿಸಿ ಧರಿಸಿ ಎಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದೇವನೂರು ಪ್ರತಾಪ್ , ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ಹುಲ್ಲಹಳ್ಳಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಪರಶಿವಮೂರ್ತಿ, ಮುಖಂಡರಾದ ಗಂಗಾಧರ್, ಸಿದ್ಧರಾಜು, ದೇವಪ್ರಕಾಶ್, ಮಲ್ಲಿಕಾರ್ಜುನ್, ಸಣ್ಣಯ್ಯ, ಮಹಾದೇವಸ್ವಾಮಿ, ಬಸಪ್ಪ ಶಿವರುದ್ರ ಸೇರಿದಂತೆ ಇತರರಿದ್ದರು.

## 1.09 ಕೋಟಿ ರೂ. ವೆಚ್ಚದ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ತಿ.ನರಸೀಪುರ, ಸೆ.14– ಪುರಸಭೆ ವ್ಯಾಪ್ತಿಯ ಬೈರಾಪುರ ಗ್ರಾಮದಿಂದ ಹುಣಸೂರು ಗ್ರಾಮದ ರಸ್ತೆಗೆ ಸೇರುವ ಸಂಪರ್ಕ ರಸ್ತೆಯ ಅಭಿವೃದ್ಧಿ ಕಾಮಗಾರಿ ಉತ್ತಮ ಗುಣಮಟ್ಟದಿಂದ ನಿರ್ಮಾಣವಾಗಬೇಕು ಎಂದು ತಾ.ಪಂ.ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಪುರಸಭೆ ವ್ಯಾಪ್ತಿಯ ಬೈರಾಪುರ ಗ್ರಾಮದಲ್ಲಿ ನಗರೋತ್ಥಾನ ಯೋಜನೆಯಡಿ 1.09 ಕೋಟಿ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವ 1 ಕಿ.ಮೀ ಸಿಸಿ ರಸ್ತೆ ಹಾಗೂ 700 ಮೀಟರ್ ಚರಂಡಿ ಕಾಮಗಾರಿಗೆ ಪುರಸಭೆ ಮಾಜಿ ಉಪಾಧ್ಯಕ್ಷೆ ಪ್ರೇಮಾ ಅವರೊಂದಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಪುರಸಭೆಯ ವ್ಯಾಪ್ತಿಯ ಈ ಭಾಗದ ವಾರ್ಡಿನ ಅಭಿವೃದ್ಧಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕ ಯತೀಂದ್ರ ಸಿದ್ದರಾಮಯ್ಯ ಹೆಚ್ಚಿನ ಅನುದಾನ ನೀಡಿದ್ದಾರೆ. ಹಾಗಾಗಿ ಬಂದಿರುವ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಗುತ್ತಿಗೆದಾರರು ಉತ್ತಮ ಗುಣಮಟ್ಟದ ಕಾಮಗಾರಿ ಕೈಗೊಳ್ಳಬೇಕು. ಉತ್ತಮವಾದ ರಸ್ತೆ ಹಾಗೂ ಚರಂಡಿ ನಿರ್ಮಾಣವಾಗಬೇಕು ಎಂದರು.



ಕೆಲವರು ರಸ್ತೆ ಅಭಿವೃದ್ಧಿಗೆ ಅಡ್ಡಗಾಲು ಹಾಕಲು ಯತ್ನಿಸಿದರಾದರೂ ನಾನು ಮತ್ತು ಸದಸ್ಯೆ ಪ್ರೇಮಾ ಸರ್ಕಾರದಿಂದ ಅಭಿವೃದ್ಧಿ ಕಾಮಗಾರಿಗೆ ಹಣ ಬಿಡುಗಡೆ ಮಾಡಿಸಿದ್ದೇವೆ.ಹಣ ಬಿಡುಗಡೆ ಮಾಡಿಕೊಟ್ಟ ಸಿದ್ದರಾಮಯ್ಯ ಹಾಗೂ ಯತೀಂದ್ರರವರ ಸಹಕಾರಕ್ಕೆ ಗ್ರಾಮಸ್ಥರೆಲ್ಲರೂ ಕೃತಜ್ಞರಾಗಿರಬೇಕಿದೆ ಎಂದರು.

ರಸ್ತೆ ಹಾಗೂ ಚರಂಡಿ ಅಭಿವೃದ್ಧಿಯಲ್ಲದೇ ಸಿದ್ದರಾಮಯ್ಯ ರವರು ಗ್ರಾಮದಲ್ಲಿ ಬಾಬು ಜಗಜೀವನರಾಂ ಭವನ ನಿರ್ಮಾಣ ನಿರ್ಮಾಣಕ್ಕೆ 1.30 ಕೋಟಿ ರೂ.ಗಳ ಅನುದಾನ ನೀಡಿದ್ದು,ಕಾಮಗಾರಿ ಈಗಾಗಲೇ ಬಹುತೇಕ ಪೂರ್ಣಗೊಂಡಿದ್ದು ಮುಂದಿನ ಆರು ತಿಂಗಳೊಳಗೆ ಸಾರ್ವಜನಿಕ ಸೇವೆಗೆ ದೊರಕಿಸಿಕೊಡಲಾಗುತ್ತದೆ.ಸ್ಮಶಾನ,ಮಾರಿಗುಡಿ ಹಾಗೂ ಉಪ್ಪಿಟ್ಟಮ್ಮ ದೇವಸ್ಥಾನದ ಬಳಿ ಬೋರ್ ವೆಲ್ ಹಾಗೂ ಸ್ಮಶಾನದ ಬಳಿ ಶೆಡ್ ನಿರ್ಮಾಣ ಕಾರ್ಯ ಮಾಡಲಾಗಿದೆಯಲ್ಲದೇ ಗ್ರಾಮದಲ್ಲಿ ಹೈ ಮಾಸ್ಟ್ ದೀಪ ಹಾಗೂ ಬಾಬುಜಿ ಪುತ್ಥಳಿಗೆ ಆರ್ಚ್ ನಿರ್ಮಿಸಲಾಗುತ್ತದೆ ಎಂದು ತಿಳಿಸಿದರು.

ಪುರಸಭೆ ಮಾಜಿ ಅಧ್ಯಕ್ಷೆ ಪ್ರೇಮಾ ಮಾತನಾಡಿದರು. ಮುಖ್ಯಾಧಿಕಾರಿ ಬಸವರಾಜು, ಗ್ರಾಪಂ ಮಾಜಿ ಸದಸ್ಯ ದಿವಾಕರ್, ಮಲ್ಲಯ್ಯ ಗುತ್ತಿಗೆದಾರ ರಂಗಸ್ವಾಮಿ ರೆಡ್ಡಿ, ಶಂಕರ್, ಮಲ್ಲು, ಚಿನ್ನಪ್ಪ, ಕೂಸಣ್ಣ ಚಿಕ್ಕನಂಜಯ್ಯ, ಮಹದೇವಯ್ಯ, ಪ್ರಸನ್ನ, ಹರೀಶ್, ರಾಚಪ್ಪಾಜಿ, ನವೀನ್, ರಾಜೇಶ್, ಸ್ವಾಮಿ, ಜಗ್ಗು ಹಾಜರಿದ್ದರು.

## ಅಪರಿಚಿತ ವ್ಯಕ್ತಿ ಸಾವು

ಹುಣಸೂರು, ಸೆ.14– ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಕಳ್ಳಿಕೊಪ್ಪಲು ಗ್ರಾಮದ ಜಮೀನಿನ ಬದುವಿನಲ್ಲಿರುವ ಬೇವಿನಮರಕ್ಕೆ ಅಪರಿಚಿತ ವ್ಯಕ್ತಿಯೋರ್ವ ನೇಣುಹಾಕಿಕೊಂಡಿದ್ದು, ಈತನ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ.

ಗ್ರಾಮಸ್ಥರು ನೀಡಿದ ದೂರಿನ ಮೇರೆಗೆ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ವಾರಸುದಾರರು ಯಾರಾದರೂ ಇದ್ದರೆ ಕೂಡಲೇ ಮೈಸೂರು ಎಸ್‌ಪಿ ಕಚೇರಿ ಅಥವಾ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯನ್ನು ಸಂಪರ್ಕಿಸಬಹುದೆಂದು ಠಾಣೆಯ ಇನ್ಸ್‌ಪೆಕ್ಟರ್ ರವಿಯವರು ಕೋರಿದ್ದಾರೆ.

ಸುಮಾರು 50 ರಿಂದ 60 ವರ್ಷ, ಕೋಲು ಮುಖ, ಸಣಕಲು ಶರೀರ, ಎಣ್ಣೆಗೆಂಪು ಬಣ್ಣ, ಕಪ್ಪು ಬಿಳಿ ಮಿಶ್ರಿತ ಕೂದಲು, ಮೈ ಮೇಲೆ ಕಪ್ಪು ಬಣ್ಣದ ಸ್ವೆಟರ್, ತುಂಬು ತೋಳಿನ ಆಕಾಶ್ ನೀಲಿ ಬಣ್ಣದ ಅಂಗಿ, ಕಪ್ಪು ಬಣ್ಣದ ನಿಕ್ಕರ್, ನೀಲಿ ಬಣ್ಣದ ಲುಂಗಿ ಧರಿಸಿರುತ್ತಾರೆ.

## ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ಲಕ್ಕಿಮ್ಯಾನ್ (ಕ): ಬೆ.10.05ಕ್ಕೆ, ಮ.1.05ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ತಿರುಚಿಟ್ರಂಬಲಂ (ತ): ಮ.1.15ಕ್ಕೆ, ವೆಂದು ತನಿಂದದು ಕಾಡು (ತ): ಮ.3.50ಕ್ಕೆ, ಮಾನ್ಸೂನ್ ರಾಗ (ಕ): ರಾ.7.15ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 3 | ವೆಂದು ತನಿಂದದು ಕಾಡು (ತ): ಬೆ.9.55ಕ್ಕೆ, ಮ.1.15ಕ್ಕೆ, ಸಂ.6.50ಕ್ಕೆ, ರಾ.10.05ಕ್ಕೆ. |
| ಸ್ಕ್ರೀನ್ 4 | ಬ್ರಹ್ಮಾಸ್ತ್ರ (3ಡಿ) (ಹಿಂ): ಬೆ.9.50ಕ್ಕೆ, ಮ.12.55ಕ್ಕೆ, ಸಂ.4ಕ್ಕೆ, ರಾ.7.05ಕ್ಕೆ, ರಾ.10.10ಕ್ಕೆ. |

## ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ. |
| ಸ್ಕ್ರೀನ್ 2 | ಒಕೇ ಒಕ ಜೀವಿತಂ (ತೆ): ಬೆ.10ಕ್ಕೆ, ಕ್ಯಾಪ್ಟನ್ (ಇಂ): ಮ.1.10ಕ್ಕೆ, ಲಕ್ಕಿ ಮ್ಯಾನ್ (ಕ): ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 3 | ಲವ್ 360 (ಕ): ಬೆ.10.50ಕ್ಕೆ, ಲಕ್ಕಿಮ್ಯಾನ್ (ಕ): ಮ.1.30ಕ್ಕೆ, ಒಕೇ ಒಕ ಜೀವಿತಂ (ತೆ): ಸಂ.4.40ಕ್ಕೆ, ಕ್ಯಾಪ್ಟನ್ (ತ): ರಾ.7.50ಕ್ಕೆ, ಪಥೋಪಥಂ ನೋಟಂಡು (ಮ): ರಾ.10.20ಕ್ಕೆ. |
| ಸ್ಕ್ರೀನ್ 4 | ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.10.30ಕ್ಕೆ, ಸಂ.5.30ಕ್ಕೆ, ರಾ.9ಕ್ಕೆ, ಬ್ರಹ್ಮಾಸ್ತ್ರ (3ಡಿ)(ಕ): ಮ.2ಕ್ಕೆ, |

## ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಲೈಗರ್ (ತೆ): ಬೆ.10.45ಕ್ಕೆ, ಲವ್ 360 (ಕ): ಮ.1.30ಕ್ಕೆ, ಲೈಗರ್ (ಕ): ಸಂ.4.05ಕ್ಕೆ, ಧಮಾಕ (ಕ): ಸಂ.6.50ಕ್ಕೆ. |
| ಸ್ಕ್ರೀನ್ 2 | ಗಾಳಿಪಟ 2(ಕ): ಬೆ.10.30ಕ್ಕೆ, ಸೀತಾರಾಮಂ (ತೆ): ಮ.1.30ಕ್ಕೆ, ರಂಗ ರಂಗ ವೈಭವಂಗ (ತೆ): ಸಂ.4.45ಕ್ಕೆ, ಕೋಬ್ರಾ (ತ): ರಾ.9.15ಕ್ಕೆ. |
| ಸ್ಕ್ರೀನ್ 3 | ಕೋಬ್ರಾ (ತ): ಮ.1.30ಕ್ಕೆ, ಸಂ.6.50ಕ್ಕೆ. |
| ಸ್ಕ್ರೀನ್ 4 | ರಂಗ ರಂಗ ವೈಭವಂಗ (ತೆ): ಬೆ.10.30ಕ್ಕೆ, ಗಾಳಿಪಟ–2 (ಕ): ಮ.1.20ಕ್ಕೆ, ರಾ.7.15ಕ್ಕೆ, ಕೋಬ್ರಾ (ತ): ಸಂ.4.15ಕ್ಕೆ. |

## ಪಿವಿಆರ್ ಸಿನಿಮಾಸ್
PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲಕ್ಕಿಮ್ಯಾನ್ (ಕ): ಬೆ.9ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಬ್ರಹ್ಮಾಸ್ತ್ರ (ಕ): ಮ.2.55ಕ್ಕೆ, ಗಾಳಿಪಟ–2 (ಕ): ಮ.3.25ಕ್ಕೆ, ನಾನ್ ರೌಡಿ (ಕ): ಮ.11.45ಕ್ಕೆ, ಬ್ರಹ್ಮಾಸ್ತ್ರ (3ಡಿ) (ಹಿಂ): ಬೆ.8.30ಕ್ಕೆ, ಬೆ.11ಕ್ಕೆ, ಮ.12ಕ್ಕೆ, ಮ.2.30ಕ್ಕೆ, ಮ.3.30ಕ್ಕೆ, ಸಂ.6ಕ್ಕೆ, ರಾ.7ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಬ್ರಹ್ಮಾಸ್ತ್ರ (2ಡಿ) (ಹಿಂ): ಬೆ.11.30ಕ್ಕೆ, ಮ.3ಕ್ಕೆ, ರಾ.9.15ಕ್ಕೆ, ಕ್ಯಾಪ್ಟನ್ (ತ): ಮ.12.10ಕ್ಕೆ, ಸಂ.6.35ಕ್ಕೆ, ಒಕೇ ಒಕ ಜೀವಿತಂ (ತೆ): ಸಂ.6.30ಕ್ಕೆ, ರಾ.9.45ಕ್ಕೆ, ಪಥೋಪಥಂ ನೋಟಂಡು (ಮ): ಸಂ.6.25ಕ್ಕೆ, ಒರು ತೆಕ್ಕ (ಮ): ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಬ್ರಹ್ಮಾಸ್ತ್ರ (ಕ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ತಾಜ್ ಮಹಲ್–2 (ಕ) | 4 ಪ್ರದರ್ಶನಗಳು |
| **ಉಮಾ ಚಿತ್ರಮಂದಿರ** | (ದೂ: 2520009) |
| ಮಿಸ್ ಮಲ್ಲಿಗೆ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಬ್ರಹ್ಮಾಸ್ತ್ರ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಲಕ್ಕಿಮ್ಯಾನ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಲಕ್ಕಿಮ್ಯಾನ್ (ಕ) | 4 ಪ್ರದರ್ಶನಗಳು |
| **ರಾಜ್‌ಕಮಲ್** | |
| ಒಂದು ಕಂದಿತದು ಕಾದು (ತೆ) | 4 ಪ್ರದರ್ಶನಗಳು |
| **ಸಂಗಂ** | |
| ಬ್ರಹ್ಮಾಸ್ತ್ರ (ಹಿಂ) | 4 ಪ್ರದರ್ಶನಗಳು |
| **ಲಿಡೋ** | |
| ಕ್ಯಾಪ್ಟನ್ (ತ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಬ್ರಹ್ಮಾಸ್ತ್ರ (ಹಿಂ) | 4 ಪ್ರದರ್ಶನಗಳು |
| **ಸ್ಟರ್ಲಿಂಗ್** | |
| ಓ ಮೈ ಲವ್ (ಕ) | 4 ಪ್ರದರ್ಶನಗಳು |
| **ಸ್ಕೈಲೈನ್** | |
| ಅಂಜನ (ಕ) | 4 ಪ್ರದರ್ಶನಗಳು |
| **ಪ್ರಭಾ** | |
| ಗಾಳಿಪಟ–2 (ಕ) | 4 ಪ್ರದರ್ಶನಗಳು |

## ಮೈಸೂರು ರೇಸುಗಳು–2022

6ನೇ ದಿನ, ಗುರುವಾರ 15–9–2022

**ಇಂದಿನ ರೇಸಿಗೆ ನಮ್ಮ ಆಯ್ಕೆ**

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಎಸ್.ಹಾಜಿ ಮೆಮೋರಿಯಲ್ ಪ್ಲೇಟ್ ಡಿ2–1600 ಮೀ. ರೇಟೆಡ್ 20 ರಿಂದ 45. ಮ.2.00ಕ್ಕೆ
1. ಬಾರ್ನ್ ಕಿಂಗ್ 2. ಕಾನ್‌ಸ್ಪಿರಸಿ 3. ಆಂಟಿನೋರಿ

II. ಇಂದ್ರ ಧನುಷ್ ಪ್ಲೇಟ್–1100 ಮೀ. ರೇಟೆಡ್ 00 ರಿಂದ 25. (ಮೈಸೂರ್ ಬೇಸ್ಡ್ ಹಾರ್ಸ್). ಮ.2.30ಕ್ಕೆ
1. ವಿಜಯ ಮಿರಾಕಲ್ 2. ಗೋಲ್ಡ್ ಚಾರ್ಮ್ 3. ಲಕ್ಕಿಸನ್

III. ಎಂ.ಬಿ.ಅಪ್ಪಯ್ಯ ಮೆಮೋರಿಯಲ್ ಟ್ರೋಫಿ–1200 ಮೀ. ರೇಟೆಡ್ 40 ರಿಂದ 65. ಮ.3.00ಕ್ಕೆ
1 ಮ್ಯಾಜಿಕ್ ಸರ್ಕಲ್ 2. ಮಾರ್ಕ್ ಒನ್ 3. ಬಯೋಮೆಟ್ರಿಕ್

IV. ಬಿ.ಎ.ನಾಣಯ್ಯ ಮೆಮೋರಿಯಲ್ ಟ್ರೋಫಿ–1200 ಮೀ. ರೇಟೆಡ್ 40 ರಿಂದ 65. (ಮೈಸೂರ್ ಬೇಸ್ಡ್ ಹಾರ್ಸ್). ಮ.3.30ಕ್ಕೆ
1. ರಿತಾಮಿಕ್ 2. ಅಮೇಝೋನಿಯ 3. ಕ್ರಿಮ್‌ಸನ್ ಫೈರ್

V. ಸ್ಟೀವರ್ಡ್ಸ್ ಟ್ರೋಫಿ–1400 ಮೀ. ರೇಟೆಡ್ 60 ರಿಂದ 85. ಸಂ.4.00ಕ್ಕೆ
1. ಫಾರ್ ಎವರ್ ಟುಗೆದರ್ 2. ಕೆಪಬಲ್ 3.ಟ್ರೇಮಂಡಸ್

VI. ಎಸ್.ಹಾಜಿ ಮೆಮೋರಿಯಲ್ ಪ್ಲೇಟ್ ಡಿ1–1600 ಮೀ. ರೇಟೆಡ್ 20 ರಿಂದ 45. ಮ.4.30ಕ್ಕೆ
1. ಟ್ರೇವಲಿಯಸ್ 2. ಮಿಸ್ಟಿಕ್ ಮೌಂಟೈನ್ 3. ಒಕನ್ನಯ್ಯ

VII. ಹಾವೇರಿ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45 ಸಂ.5.00ಕ್ಕೆ
1. ಜಾನಿಬ್ರೇವೊ 2. ಪರ್‌ಫೆಕ್ಟ್ ಇಮಾಜಿನೇಷನ್ 3. ಬ್ರಹ್ಮಾಸ್ತ್ರಮ್

| | |
|---|---|
| ದಿನದ ಅತ್ಯುತ್ತಮ............ | : ಟ್ರೇವಲಿಯಸ್ |
| ಡಬ್ಬಲ್............ | : ಬಾರ್ನ್ ಕಿಂಗ್, ಫಾರ್ ಎವರ್ ಟುಗೆದರ್ |
| ಜಾಕ್‌ಪಾಟ್............ | : 3, 4, 5, 6 ಮತ್ತು 7 |
| I ಟ್ರಿಬಲ್............ | : 2, 3 ಮತ್ತು 4 |
| II ಟ್ರಿಬಲ್............ | : 5, 6 ಮತ್ತು 7 |
| ಎಕ್ಸ್‌ಆಕ್ಟ್............ | : 6 ಮತ್ತು 7 |

ಟಿಪ್ ಸ್ಟರ್ ಪಿಜಿಸಿ


ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮಾಜಿ ಅಧ್ಯಕ್ಷರು ಹಾಗೂ ಮುಖಂಡರಾದ
ಎನ್. ಅರುಣ್‌ಕುಮಾರ್‌ಗೌಡ
M.B.A.
ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು : ಪೈ॥ ಟಿ. ರವಿ ಮತ್ತು ಗೋಪಾಲಗೌಡ ಹಾಗೂ ಕಾರ್ಯಕರ್ತರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ
93437 06416